ಸಂಪುಟ: 13 Volume ಸಂಚಿಕೆ: 338 Issue ಪುಟಗಳು 08 Pages ಸೋಮವಾರ 02 ಮಾರ್ಚ್ 2026 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
ಈ ಜಗತ್ತೆನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದೇ ಇರುವ ವ್ಯಾಯಾಮ ಶಾಲೆ.
–ಸ್ವಾಮಿ ವಿವೇಕಾನಂದ

ಶಾಲೆಯಲ್ಲಿ ವಿಜ್ಞಾನ ಪ್ರದರ್ಶನ ಸಂಭ್ರಮ 6
ಸೌಹಾರ್ದತೆಯಿಂದ ಹೋಳಿ ಹಬ್ಬ ಆಚರಿಸಿ 7
ಇಫ್ತಾರ್: ಸೌಹಾರ್ದತೆಯೇ ಬದುಕಿನ ಯಶಸ್ಸು 8

## ಮಲ್ಲಮ್ಮ ನುಡಿ ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com



ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ವಿದ್ಯಾವತಿ ಸೋಮನಾಥಪ್ಪ ಅಷ್ಟೂರೆ ಅವರ ಮೊಮ್ಮಗ ಶಮಂತ ಶರಣು ಅವರ ದ್ವಿತೀಯ ವರ್ಷದ ಜನ್ಮದಿನದ ನಿಮಿತ್ತ ಅಷ್ಟೂರೆ ಪರಿವಾರದ ಸದಸ್ಯರು ಉಭಯ ಪೂಜ್ಯರನ್ನು ಸನ್ಮಾನಿಸಿ, ಗೌರವಿಸಿದರು.

## ಖಮೇನಿಗೂ ಅಲಿಪುರಕ್ಕೂ ನಂಟು



**ಚಿಕ್ಕಬಳ್ಳಾಪುರ:** ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಬಾಂಬ್ ದಾಳಿ ನಡೆಸಿ ಇರಾನ್‌ನ ಸುಪ್ರೀಮ್ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಮಾಡಿದೆ. ಇದರ ಬೆನ್ನಲ್ಲೇ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನ ಅಲಿಪುರ ಗ್ರಾಮದಲ್ಲಿ ಶೋಕ ಮಡುಗಟ್ಟಿದೆ. ಹತ್ಯೆ ವಿಚಾರ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಸ್ವಯಂ ಪ್ರೇರಿತವಾಗಿ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ ಶೋಕಾಚರಣೆ ನಡೆಸಿದರು. ಅಲಿಪುರವನ್ನು 'ಮಿನಿ ಇರಾನ್' ಎಂದೇ ಕರೆಯಲಾಗುತ್ತದೆ. ಅದಕ್ಕೆ ಕಾರಣ, 1986ರಲ್ಲಿ ಅಯತೊಲ್ಲಾ ಅಲಿ ಖಮೇನಿ ಈ ಗ್ರಾಮಕ್ಕೆ ಬಂದಿದ್ದರು. ಈ ಗ್ರಾಮದಲ್ಲಿ ಅತೀ ಹೆಚ್ಚು ಶಿಯಾ ಮುಸ್ಲಿಮರಿದ್ದಾರೆ. ಖಮೇನಿ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸಮುದಾಯದವರು ಪ್ರಾರ್ಥಿಸುತ್ತಿದ್ದಾರೆ.

## ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು

- ಮಲ್ಲಮ್ಮ ನುಡಿ ವಾರ್ತೆ ನೆಲಮಂಗಲ



ಸಾಮಾಜಿಕ ನ್ಯಾಯ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಲಭಿಸಬೇಕು ಎಂಬುದು ಸಂವಿಧಾನದ ಆಶಯವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಪ್ರತಿಪಾದಿಸಿದ್ದಾರೆ.

ನೆಲಮಂಗಲದ ಅರಳೆಪೇಟೆಯ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ನಡೆದ ಆದಿ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಹಾಗೂ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವದಲ್ಲಿ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಸಮಾಜದ ಬಡವರನ್ನೂ ಗುರುತಿಸಿ, ಆರ್ಥಿಕವಾಗಿ ಮೇಲೆತ್ತುವ ಕಾರ್ಯವನ್ನು ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮದ ವತಿಯಿಂದ ಸರ್ಕಾರ ಮಾಡುತ್ತಿದೆ ಎಂದಿದ್ದಾರೆ.

## ಆರ್ಥಿಕ ಶಕ್ತಿ ನೀಡಿದ್ದ ಬಿಎಸ್ ಯಡಿಯೂರಪ್ಪ

- ಮಲ್ಲಮ್ಮ ನುಡಿ ವಾರ್ತೆ ಬಾಳೆಹೊನ್ನೂರು



ವೀರಶೈವ ಲಿಂಗಾಯತ ಸಮಾಜ ಜಾಗೃತಿಯಾಗಬೇಕಾದ ಅಗತ್ಯವಿದೆ, ಕೆಲವು ದುಷ್ಟ ಶಕ್ತಿಗಳು ಸಮಾಜವನ್ನು ಒಡೆದು ಆಳುವ ನೀತಿಯನ್ನ ಅನುಸರಿಸುತ್ತಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ ವಿಜಯೇಂದ್ರ ಹೇಳಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾ ರಥೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಿ.ಎಸ್ ಯಡಿಯೂರಪ್ಪನವರು ಆಗಿದ್ದಾಗ ವೀರಶೈವ ಲಿಂಗಾಯತ ಮಠಗಳ ಜೊತೆ, ರಾಜ್ಯದಲ್ಲಿರುವ ಎಲ್ಲಾ ಸಮಾಜದ ಮಠಮಾನ್ಯಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿದ್ದರು. ಮಠಮಾನ್ಯಗಳು ಸಮಾಜದ ಮಕ್ಕಳಿಗೆ ಅಕ್ಷರದಾಸೋಹ, ಅನ್ನದಾಸೋಹ, ಜ್ಞಾನ ದಾಸೋಹ ನೀಡುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿವೆ ಎಂದು ಶ್ಲಾಘಿಸಿದ್ದಾರೆ.

# ಇಸ್ರೇಲ್ ಇರಾನ್ ವಾರ್..!

### ಸುಪ್ರೀಂ ಆಯತೊಲ್ಲಾ ಅಲಿ ಖಮೇನಿ ಹತ | ಅಮೆರಿಕ ಯುದ್ಧೋನ್ಮಾದ | ಇರಾನ್ ಪ್ರತೀಕಾರದ ಘೋಷಣೆ | ಅಪಾರ ಸಾವು

- ಮಲ್ಲಮ್ಮ ನುಡಿ ವಾರ್ತೆ ಟೆಹ್ರಾನ್

ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡುವೆ ಭೀಕರ ಯುದ್ಧ ಶುರುವಾಗಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ, ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತರಾಗಿದ್ದಾರೆ. ದಶಕಗಳಿಂದ ಅಮೆರಿಕ ಮತ್ತು ಇಸ್ರೇಲ್‌ಗೆ ಸಿಂಹಸ್ವಪ್ನವಾಗಿದ್ದ ಇರಾನ್ನ ಸುಪ್ರೀಂ ಲೀಡರ್ ಆಯತೊಲ್ಲಾ ಅಲಿ ಖಮೇನಿ ಫಿನೀಶ್ ಆಗಿದೆ.

**ಅಧಿಕೃತ ಘೋಷಣೆ:** ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ಭೀಕರ, ಕರಾರುವಕ್ಕಾದ ವಾಯುದಾಳಿಗೆ 86 ವರ್ಷದ ಇರಾನ್ನ ಸರ್ವೋಚ್ಚ ನಾಯಕ ಬಲಿಯಾಗಿದ್ದಾನೆ ಎಂದು ಸ್ವತಃ ಇರಾನ್ ಸರ್ಕಾರವೇ ಅಧಿಕೃತವಾಗಿ ಘೋಷಿಸಿದೆ. ಖಮೇನಿ ಸಾವು ದೃಢಪಡಿಸಿರುವ ಇರಾನ್ ಸರ್ಕಾರಿ ಮಾಧ್ಯಮ, ದೇಶ ರಕ್ಷಣೆಯಲ್ಲಿ ನಮ್ಮ ಕ್ರಾಂತಿಕಾರಿ ನಾಯಕ ಹುತಾತ್ಮರಾಗಿದ್ದಾರೆ ಎಂದು ಸ್ಪಷ್ಟಪಡಿಸಿದೆ.

**ವೈರತ್ವದಲ್ಲೇ ಜೀವನ:** ತಮ್ಮ ಆಡಳಿತದ ಬಹುಭಾಗವನ್ನು ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ವೈರತ್ವದಲ್ಲೇ ಕಳೆದ ಆಯತೊಲ್ಲಾ, ಕಡೆಗೆ ಆ ವೈರತ್ವಕ್ಕಾಗಿಯೇ ಜೀವ ತೆತ್ತಿದ್ದಾರೆ. ಅಮೆರಿಕ, ಇಸ್ರೇಲ್ ಸೇರಿದಂತೆ ಅನೇಕ ರಾಷ್ಟ್ರಗಳು ಇದು ಇರಾನಿನ್ನರ ಪಾಲಿನ "ಸ್ವಾತಂತ್ರ್ಯ" ಎಂದು ಬಣ್ಣಿಸಿದರೆ, ಕೆಲವು ದೇಶಗಳು ಇದನ್ನು "ಇರಾನ್ ಜನತೆಯ ಪಾಲಿನ ಕರಾಳ ದಿನ" ಎಂದು ಶೋಕಿಸಿವೆ.



### ಜಗತ್ತಿನ ಏಕೈಕ ಶಿಯಾ ದೇಶ

ಸುನ್ನಿ ಮುಸ್ಲಿಂ ದೇಶಗಳಿಂದಲೇ ಸುತ್ತುವರೆದಿದ್ದ ಇರಾನ್, ಜಗತ್ತಿನ ಏಕೈಕ ಶಿಯಾ ಮುಸ್ಲಿಂ ದೇಶವಾಗಿದೆ. ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದಿದ್ದ ಆಯತೊಲ್ಲಾ ಅಲಿ ಖಮೇನಿ, ದೇಶವನ್ನು ಖಟ್ಟರ್ ಇಸ್ಲಾಮಿಕ್ ರಾಷ್ಟ್ರವನ್ನಾಗಿ ಪರಿವರ್ತಿಸಿದ್ದರು, ಖಮೇನಿ ಆಡಳಿತದ ಕಠಿಣ ಇಸ್ಲಾಮಿಕ್ ಕಾನೂನುಗಳ ವಿರುದ್ಧ ಅನೇಕ ಬಾರಿ ಇರಾನ್ನಲ್ಲಿ ಆಂತರಿಕ ದಂಗೆಗಳು ಭುಗಿಲೆದ್ದಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

### ಜೈಶಂಕರ್ ಒತೆ ಎಚ್ಡಿಕೆ ಚರ್ಚೆ

ಯುದ್ಧದಿಂದಾಗಿ ದುಬೈ ಸೇರಿದಂತೆ ವಿವಿಧ ವಿದೇಶಿ ವಿಮಾನ ನಿಲ್ದಾಣದಲ್ಲಿ ಸಿಲುಕಿರುವ ಕನ್ನಡಿಗರ ಸುರಕ್ಷತೆ ಕುರಿತಂತೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರೊಂದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಮಾಲೋಚನೆ ನಡೆಸಿದ್ದಾರೆ. ಅಲ್ಲಿರುವ ಕನ್ನಡಿಗರು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ವಿದೇಶಾಂಗ ಸಚಿವರಲ್ಲಿ ಕುಮಾರಸ್ವಾಮಿ ಮನವಿ ಮಾಡಿದ್ದು, ಅವರು ಸ್ಪಂದಿಸಿದ್ದಾರೆ ಎನ್ನಲಾಗಿದೆ.

### ಚಿನ್ನ ಬೆಳ್ಳಿ ದರ ಹೆಚ್ಚಳ

ಅಮೆರಿಕ–ಇರಾನ್ ಸಂಘರ್ಷದಿಂದ ತೈಲಸರಬರಾಜಿನಲ್ಲಿ ಏರುಪೇರಾಗುವ ಆತಂಕ ಎದುರಾಗಿದೆ. ಹೊರ್ಮುಜ್ ಜಲಸಂಧಿ ಬಂದ್ ಆಗಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲ ಸಾಗಣೆಗೆ ಅಡ್ಡಿಯಾಗಿದೆ. ಯುದ್ಧದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಅಸ್ಥಿರತೆ ಹೆಚ್ಚಾಗಿದ್ದು, ಚಿನ್ನ ಮತ್ತು ಬೆಳ್ಳಿ ಬೆಲೆಗಳು ಭರ್ಜರಿ ಏರಿಕೆ ಕಂಡಿವೆ.

### ಖಮೇನಿ ಕುಟುಂಬ ನಾಶ

ಅಮೆರಿಕ ಮತ್ತು ಇಸ್ರೇಲ್ ಜಂಟಿಕಾರ್ಯಾಚರಣೆಯಲ್ಲಿ ಆಯತೊಲ್ಲಾ ಅಲಿ ಖಮೇನಿ, ಅವರ ಪುತ್ರಿ, ಅಳಿಯ ಮತ್ತು ಮೊಮ್ಮಗಳು ಹತರಾಗಿದ್ದಾರೆ ಎಂದು ಇರಾನ್ ಪ್ರಕಟಿಸಿದೆ. ಜೊತೆಗೆ ಶಾಲೆಯ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು, 51 ವಿದ್ಯಾರ್ಥಿನಿಯರು ಸಾವನ್ನಪ್ಪಿದ್ದಾರೆ.

### ಕನ್ನಡಿಗರ ಕರೆತರುವ ಭರವಸೆ

ಯುದ್ಧದ ಹಿನ್ನೆಲೆ ಇರಾನ್ ವಾಯುಪ್ರದೇಶ ತಾತ್ಕಾಲಿಕವಾಗಿ ಮುಚ್ಚಿದೆ. ಗಲ್ಫ್ ರಾಷ್ಟ್ರಗಳಲ್ಲಿ ಅನೇಕರ ಕನ್ನಡಿಗರು ಸಿಲುಕಿಕೊಂಡಿದ್ದಾರೆ. ಪ್ರವಾಸಕ್ಕೆಂದು ತೆರಳಿದ್ದ ಬಳ್ಳಾರಿ ಮೂಲದ 35 ಪ್ರವಾಸಿಗರು, ಬಿಗ್ ಬಾಸ್ ಮಾಜಿ ಸ್ಪರ್ಧಿ ಡ್ರೋನ್ ಪ್ರತಾಪ್, ಎಂಎಲ್ಸಿ ಭೋಜೇಗೌಡ, ಶಾಸಕ ಭರತ್ ರೆಡ್ಡಿ ಸೇರಿದಂತೆ 150ಕ್ಕೂ ಹೆಚ್ಚು ಕನ್ನಡಿಗರು ದುಬೈನಲ್ಲಿ ಸಿಲುಕಿದ್ದಾರೆ. ಈ ಕುರಿತು ಸಿಎಂ ಜೊತೆ ಮಾತನಾಡಿರುವ ಶಾಸಕ ಬಿ.ನಾಗೇಂದ್ರ, ಘಟನೆಯ ಬಗ್ಗೆ ಸಿಎಂಗೆ ವಿವರಿಸಿದ್ದಾರೆ. ಅವರನ್ನೆಲ್ಲಾ ಸುರಕ್ಷಿತವಾಗಿ ಕರೆಸುವುದಾಗಿ ಸಿಎಂ ಭರವಸೆ ನೀಡಿದ್ದಾರೆ.

## ಹಣೆಯಲ್ಲಿ ಬರೆದಿದ್ರೆ ಮುಖ್ಯಮಂತ್ರಿ ಆಗ್ತಾರೆ..!

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ನನ್ನ ಅಣ್ಣನ ಹಣಬರಹದಲ್ಲಿದ್ದರೆ ಮುಖ್ಯಮಂತ್ರಿ ಆಗುತ್ತಾರೆ, ಕಾಯಬೇಕು, ತಾಳ್ಮೆ, ಸಹನೆ ಮುಖ್ಯ ಎಂದು ಅವರ ಸೋದರ ಮಾಜಿ ಸಂಸದ ಡಿ ಕೆ ಸುರೇಶ್ ಹೇಳಿದ್ದಾರೆ.

ವಿಧಿಯಲ್ಲಿ ಇಲ್ಲದಿದ್ದರೆ ಯಾರೂ ಏನೂ ಮಾಡಲಾಗದು. ತ್ಯಜಿಸಲು ಮೊದಲು ಕೈಯಲ್ಲಿ ಆಯುಧ ಇರಬೇಕಲ್ಲವೇ? ಇಲ್ಲಿ ಯಾವುದೇ ಆಯುಧವೇ ಇಲ್ಲ. ಇದು ರಾಜಕೀಯ; ಇಲ್ಲಿ ಆಯುಧಗಳ ಅವಶ್ಯಕತೆ ಇಲ್ಲ ಎಂದಿದ್ದಾರೆ. ಡಿಕೆ ಶಿವಕುಮಾರ್ ಬೆಂಬಲಿಗ ಶಾಸಕರು ನಾಯಕತ್ವ ಬದಲಾವಣೆ ಕುರಿತು ಸ್ಪಷ್ಟನೆ ಪಡೆಯಲು ಪಕ್ಷದ ಹೈಕಮಾಂಡ್ ನ್ನು ಭೇಟಿಯಾಗಲು ದೆಹಲಿ ಪ್ರವಾಸ ಯೋಜಿಸಿರುವ ಕುರಿತು ತಮಗೆ ಮಾಹಿತಿ ಇಲ್ಲ. ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಹುಟ್ಟುಹಬ್ಬದ ಮುನ್ನಾದಿನ ಡಿ ಕೆ ಶಿವಕುಮಾರ್ ಬೆಂಬಲಿಗ ಶಾಸಕರು ಆಯೋಜಿಸಿದ್ದ ಔತಣಕೂಟದ ಬಗ್ಗೆ ತಮಗೆ ತಿಳಿದಿಲ್ಲ ಎಂದು ವಿವರಿಸಿದ್ದಾರೆ.

## ಡಿಕೆಶಿಗೆ ಫೆವಿಕಾಲ್ ವಿದ್ಯೆ ಗೊತ್ತಿಲ್ಲ..!

- ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ಅಧಿಕಾರಹಸ್ತಾಂತರ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ ಇತಿಶ್ರೀ ಹಾಡುವ ಯೋಗ್ಯತೆ ಕಾಂಗ್ರೆಸ್ ಹೈಕಮಾಂಡ್‌ಗೆ ಇಲ್ಲ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಟೀಕಿಸಿದ್ದಾರೆ. ಮಂಡ್ಯದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ಹೀಗೆಯೇ ಮುಂದಿನ 2 ವರ್ಷ ಮುಂದೂಡುವ ಸ್ಥಿತಿಯಲ್ಲಿ ಅದು ಇದೆ. ಸಿದ್ದರಾಮಯ್ಯ ಯಾವಾಗಲೂ ಫೆವಿಕಾಲ್ ತರ ತಮ್ಮ ಸಿಎಂ ಕುರ್ಚಿ ಭದ್ರಪಡಿಸಿಕೊಂಡು ಇರುತ್ತಾರೆ. ಕುರ್ಚಿಗೆ ಫೆವಿಕಾಲ್ ಹಾಕಿ ಅಂಟಿಸಿಕೊಳ್ಳುವ ವಿದ್ಯೆ ಅವರಿಗೆ ಚೆನ್ನಾಗಿ ಗೊತ್ತಿದೆ. ಡಿ.ಕೆ ಶಿಗೆ ಅದೆಲ್ಲ ಗೊತ್ತಿಲ್ಲ, ಹೊಡೆದು ಕಿತ್ತುಕೊಳ್ಳುವ ಕಾಲ ಇದಲ್ಲ, ತಲೆ ಬಳಸಬೇಕಾದ ಕಾಲವಿದು ಎಂದು ಟಾಂಗ್ ನೀಡಿದ್ದಾರೆ. ಸಿದ್ದರಾಮಯ್ಯ 5 ವರ್ಷ ಕುರ್ಚಿ ಬಿಟ್ಟುಕೊಡುವುದಿಲ್ಲ, ಡಿ.ಕೆ ಶಿವಕುಮಾರ್‌ಗೆ ಪಂಗನಾಮ ಹಾಕುವುದಂತೂ ಗ್ಯಾರಂಟಿ, ರಾಜ್ಯ ಸರ್ಕಾರದ ಆಡಳಿತ ಇವರ ಕುರ್ಚಿ ಕಾಳಗದಿಂದಾಗಿ ಸತ್ತು ಹೋಗಿದೆ, ಆ ಹೆಣವನ್ನು ಯಾರು ಯಾವ ಭಾಗದಿಂದಲಾದರೂ ಹೊರಲಿ, ಅದು ನಮಗೆ ಬೇಕಿಲ್ಲ ಎಂದು ನುಡಿದಿದ್ದಾರೆ.

## ವಿಶ್ವಕ್ಕೆ ಜ್ಞಾನದ ಬೆಳಕು ತೋರಿದ ಜಗದ್ಗುರು

- ಮಲ್ಲಮ್ಮ ನುಡಿ ವಾರ್ತೆ ಬೀದರ್



ಜಗತ್ತಿಗೆ ಜ್ಞಾನದ ಬೆಳಕು ಹರಿಸಿದವರು ಜಗದ್ಗುರು ರೇಣುಕಾಚಾರ್ಯರು ಎಂದು ಮೇಹಕರ್, ತಡೋಳಾ ಹಾಗೂ ಡೋಣಗಾಪುರ ಶ್ರೀಮಠಗಳ ಅಧಿಪತಿ ಪೂಜ್ಯ ರಾಜೇಶ್ವರ ಶಿವಾಚಾರ್ಯರು ಪ್ರತಿಪಾದಿಸಿದ್ದಾರೆ.

ನಗರದ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರ ರಂಗಮಠದಲ್ಲಿ ಜಿಲ್ಲಾಡಳಿತ, ಜಿ.ಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಸಮಿತಿಗಳ ಸಹಯೋಗದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ, ರೇಣುಕಾಚರ್ಯರು, 1400 ವರ್ಷಗಳ ಕಾಲ ಬದುಕಿದ್ದರು. ವಿಜ್ಞಾನದ ಪರಿಕಲ್ಪನೆ 11ನೇ ಶತಮಾನದಲ್ಲಿತ್ತು. ಅವರ ಪ್ರಕಾರ ಧರ್ಮ ಎಂದರೆ ಸತ್ಯ, ನ್ಯಾಯ, ಪ್ರಾಮಾಣಿಕತೆ, ಪರಸ್ಪರ ಸೌಹಾರ್ದತೆಯಿಂದ ಬದುಕಿ ಇತರರಿಗೂ ಬದುಕಲು ಬಿಡುವುದಾಗಿತ್ತು ಎಂದು ತಿಳಿಸಿದ್ದಾರೆ.

ಸಮಾರಂಭ ಉದ್ಘಾಟಿಸಿದ ಜಗದ್ಗುರು ರೇಣಿಕಾಚಾರ್ಯ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಸಚಿವ ರಾಜಶೇಖರ.ಬಿ.ಪಾಟೀಲ ಮಾತನಾಡಿ, ಇಂದು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುವುದು ಬಹಳ ಮುಖ್ಯ. ಪಾಶ್ಚಿಮಾತ್ಯ ರಾಷ್ಟ್ರಗಳ ಮುಖ ಮಾಡಿದ ನಮ್ಮ ಮಕ್ಕಳು ತಮ್ಮ ಪೋಷಕರಿಗೆ ವೃದ್ಧಾಶ್ರಮಕ್ಕೆ ತಳ್ಳುತ್ತಿರುವುದು ದುರಾದೃಷ್ಟಕರ ಎಂದು ವಿಷಾದಿಸಿದ್ದಾರೆ.

ಭ್ರಷ್ಟಾಚಾರ ದಿನೆ ದಿನೆ ಹೆಚ್ಚಾಗಿ ಪ್ರಾಮಾಣಿಕ ಅಭಿವೃದ್ಧಿ ಮರೀಚಿಕೆಯಾಗುತ್ತಿದೆ. ತೋರಿಕೆಯ ವಾತಾವರಣ ಎಲ್ಲಡೆ ವ್ಯಾಪಿಸುತ್ತಿದ್ದು, ಭಾರತದ ಅತ್ಯಂತ ಬಲಿಷ್ಟ ಸಮಾಜವಾಗಿರುವ ವೀರಶೈವ ಸಮಾಜ ಒಂದಾಗಬೇಕೆಂದು ಪಾಟೀಲ ಕರೆ ನೀಡಿದ್ದಾರೆ.

ಹುಡಗಿಯ ಶ್ರೀ ವೀರುಪಾಕ್ಷ ಶಿವಾಚಾರ್ಯರು, ಜೈ ಹವಾ ಮಲ್ಲಿನಾಥ ಮಹಾರಾಜರು, ಸದಲಾಪುರ ಶ್ರೀಗಳು, ಹಳ್ಳಿಖೇಡ ಶ್ರೀಗಳು, ಡಾಕುಳಗಿ ಶ್ರೀಗಳು, ಲಾಡಗೇರಿ ಶ್ರೀಗಳು, ಚಾಂಬೋಳ ಶ್ರೀಗಳು, ಖಟಕ ಚಿಂಚೋಳಿ ಶ್ರೀಗಳು, ಯದಲಾಪುರ ಶ್ರೀಗಳು, ಹೆಡಗಾಪುರ ಶ್ರೀಗಳು, ಮಳಚಾಪುರ ಶ್ರೀಗಳು ವೇದಿಕೆ ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಬೀದರ್ ಮಹಾನಗರ ಪಾಲಿಕೆ ಸದಸ್ಯ ಡಿಗಂಬರ ಮಡಿವಾಳ, ಸಮಿತಿಯ ಪದಾಧಿಕಾರಿಗಳಾದ ಡಾ.ರಜನೀಶ ವಾಲಿ, ಮಲ್ಲಿಕಾರ್ಜುನ ಮಾಶೆಟ್ಟಿ, ರೇವಣಸಿದ್ದಯ್ಯ ಸ್ವಾಮಿ ಹಾಗೂ ಇತರರಿದ್ದರು. ಸಮಿತಿಯ ಕಾಯಾಧ್ಯಕ್ಷ ಸಿದ್ರಾಮಯ್ಯ ಸ್ವಾಮಿ ಸರ್ವರನ್ನು ಸ್ವಾಗತಿಸಿ, ದೇವಿದಾಸ ಜೋಷಿ ಕಾರ್ಯಕ್ರಮ ನಿರೂಪಿಸಿ, ಶ್ರೀಕಾಂತ ಸ್ವಾಮಿ ಸೋಲಪುರ ವಂದಿಸಿದ್ದಾರೆ.


## ದುಬೈನಲ್ಲಿ ಸಿಲುಕಿದ ವೈದ್ಯ ದಂಪತಿ

- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಇರಾನ್– ಇಸ್ರೇಲ್ ನಡುವೆ ಯುದ್ಧ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ದುಬೈ ಪ್ರವಾಸಕ್ಕೆ ತೆರಳಿದ ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕೆ.ಶಿವರಾಜ ಮತ್ತು ಅವರ ಪತ್ನಿ ಜ್ಯೋತಿ ಸೇರಿ ಕರ್ನಾಟಕ ರಾಜ್ಯದ 70 ಜನ ದುಬೈನಲ್ಲಿ ಸಿಲು ಟಕಿದ್ದಾರೆ.

ವಿಜಯರತ್ನ ಇಂಟರ್ ನ್ಯಾಷನಲ್ ಅವಾರ್ಡ್‌ಗೆ ಭಾಜನರಾದ ಹಿನ್ನೆಲೆಯಲ್ಲಿ ಅದನ್ನು ಸ್ವೀಕರಿಸುವುದಕ್ಕಾಗಿ ಡಾ. ಕೆ. ಶಿವರಾಜ ಅವರು ತಮ್ಮ ಪತ್ನಿ ಜೊತೆಗೆ ದುಬೈ ಪ್ರವಾಸಕ್ಕೆಂದು ಫೆ.24 ರಂದು ಬೆಂಗಳೂರಿನಿಂದ ತೆರಳಿದ್ದರು. ಫೆ.28ಕ್ಕೆ ವಾಪಸ್ ಆಗಬೇಕಿತ್ತು.

ಆದರೆ ಇದರ ನಡುವೆ ಯುದ್ಧದ ಕಾರ್ಮೋಡ ಸೃಷ್ಟಿಯಾದ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ಭಾರತಕ್ಕೆ ಬರಲು ಆಗದೆ ದುಬೈನಲ್ಲಿಯೇ ಸಿಲುಕಿಕೊಂಡಿದ್ದಾರೆ. ಡಾ.ಕೆ. ಶಿವರಾಜ ಸೇರಿ ರಾಜ್ಯದ 70 ಜನರು ಸದ್ಯ ದುಬೈನ ಖಾಸಗಿ ಹೋಟೆಲ್ ಒಂದರಲ್ಲಿ ಸುರಕ್ಷಿತವಾಗಿದ್ದು, ಶೀಘ್ರ ಭಾರತಕ್ಕೆ ಕರೆ ತರುವಂತೆ ಮನವಿ ಮಾಡಿದ್ದಾರೆ. ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ವೈದ್ಯ ಡಾ. ಕೆ ಶಿವರಾಜ್ ಅವರು ಅದೇ ಹೋಟೆಲ್ಲಿನಲ್ಲಿ ಇರುವುದರಿಂದ ಸಿಂಧನೂರಿನ ಅವರ ಕುಟುಂಬದವರು ಮತ್ತು ಅಭಿಮಾನಿಗಳು ಆತಂಕ ಪಡುವಂತಾಗಿದೆ.



### ಗಣ್ಯರಿಗೆ ಸಂಪರ್ಕ, ದೂತವಾಸಕ್ಕೂ ಮಾಹಿತಿ

ಮಾಜಿ ಸಚಿವ ವೆಂಕಟರಾವ್ ನಾಡಗೌಡ ಮತ್ತು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಅವರನ್ನು ಮೊಬೈಲ್ ಕರೆ ಮೂಲಕ ಸಂಪರ್ಕಿಸಿದ್ದೆ. ಅವರು ಸರ್ಕಾರದ ಗಮನ ಸೆಳೆದು ಭಾರತ ದೇಶಕ್ಕೆ ತರಲು ಪ್ರಯತ್ನಿಸಲಾಗುವುದು ಎಂದಿದ್ದಾರೆ. ರಾಯಚೂರು ಸಂಸದ ಕುಮಾರ್ ನಾಯಕ್ ಅವರನ್ನು ಸಂಪರ್ಕಿಸಿದಾಗ, ರಾಯಭಾರಿ ಕಚೇರಿ ಸಂಪರ್ಕಿಸಿ ಎಂದು ವಾಟ್ಸಪ್ ಮೂಲಕ ತಿಳಿಸಿದ್ದಾರೆ. ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಡಾ. ಕೆ. ಶಿವರಾಜ ಪಾಟೀಲ್ ತಿಳಿಸಿದ್ದಾರೆ.

ಸಹಸ್ರಾರು ಜನರು ಏರ್‌ಪೋರ್ಟ್‌ನಲ್ಲಿ ಉಳಿದಿದ್ದಾರೆ. ನಾವು ಹೋಟೆಲ್‌ನಲ್ಲಿ ಸುರಕ್ಷತೆಯಿಂದ ಇದ್ದೇವೆ. ಇಲ್ಲಿ ಕಿಟಕಿ ಬಾಗಿಲು ಮುಚ್ಚಿಕೊಳ್ಳಬೇಕು, ಹೊರಗೆ ತಿರುಗಾಡಬಾರದು ಎಂದು ಸರ್ಕಾರ ಮುನ್ನೆಚ್ಚರಿಕೆ ನೀಡಿದೆ.
–ಡಾ. ಕೆ. ಶಿವರಾಜ ಪಾಟೀಲ್ (ದೂರವಾಣಿ ಮೂಲಕ ಮಲ್ಲಮ್ಮ ನುಡಿಗೆ ಮಾಹಿತಿ)

**ದುಬೈನಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆತರಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು: ಸಿಎಂ ಸಿದ್ದರಾಮಯ್ಯ**

# ಖಂಡ್ರೆ ನೇತೃತ್ವದಲ್ಲಿ ಸಿಎಂ ಸಿದ್ದರಾಮಯ್ಯ ಭೇಟಿ
## ಅಮೃತ ಮಹೋತ್ಸವದಲ್ಲಿ ಭಾಗವಹಿಸುವ ಭರವಸೆ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಬರುವ ಏಪ್ರಿಲ್‌ನಲ್ಲಿ ನಡೆಯಲಿರುವ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿದೆ.

ಬೆಂಗಳೂರಿನಲ್ಲಿ ಅಮೃತ ಮಹೋತ್ಸವ ಸಮಿತಿ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ನೇತೃತ್ವದಲ್ಲಿ ಶುಕ್ರವಾರ ಸಿಎಂ ಅವರನ್ನು ಭೇಟಿಯಾಗಿ ಆಹ್ವಾನ ಪತ್ರ ನೀಡಿ ಅಮೃತ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಯಿತು.

ಗಡಿಯಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ವಿಶಿಷ್ಟ ಕೊಡುಗೆ ನೀಡುತ್ತಿದ್ದಾರೆ.

ಅಮೃತಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಇಂತಹ ಐತಿಹಾಸಿಕ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಸಿಎಂ ಅವರನ್ನು ಸಮಿತಿ ಅಧ್ಯಕ್ಷ ಖಂಡ್ರೆ ಮನವಿ ಮಾಡಿದರು.

ಮನವಿಗೆ ಸಿಎಂ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು ಪೂಜ್ಯರ ಅಮೃತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸವುದಾಗಿ ಭರವಸೆ ನೀಡಿದ್ದಾರೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸಚಿವ ಎಂ.ಬಿ.ಪಾಟೀಲ್, ಶಾಸಕ ಬಿ.ಆರ್.ಪಾಟೀಲ್ ಹಾಜರಿದ್ದರು.

# ಆಶೀರ್ವಾದ ಗ್ಲೋಬಲ್ ಶಾಲೆಯಲ್ಲಿ 7ನೇ ವರ್ಷದ ಆಶೀರ್ವಾದ ಉತ್ಸವ

ಮಲ್ಲಮ್ಮ ನುಡಿ, ಹುಣಸಗಿ

ಪಟ್ಟಣದ ಇಸಾಂಪುರ ಕ್ರಾಸ್ ಹತ್ತಿರ ಇರುವ ಆಶೀರ್ವಾದ ಗ್ಲೋಬಲ್ ಶಾಲೆಯಲ್ಲಿ ಶುಕ್ರವಾರ ಸಂಜೆ 7ನೇ ವರ್ಷದ "ಆಶೀರ್ವಾದ ಉತ್ಸವ" ಕಾರ್ಯಕ್ರಮದ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಮಾತೃ ವಂದನಾ ಕಾರ್ಯಕ್ರಮವನ್ನು ಮತ್ತು ಸಂಭ್ರಮದಿಂದ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಆನಂದಾಶ್ರಮ ಗುಳಬಾಳದ ಪರಮ ಪೂಜ್ಯ ಮರೀಹುಚ್ಚೇಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದರು. ಪ್ರಾಸ್ತಾವಿಕ ನುಡಿಯಲ್ಲಿ ಪ್ರಾಚಾರ್ಯರಾದ ಬಸವರಾಜ ಎಚ್.ಎಸ್ ಮಾತನಾಡಿ, "ಜಗತ್ತಿನಲ್ಲಿ ಕೆಟ್ಟ ಮಕ್ಕಳಿರಬಹುದು, ಆದರೆ ಕೆಟ್ಟ ತಾಯಂದಿರು ಇರ್ರೋದಿಲ್ಲ. ಅಂತಹ ಮಹಾನ್ ದೇಶ ನಮ್ಮದು. ಶಾಲೆಯ ಮುಖ್ಯ ಉದ್ದೇಶ ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬಿತ್ತುವದು" ಎಂದು ತಿಳಿಸಿದರು.

ವಿದ್ಯಾರ್ಥಿನಿ ಮದು ಮಾತನಾಡಿ, ಶಾಲೆಯ ಶಿಕ್ಷಕರು ಪಾಠದ ಜೊತೆಗೆ ಜೀವನ ಮೌಲ್ಯಗಳನ್ನೂ ಕಲಿಸಿಕೊಟ್ಟಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು.

ಸಿಪಿಐ ಹುಣಸಗಿ ರವಿಕುಮಾರ ಎನ್ ಮಾತನಾಡಿ, "ಈ ಶಾಲೆಯಲ್ಲಿ ನನ್ನ ಮಗು ಓದುತ್ತಿದ್ದಾನೆ. ಸಂಸ್ಥೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಕೆಲವೇ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉತ್ತಮ ಸಾಧನೆ ಮಾಡಲಿದೆ. ಇಲ್ಲಿ ಓದುತ್ತಿರುವ ಮಕ್ಕಳು ಉತ್ತಮ ಶಿಕ್ಷಣ ಪಡೆದು ಶ್ರಮವಹಿಸಿ ಸಾಧನೆ ಮಾಡಿ ತಂದೆ–ತಾಯಿ ಹಾಗೂ ಗುರುಗಳಿಗೆ ಕೀರ್ತಿ ತರಬೇಕು" ಎಂದು ಹೇಳಿದರು.



ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಭದ್ರಗೌಡ ಹೊಸಮನಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಅಂಕಗಳಿಸುವುದಕ್ಕೆ ಮಾತ್ರ ಸೀಮಿತವಾಗದೆ ಸಂಸ್ಕಾರ ಹಾಗೂ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ತಂದೆ–ತಾಯಿ ಹಾಗೂ ಹಿರಿಯರಿಗೆ ಗೌರವ ನೀಡುವ ಪದ್ಧತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ನಾಗಣ್ಣ ದಂಡಿನ ಸಾಹುಕಾರ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ದಾಮೋದರ ಶರ್ಮಾ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ರಾಜಶೇಖರಗೌಡ ಎಸ್. ಪಾಟೀಲ (ಯಾದಗಿರಿ), ಮಾತೃ ವಂದನಾ ಸಂಚಾಲಕರಾದ ಜ್ಯೋತಿ ಜಿ.ಕೆ ಉಪಸ್ಥಿತರಿದ್ದರು.

ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಭಾವ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದು, ಪಾಲಕರು ಮತ್ತು ಅತಿಥಿಗಳಿಂದ ಮೆಚ್ಚುಗೆ ವ್ಯಕ್ತವಾಯಿತು. ಕಾರ್ಯಕ್ರಮವು ಶಿಸ್ತಿನಿಂದ ಮತ್ತು ಯಶಸ್ವಿಯಾಗಿ ನೆರವೇರಿತು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ರೈತರಿಗೆ ಕಬ್ಬಿನ ಕಸಿ ಮಾಡಲು ಕಾರ್ಖಾನೆಗಳು ಮುಂದಾಗಬೇಕು

ರಾಜ್ಯದ ಆರ್ಥಿಕತೆಗೆ ಮಹತ್ತರ ಕೊಡುಗೆ ನೀಡುವ ಕಬ್ಬು ಬೆಳೆಯ ಹಿಂದೆ ಸಾವಿರಾರು ರೈತರ ಪರಿಶ್ರಮ ಅಡಗಿದೆ. ಆದರೆ ಕಬ್ಬಿನ ಕಸಿ (ನಾಟಿ) ಸಮಯದಲ್ಲಿ ರೈತರು ಬೀಜ, ಕಾರ್ಮಿಕರ ಕೊರತೆ, ಯಂತ್ರೋಪಕರಣಗಳ ಅಭಾವ, ಹಣಕಾಸಿನ ತೊಂದರೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳು ಕೇವಲ ಕಬ್ಬು ಖರೀದಿಸುವ ಸಂಸ್ಥೆಗಳಾಗಿಯೇ ಉಳಿಯದೆ, ರೈತರ ನೆರವಿಗೆ ನಿಂತು ಕಸಿ ಕಾರ್ಯದಲ್ಲಿ ಸಕ್ರಿಯ ಪಾತ್ರವಹಿಸುವುದು ಅತ್ಯವಶ್ಯಕವಾಗಿದೆ.

ಕಬ್ಬು ಬೆಳೆ ದೀರ್ಘಾವಧಿಯ ಬೆಳೆ. ಉತ್ತಮ ಗುಣಮಟ್ಟದ ಬೀಜ ಕಬ್ಬು, ಸರಿಯಾದ ಗೊಬ್ಬರ ಬಳಕೆ, ನೀರಾವರಿ ವ್ಯವಸ್ಥೆ ಹಾಗೂ ವೈಜ್ಞಾನಿಕ ವಿಧಾನಗಳ ಅನುಸರಣೆ ಇಲ್ಲದಿದ್ದರೆ ಉತ್ಪಾದನೆ ಕುಸಿಯುತ್ತದೆ. ಇದರಿಂದ ರೈತರ ಆದಾಯಕ್ಕೂ ಹೊಡೆತ ಬೀಳುತ್ತದೆ. ಆದ್ದರಿಂದ ಕಾರ್ಖಾನೆಗಳು ತಮ್ಮ ವ್ಯಾಪ್ತಿಯ ರೈತರಿಗೆ ಉತ್ತಮ ಬೀಜ ಕಬ್ಬು ಒದಗಿಸಿ, ಕೃಷಿ ತಜ್ಞರ ಮಾರ್ಗದರ್ಶನ ನೀಡಬೇಕು.

ಕಬ್ಬಿನ ಕಸಿ ಯಂತ್ರಗಳ ವ್ಯವಸ್ಥೆ ಮಾಡಿ ಕಡಿಮೆ ದರದಲ್ಲಿ ರೈತರಿಗೆ ನೀಡಿದರೆ ಕಾರ್ಮಿಕರ ಸಮಸ್ಯೆ ತಗ್ಗುತ್ತದೆ. ಜೊತೆಗೆ, ಕಸಿ ವೆಚ್ಚಕ್ಕೆ ಮುಂಗಡ ಸಹಾಯಧನ ಅಥವಾ ಸುಲಭ ಸಾಲ ವ್ಯವಸ್ಥೆ ಕಲ್ಪಿಸಿದರೆ ರೈತರು ಆರ್ಥಿಕವಾಗಿ ಬಲಿಷ್ಠರಾಗುತ್ತಾರೆ. ಇದು ಕಾರ್ಖಾನೆಗಳಿಗೂ ಲಾಭಕಾರಿಯೇ ಆಗುತ್ತದೆ, ಏಕೆಂದರೆ ಉತ್ತಮ ಉತ್ಪಾದನೆ ಎಂದರೆ ಹೆಚ್ಚಿನ ಕಬ್ಬು ಪೂರೈಕೆ.

ಇನ್ನೂ ಹಲವು ಕಡೆಗಳಲ್ಲಿ ಕಬ್ಬಿನ ಬಿಲ್ ಪಾವತಿ ವಿಳಂಬವಾಗುತ್ತಿರುವುದು ರೈತರ ಸಂಕಷ್ಟವನ್ನು ಹೆಚ್ಚಿಸಿದೆ. ಬಾಕಿ ಹಣವನ್ನು ಸಕಾಲದಲ್ಲಿ ಪಾವತಿಸಿ, ಕಸಿ ಹಂಗಾಮಿನಲ್ಲಿ ಸಹಕಾರ ನೀಡಿದರೆ ರೈತರ ವಿಶ್ವಾಸ ಹೆಚ್ಚುತ್ತದೆ. ರೈತ ಮತ್ತು ಕಾರ್ಖಾನೆಗಳ ನಡುವೆ ಪರಸ್ಪರ ಅವಲಂಬಿತ ಸಂಬಂಧವಿದೆ. ಆದ್ದರಿಂದ ಒಂದರ ಅಭಿವೃದ್ಧಿ ಮತ್ತೊಂದರ ಪ್ರಗತಿಗೆ ಆಧಾರ.ಸರ್ಕಾರವೂ ಕಾರ್ಖಾನೆಗಳಿಗೆ ಸ್ಪಷ್ಟ ಮಾರ್ಗಸೂಚಿ ನೀಡಿ, ರೈತಪರ ಕಾರ್ಯಗಳನ್ನು ಕಡ್ಡಾಯಗೊಳಿಸಬೇಕು. ಕೇವಲ ಲಾಭ ನೋಡುವ ಮನೋಭಾವ ಬಿಟ್ಟು, ಸಾಮಾಜಿಕ ಜವಾಬ್ದಾರಿಯನ್ನು ಅರಿತು ಕಾರ್ಖಾನೆಗಳು ಮುಂದೆ ಬಂದಾಗ ಮಾತ್ರ ಕಬ್ಬು ಬೆಳೆಯ ಭವಿಷ್ಯ ಉಜ್ವಲವಾಗುತ್ತದೆ.

ರೈತರ ಕೈ ಬಲವಾದರೆ ರಾಜ್ಯದ ಆರ್ಥಿಕತೆ ಬಲವಾಗುತ್ತದೆ. ಹೀಗಾಗಿ ಕಬ್ಬಿನ ಕಸಿ ಹಂತದಿಂದಲೇ ಕಾರ್ಖಾನೆಗಳು ರೈತರ ಜೊತೆ ಕೈಜೋಡಿಸುವುದು ಕಾಲದ ಅಗತ್ಯವಾಗಿದೆ.

# ವಿಜ್ಞಾನದ ಕಡೆಗೆ ವಿದ್ಯಾರ್ಥಿಗಳಿಂದ ಆಸಕ್ತಿ ಅಗತ್ಯ: ಹಡಪದ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಮಕ್ಕಳು ವಿಜ್ಞಾನದ ಪ್ರಯೋಗಗಳ ಕಡೆಗೆ ಆಸಕ್ತಿ ವಹಿಸಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಪತ್ರಕರ್ತ ರಾಜಕುಮಾರ್ ಆರ್. ಹಡಪದ ತಿಳಿಸಿದರು. ಪಟ್ಟಣದ ಜ್ಞಾನ ಅಮೃತ ಶಿಕ್ಷಣ ಸಂಸ್ಥೆಯ ವಿದ್ಯಾ ವಿಜ್ಞಾನ ಹಾಗೂ ಜ್ಞಾನ ದರ್ಶನ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಬಾಲ್ಯದಿಂದಲೇ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ವಿಷಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಪಪ್ರಶ್ನೆಗಳನ್ನು ಶಿಕ್ಷಕರಿಗೆ ಕೇಳಿ ಅದರ ಉತ್ತರವನ್ನು ಕಂಡುಕೊಳ್ಳಬೇಕು. ವಿದ್ಯಾರ್ಥಿಗಳು ವೈಜ್ಞಾನಿಕ ವಿಚಾರಗಳತ್ತ ಆಸಕ್ತಿ ಬೆಳೆಸಿಕೊಳ್ಳುವುದರ ಜೊತೆಯಲ್ಲಿ ವಿಜ್ಞಾನ ಪ್ರಯೋಗಾತ್ಮಕ ಚಿಂತನೆಯನ್ನು ಬೆಳೆಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ವಿಜ್ಞಾನಿಗಳಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದರು.

ಶಿಕ್ಷಣದ ಜೊತೆಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬೇಕೆಂದು ಹೇಳಿದರು. ಸಂಸ್ಥೆಯ ಕಾರ್ಯದರ್ಶಿ ಚಂದ್ರಶೇಖರ್ ದಾನಪ್ಪ ಕಾರ್ಯಕ್ರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವನೆ ಬಳಸಿಕೊಳ್ಳಬೇಕು. ಕೇವಲ ಪರೀಕ್ಷೆಗಾಗಿ ಕಲಿಕೆ ಆಗಬಾರದು. ದೈನಂದಿನ ವ್ಯವಹಾರಗಳಲ್ಲಿ ವಿಜ್ಞಾನದ ವಿಷಯಗಳ ಬಗ್ಗೆ ಪ್ರಾಯೋಗಿಕ ಮಾಹಿತಿ ಹೊಂದಿರಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ಸಸಿ ನೆಟ್ಟು ಪರಿಸರ ಸಂರಕ್ಷಣೆ ಮಾಡಬೇಕು ಎಂದು ಹೇಳಿದರು. ಶಾಲೆಯ ಮುಖ್ಯ ಶಿಕ್ಷಕ ಮಹಾದೇವ ಗುಜ್ಜರ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳುವ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ವಿಜ್ಞಾನ ವಸ್ತುಪ್ರದರ್ಶನ ವೀಕ್ಷಿಸಿದರು. ಈ ಸಂದರ್ಭದಲ್ಲಿ ಭೀಮಶೆಟ್ಟಿ ವಡ್ಡನಕೇರಾ, ಸುನೀತಾ, ಲೀಲಾವತಿ, ನಾಗಿಣಿ, ಅನ್ನಪೂರ್ಣ, ಶಶಿಕಲಾ ಸೇರಿದಂತೆ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರೇಣುಕಾ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ನಗರದ ಹೊರಗಡೆ ಇರುವ ಚಿಕಪೇಟೆ ಏರಿಯಾದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಾನುವಾರ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಒಂದು ಸಾರಿರುವ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲಾಯಿತು.

.ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜ ಸಲ್ಲಿಸಿ ಪುಷ್ಪಾರ್ಚನೆಗೈದು ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಜಗದ್ಗುರು ರೇಣುಕಾಚಾರ್ಯರು ಕೇವಲ ವೀರಶೈವ ಧರ್ಮಕ್ಕೆ ಉದ್ದರಿಸದೆ,

ಎಲ್ಲಾ 18 ಪಂಗಡಗಳಿಗೂ ಸಹ ಧರ್ಮೋಪದೇಶ ಮಾಡಿದ ಮಹಾನ ಸಂತರಾಗಿದ್ದರು ಎಂದರು.



ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ತಮ್ಮ ಧರ್ಮೋಪದೇಶದ ಮೂಲಕ ಅಗಸ್ತ್ಯ ಮುನಿಗರ ಲಿಂಗ ದೀಕ್ಷೆ ನೀಡಿ, ಇಡೀ ದೇಶಾದ್ಯಂತ ಸನಾತನ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಪ್ರೇರೇಪಿಸಿದರು ಎಂದರು.

ಮೆಹೇಕರ್ಲ, ತಡೋಲಾ, ಹಾಗೂ ದೊಣಗಾಪುರ ಶ್ರೀ ಮಠಗಳ ಪೂಜ್ಯ ರಾಜೇಶ್ವರ ಶಿವಾಚಾರ್ಯರು ಹಾಗೂ ದಾಕುಲಗಿಯ ಪೂಜ್ಯ ಚನ್ನಬಸವಾನಂದ ಶಿವಾಚಾರ್ಯರು ಸಾನಿಧ್ಯ ವಹಿಸಿದರು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಜಗದ್ಗುರು ರೇಣುಕಾಚಾರ್ಯ ಜಯಂತ್ಯೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಸಿದ್ರಾಮಯ್ಯ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಅಂಬರೀಶ ಸ್ವಾಮಿ, ಸಮಾಜದ ಗಣ್ಯರಾದ ಮಹಾಂತಯ್ಯ ಸ್ವಾಮಿ, ಗಂಗಾಧರ ಶಾಸ್ತ್ರಿ, ಮಹೇಶ್ವರ ಸ್ವಾಮಿ, ಶ್ರೀಕಾಂತ ಸ್ವಾಮಿ ಸೋಲಪುರ, ಕಾರ್ತಿಕ ಮಠಪತಿ, ಶಿವಕುಮಾರ ಸ್ವಾಮಿ, ಬಿಜೆಪಿ ಮುಖಂಡ ನಾಗನಾಥ ಕರ್ಪುರ, ಸಾಯಿನಾಥ ಶಾಸ್ತ್ರಿ ಸೇರಿದಂತೆ ಇನ್ನೂ ಅನೇಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹಬ್ಬದಿಂದ ಪ್ರೀತಿ ವಿಶ್ವಾಸ ಮರುಕಳಿಸಬೇಕು: ಪಂಚಾಳ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಹಬ್ಬಗಳಿಂದ ಪ್ರೀತಿ, ವಿಶ್ವಾಸ, ಮರುಕಳಿಸಬೇಕೆಂದು ತಹಶೀಲ್ದಾರ್ ಮಂಜುನಾಥ್ ಪಂಚಾಳ ತಿಳಿಸಿದರು. ಪಟ್ಟಣ್ಣದ ಪೊಲೀಸ ಠಾಣೆಯ ಆವರಣದಲ್ಲಿ ಹೋಳಿ ಹಬ್ಬ ಹಾಗೂ ರಂಜಾನ್ ಹಬ್ಬದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಂಸ್ಕೃತಿಕ ವೈಶಿಷ್ಟ್ಯ ಹೊಂದಿರುವ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ನಮ್ಮ ಹಿರಿಯರು ಹೋಳಿ ಹಬ್ಬವನ್ನು ಆಚರಿಸುತ್ತಾ ಬಂದಿದ್ದಾರೆ. ಈ ಹಬ್ಬದಿಂದ ಪ್ರೀತಿ, ವಿಶ್ವಾಸ ಮರುಕಳಿಸಬೇಕು ಹೊರತು ದ್ವೇಶವಲ್ಲ ಎಂದರು. ನೈಸರ್ಗಿಕ ಬಣ್ಣಗಳಿಂದ ಹೋಳಿ ಆಚರಣೆ ಮಾಡಬೇಕು ಇತರೆ ಜನಾಂಗಕ್ಕೆ ನೋವಾಗದಂತೆ ನಡೆದುಕೊಳಬೇಕು ಬಲವಂತವಾಗಿ ಬಣ್ಣ ಎರಚಬಾರದು ಕಾನೂನು ಸುವ್ಯವಸ್ಥೆ ಕಾಪಾಡುವುದರೊಂದಿಗೆ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದರು. ಸಿಪಿಐ ಶ್ರೀನಿವಾಸ ಅಲ್ಲಾಪುರ್ ಮಾತನಾಡಿ, ಯಾವುದೇ ರೀತಿಯ ಗಲಾಟೆಯಾಗದಂತೆ ಸರಳ ರೀತಿಯಿಂದ ಬೆಳಿಗ್ಗೆ 9 ರಿಂದ 11.30 ಘಂಟೆಯವರೆಗೆ ಹೋಳಿ (ಬಣ್ಣ)ದ ಹಬ್ಬ ಆಚರಣೆ ಮಾಡಬೇಕು ಕಾನೂನು ಪಾಲನೆ ಪ್ರತಿಯೊಬ್ಬರು ಮಾಡಬೇಕು. ಮದ್ಯ ಮಾರಾಟ, ಡಿಜೆ ನಿಷೇಧಿಸಲಾಗಿದೆ, ನಿಯಮಗಳು ಉಲ್ಲಂಘನೆ ಮಾಡಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಪಿಎಸ್ ಬಸಲಿಂಗಪ್ಪ ಎಂ. ಗೋಧಿಹಾಳ ಮಾತನಾಡಿ, ಹೋಳಿ ಹಬ್ಬ ಸಹೋದರತ್ವ ಭಾವನೆಯಿಂದ ಹಬ್ಬ ಆಚರಣೆ ಮಾಡಬೇಕು. ಸರ್ಕಾರದ ನಿಯಮಗಳು ಪ್ರತಿಯೊಬ್ಬರು ಪಾಲಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಆಡಳಿತ ವೈದ್ಯಧಿಕಾರಿ ಡಾ. ವಿಜಯ ಹಿರಸ್ಕರ್, ಮಲ್ಲಿಕಾರ್ಜುನ ಪಾಟೀಲ್, ರಾಶೀದ್ ಪಟೇಲ್, ಕರೇಪ್ಪ ಗಡಮಿ ಸೇರಿದಂತೆ ಪಟ್ಟಣದ ಪ್ರಮುಖರು ಹಾಗೂ ಠಾಣಾ ವ್ಯಾಪ್ತಿಯ ಗ್ರಾಮಸ್ಥರು, ಪೊಲೀಸ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶಾಂತಿ ವರ್ಧಕ ಸಂಸ್ಥೆಯಲ್ಲಿ ಸಾರ್ಥಕ ಸೇವೆ ಶ್ಲಾಘನಿಯ: ಅಂಕುಶ ಡೋಲೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವೃತ್ತಿಜೀವನದಲ್ಲಿ ಪ್ರಾಮಾಣಿಕತೆ ಮತ್ತು ಶಿಸ್ತನ್ನು ಮೈಗೂಡಿಸಿಕೊಂಡವರು. ಕಾಯಕ ಪರಿಣಾಮಿಯಾಗಿ ನಮ್ಮ ಸಂಸ್ಥೆ ಯಲ್ಲಿ 40 ವರ್ಷ ಸೇವೆ ಸಲ್ಲಿಸಿದ ಧಜರಾಜ ರಾಂಪುರೆ ಸರ್ ಅವರ ಕಾರ್ಯವೈಖರಿ ನಿಜಕ್ಕೂ ಮೆಚ್ಚುವಂತದ್ದು, ಎಂದು ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರ ಅಂಕುಶ ಡೋಲೆ ಅಭಿಪ್ರಾಯಪಟ್ಟರು. ಪಟ್ಟಣದ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಬರುವ ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ) ಯಲ್ಲಿ ಹಿರಿಯ ತರಬೇತಿ ಅಧಿಕಾರಿಯಾಗಿ ಸುದೀರ್ಘ ಸೇವೆ ಸಲ್ಲಿಸಿದ ಧನರಾಜ ವಿಶ್ವನಾಥ ರಾಂಪುರೆ ಅವರ ವಯೋನಿವೃತ್ತಿ ಪ್ರಯುಕ್ತ ಶನಿವಾರ ಸಂಸ್ಥೆಯ ವತಿಯಿಂದ ಭಾವಪೂರ್ಣ ಬೀಳ್ಕೊಡುಗೆ ಸಮಾರಂಭದಲ್ಲಿ ಉದ್ಘಾಟನೆ ಮಾಡಿ ಮಾತನಾಡಿದರು.

ಸಂಸ್ಥೆಯ ಬೆಳವಣಿಗೆಯಲ್ಲಿ ಅವರ ಪಾತ್ರ ಹಿರಿದು. ಕೇವಲ ಕೆಲಸವೆಂದು ಭಾವಿಸದೆ, ಸೇವೆಯೆಂದು ಪರಿಗಣಿಸಿ ಅವರು ಸಲ್ಲಿಸಿದ ಕೊಡುಗೆ ಅವಿಸ್ಮರಣೀಯ ಎಂದು ಅವರು ಸ್ಮರಿಸಿದರು. ನಿವೃತ್ತಿ ಎಂಬುದು ಕೇವಲ ವೃತ್ತಿ ಜೀವನದ ಒಂದು ಘಟ್ಟವಷ್ಟೇ. ಅವರ ಮುಂದಿನ ನಿವೃತ್ತ ಜೀವನವು ಸುಖ, ಶಾಂತಿ ಮತ್ತು ಆರೋಗ್ಯದಿಂದ ಕೂಡಿರಲಿ ಎಂದು ಆಶಿಸಿದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಂಗಪ್ಪ ಹುಲಸೂರೆ ಪ್ರಾಚಾರ್ಯರು, ಕೈಗಾರಿಕಾ ತರಬೇತಿ ಸಂಸ್ಥೆ ಭಾಲ್ಕಿ ಇವರ ಅತಿಥಿಗಳಿಗೆ ಸ್ವಾಗತಿಸಿ ಧನರಾಜ ರಾಂಪುರೆ ಅವರು ಬಗ್ಗೆ ಪರಿಚಯ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ



ಆಗಮಿಸಿದ್ದ ಗಣ್ಯರು, ಧನರಾಜ ರಾಂಪುರೆ ಅವರ ಕರ್ತವ್ಯ ನಿಷ್ಠೆ ಮತ್ತು ವಿದ್ಯಾರ್ಥಿಗಳ ಮೇಲಿನ ಕಾಳಜಿಯನ್ನು

ಶ್ಲಾಘಿಸಿದರು. ಸಂಸ್ಥೆಯ ಏಳಿಗೆಗಾಗಿ ಅವರು ನೀಡಿದ ಶ್ರಮ ಅನ್ಯಾದೃಶ್ಯವಾದುದು ಎಂದು ನೆನಪಿಸಿಕೊಂಡರು. ಇದೇ ಸಂದರ್ಭದಲ್ಲಿ ನಿವೃತ್ತರಾದ ಧನರಾಜ ರಾಂಪುರೆ ಮತ್ತು ಅವರ ಧರ್ಮಪತ್ನಿಯವರನ್ನು ಸಂಸ್ಥೆಯ ವತಿಯಿಂದ ಶಾಲು ಹೊದಿಸಿ ಸನ್ಮಾನಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಡಾ. ಕಮಲಾ ಸಿರಸೆ ಸಂಯೋಜಕರು, ಗುರು ಕುಡತೆ ಹೆಚ್.ಆರ್, ಲಕ್ಷ್ಮೀಕಾಂತ ಶಂಕರರಾವ್ ಪವಾರೆ ಪ್ರಾಚಾರ್ಯರು, ಸರ್ಕಾರಿ ಐಟಿಐ ಕಾಲೇಜು ಭಾಲ್ಕಿ, ಬಸವರಾಜ ಚಿನ್ನಶೆಟ್ಟಿ ನಿವೃತ್ತ ಶಿಕ್ಷಕರ, ಸಮಾರಂಭದಲ್ಲಿ ಸಂಸ್ಥೆಯ ಸಿಬ್ಬಂದಿ ವರ್ಗ,

ವಿದ್ಯಾರ್ಥಿಗಳು ಹಾಗೂ ಕುಟುಂಬದ ಸದಸ್ಯರು, ನಿವೃತ್ತ ಅಧಿಕಾರಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿವನ್ನು ಮಲ್ಲಿಕಾರ್ಜುನ ಮೆಹತ್ರೆ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.

## ನೈಟಿಂಗಲ ಪಬ್ಲಿಕ್ ಶಾಲೆ 23ನೇ ವಾರ್ಷಿಕೋತ್ಸವದ ಸಂಭ್ರಮ
# ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಒಳ್ಳೆಯ ಸಂಸ್ಕಾರ ಬೆಳೆಸಿ: ಹಾವಶೆಟ್ಟಿ ಪಾಟೀಲ್

• ಮಲ್ಲಮ್ಮ ನುಡಿ ವಾರ್ತೆ ಬೀದರ

ಮಾತೃಭಾಷೆಯಲ್ಲೇ ಕಲಿಯುವ ಮಗು ಜ್ಞಾನದಲ್ಲೂ, ಸಂಸ್ಕೃತಿಯಲ್ಲೂ ಶ್ರೀಮಂತವಾಗುತ್ತದೆ ಎಂದು ರೋಟರಿ ಕ್ಲಬ್ ಕಲ್ಯಾಣ ಝೋನ್ ಸಹಾಯಕ ಗವರ್ನರ್ ಹಾವಶೆಟ್ಟಿ ಪಾಟೀಲ್ ಅಭಿಪ್ರಾಯಪಟ್ಟರು.

ಸಂಗೋಳಗಿಯ ಜ್ಞಾನ ಕಾರಂಜಿ ಚಾರಿಟೇಬಲ್ ಟ್ರಸ್ಟ್ (ರಿ) ಸಂಯುಕ್ತಾಶ್ರಯದಲ್ಲಿ ನಡೆದಿರುವ ನೈಟಿಂಗಲ ಪಬ್ಲಿಕ್ ಶಾಲೆಯ 23ನೇ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಶುಕ್ರವಾರ ಗ್ರಾಮದ ಉದ್ಯಾನವನದಲ್ಲಿ ಅದ್ದೂರಿಯಾಗಿ ನೆರವೇರಿದ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಅವರು ಮಾತೃಭಾಷೆ ಶಿಕ್ಷಣಕ್ಕೆ ಒತ್ತುಟ ನಮ್ಮ ಮಕ್ಕಳ ಭವಿಷ್ಯಕ್ಕೆ ಬಲವಾದ ಅಡಿಪಾಯ ಹಾಕಲು ಕನ್ನಡ ಶಾಲೆಗಳಲ್ಲಿ ಸೇರಿಸಬೇಕು. ಮಾತೃಭಾಷೆಯಲ್ಲೇ ಕಲಿಯುವ ಮಗು ಜ್ಞಾನದಲ್ಲೂ, ಸಂಸ್ಕೃತಿಯಲ್ಲೂ



ಶ್ರೀಮಂತವಾಗುತ್ತದೆ. ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಒಳ್ಳೆಯ ಸಂಸ್ಕಾರ ಬೆಳೆಸಬೇಕು. ಮಕ್ಕಳು ನಮ್ಮ ಭವಿಷ್ಯದ ಶಿಲ್ಪಿಗಳು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸುರೇಶ್ ಚನ್ನಶೆಟ್ಟಿ, ಅವರು ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕೃತಿ ಕಲಿಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಮಕ್ಕಳ ಭವಿಷ್ಯವನ್ನು ರೂಪಿಸುವ ಶಕ್ತಿ ತಂದೆ–ತಾಯಿಯರ ಕೈಯಲ್ಲಿದೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜ್ಞಾನ ಕಾರಂಜಿ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮಾಣಿಕಪ್ಪ ಗೋರನಾಳೆ ಅವರು ಶಾಲಾ ಕಟ್ಟಡದ ದುರಸ್ತಿ, ಹೊಸ ತರಗತಿ ಕೊಠಡಿಗಳ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕರು ಹೆಚ್ಚಿನ ಒತ್ತು ನೀಡಬೇಕು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಶಿವಶಂಕರ ಟೋಕರೆ ಮಾತನಾಡಿ, 2002ರಲ್ಲಿ ಗ್ರಾಮೀಣ ಭಾಗದಲ್ಲಿ ಕನ್ನಡ ಉಳಿಸಿ ಬೆಳೆಸುವ ಉದ್ದೇಶದಿಂದ ನೈಟಿಂಗಲ್ ಪಬ್ಲಿಕ್ ಶಾಲೆ ಸ್ಥಾಪನೆಯಾಯಿತು. ಗುಣಮಟ್ಟದ ಹಾಗೂ ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಸಂಸ್ಥೆ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್‌ನ ಸೋಮಶೇಖರ ಪಾಟೀಲ, ಸಂಸ್ಥೆಯ ಕಾರ್ಯದರ್ಶಿ ದೇವಿದಾಸ ಭಾಲ್ಕೆ, ಆಡಳಿತಾಧಿಕಾರಿ ರವಿ ಚೌಹಾಣ್, ಗ್ರಾಮದ ಮುಖಂಡರಾದ ಚಂದ್ರಶೇಖರ ಚನ್ನಶೆಟ್ಟಿ, ಭೂಮರೆಡ್ಡಿ ಕಾಲೇಜಿನ ಪ್ರಾಂಶುಪಾಲರಾದ ವಿ.ಎಂ. ಚನ್ನಶೆಟ್ಟಿ, ಭೀಮಣ್ಣಾ ಗುತ್ತಿ, ಬಾಬುರಾವ್ ಮಳೆಗಾರ, ಬಾಬುರಾವ್ ಮಾಲಿ ಪಾಟೀಲ್, ಪಿಕೆಪಿಎಸ್ ಅಧ್ಯಕ್ಷ ಶಿವಕುಮಾರ ಹಿಂದಾ, ಉಪಾಧ್ಯಕ್ಷ ವಿಶ್ವನಾಥ ಮಸ್ತರಿ, ವಿಜಯಕುಮಾರ ಮಂಡಗಿ, ಸಿದ್ದಪ್ಪಾ ಕಟಗಿ, ನೈಟಿಂಗಲ್ ಪಬ್ಲಿಕ್ ಶಾಲೆ ಸಂಗೋಳಗಿಯ ಮುಖ್ಯ ಗುರುಗಳಾದ ಶೀಲಾ ಪಾಂಚಾಳ, ಇತರರು ವೇದಿಕೆ ಮೇಲಿದ್ದರು.

ಕಾರ್ಯಕ್ರಮದಲ್ಲಿ ಶಿಕ್ಷಕಿಯರಾದ ದೀಪಿಕಾ, ರಾಣಿ ಹುಮನಾಬಾದೆ ,ಶಕುಂತಲಾ ಬಿ ಮಡಿವಾಳ, ರಾಣಿ ನರ್ಸಗೊಂಡ, ಅನೇಕ ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದರು, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದ್ದು, ಪಾಲಕರ ಮನಸೂರೆಗೊಂಡವು. ವಾರ್ಷಿಕೋತ್ಸವವು ಸಂಭ್ರಮ, ಸಂಸ್ಕೃತಿ ಹಾಗೂ ಶಿಕ್ಷಣದ ಮಹತ್ವವನ್ನು ಸಾರುವಂತಾಯಿತು.

> “ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕೃತಿ ಕಲಿಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಮಕ್ಕಳ ಭವಿಷ್ಯವನ್ನು ರೂಪಿಸುವ ಶಕ್ತಿ ತಂದೆ–ತಾಯಿಯರ ಕೈಯಲ್ಲಿದೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಸಲಹೆ ನೀಡಿದರು.
> **ಸುರೇಶ್ ಚನ್ನಶೆಟ್ಟಿ**
> **ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ**

### ಮಾತೃಭಾಷೆ ಶಿಕ್ಷಣಕ್ಕೆ ಒತ್ತು

> “ನಮ್ಮ ಮಕ್ಕಳ ಭವಿಷ್ಯಕ್ಕೆ ಬಲವಾದ ಅಡಿಪಾಯ ಹಾಕಲು ಕನ್ನಡ ಶಾಲೆಗಳಲ್ಲಿ ಸೇರಿಸಬೇಕು. ಮಾತೃಭಾಷೆಯಲ್ಲೇ ಕಲಿಯುವ ಮಗು ಜ್ಞಾನದಲ್ಲೂ, ಸಂಸ್ಕೃತಿಯಲ್ಲೂ ಶ್ರೀಮಂತವಾಗುತ್ತದೆ. ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಒಳ್ಳೆಯ ಸಂಸ್ಕಾರ ಬೆಳೆಸಬೇಕು. ಮಕ್ಕಳು ನಮ್ಮ ಭವಿಷ್ಯದ ಶಿಲ್ಪಿಗಳು
> **ಹಾವಶೆಟ್ಟಿ ಪಾಟೀಲ್**
> **ರೋಟರಿ ಕ್ಲಬ್ ಕಲ್ಯಾಣ ಝೋನ್ ಸಹಾಯಕ ಗವರ್ನರ್**

# ಅಂಗನವಾಡಿ ಅಭಿವೃದ್ಧಿಗೆ ಆದ್ಯತೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಸೋನಾಳ ಅಂಗನವಾಡಿ ಕೇಂದ್ರಕ್ಕೆ ತಹಶೀಲ್ದಾರ್ ಅಮಿತ್ ಕುಮಾರ್ ಕುಲಕರ್ಣಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ, ಸ್ವಚ್ಛ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಿ ಮಕ್ಕಳ ಕಲಿಕಾ ಮಟ್ಟ ಪರಿಶೀಲಿಸಿ, ಗುಣಮಟ್ಟದ ಶಿಕ್ಷಣ ನೀಡಲು ಸಿಬ್ಬಂದಿಗೆ ನಿರ್ದೇಶನ ನೀಡಿದರು. ಅಂಗನವಾಡಿಗಳಲ್ಲಿ ಸ್ವಚ್ಛತೆ ಹಾಗೂ ಶಿಸ್ತು ಕಾಪಾಡುವುದು ಕಡ್ಡಾಯ ಎಂದು ತಾ.ಪಂ ಇಒ ಹನುಮಂತರಾಯ ಕೌಟಗೆ ತಿಳಿಸಿದರು.

# ಶ್ರೀ ಗುರು ಪ್ರಸನ್ನ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯ ಶ್ಲಾಘನೀಯ: ಶ್ರೀವೀರೇಶ್ವರ ಸ್ವಾಮೀಜಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಅನ್ನದಾನಕ್ಕಿಂತ ವಿದ್ಯಾನ ಅತ್ಯಂತ ಶ್ರೇಷ್ಠವಾದದ್ದು ಗ್ರಾಮೀಣ ಭಾಗದಲ್ಲಿ ಅಕ್ಷರ ಕ್ರಾಂತಿ ಮಾಡುತ್ತಿರುವ ಶ್ರೀ ಗುರು ಪ್ರಸನ್ನ ಆಂಗ್ಲ ಮಾಧ್ಯಮ ಶಾಲೆ ಕಾರ್ಯ ಶ್ಲಾಘನೀಯ ಎಂದು ಯಾದಗಿರಿ ನಗರದ ದಾಸಬಾಳೇಶ್ವರ ಮಠದ ಪೂಜ್ಯ ಶ್ರೀ ವೀರೇಶ್ವರ ಮಹಾಸ್ವಾಮಿಗಳು ನುಡಿದರು.ಶನಿವಾರದಂದು ವಡಗೇರಾ ಪಟ್ಟಣದಲ್ಲಿ ಶ್ರೀ ಗುರು ಆಂಗ್ಲ ಮಾಧ್ಯಮ ಶಾಲೆಯ ಎರಡನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಮಕ್ಕಳು ದೇವರು ಸಮಾನ ಮಕ್ಕಳು ಇಷ್ಟಕ್ಕೆ ತಕ್ಕಂತೆ ಕಲಿಯಲು ಬಿಡಿ ಅವರ ಮೇಲೆ ಒತ್ತಡ ಬೇಡ ವಿದ್ಯಾರ್ಥಿಗಳು ಜೀವನದಲ್ಲಿ ಮೌಲ್ಯಾಧಾರಿತ ಶಿಕ್ಷಣ, ಶಿಸ್ತು ಸಮಯ ಪಾಲನೆ ಬೆಳೆಸಿಕೊಳ್ಳಬೇಕು ಕಠಿಣ ಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಹೇಳಿದರು.

ಬಿಜೆಪಿ ಹಿರಿಯ ಮುಖಂಡ ಸಿದ್ದಣ್ಣಗೌಡ ಕಾಡಂನೂರ್ ಮಾತನಾಡಿ ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಶಿಕ್ಷಕರ ಸೇವೆ ಅನನ್ಯ ಶ್ರೀ ಗುರು ಪ್ರಸನ್ನ ಆಂಗ್ಲ ಮಾಧ್ಯಮ ಶಾಲೆಯು ಗ್ರಾಮೀಣ ಭಾಗದಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಖಾಸಗಿ ಶಾಲೆಯ ಬೆಳವಣಿಗೆಗೆ ಪಾಲಕರ ಸಹಕಾರವು ಅತ್ಯವಶ್ಯವಾಗಿದೆ ಎಂದು ಅವರು ಹೇಳಿದರು.ಈ ಕಾರ್ಯಕ್ರಮ ಕುರಿತು ಮಕ್ಕಳ ತಜ್ಞ ಡಾ.ಶುಭಾಷ ಕರಣಗಿ ಹಾಗೂ ಯುವ ಉದ್ಯಮಿ ಮಹಾರಾಜ್ ದಿಗ್ಗಿ ಮಾತನಾಡಿದರು.ಶ್ರೀ ಗುರು ಪ್ರಸನ್ನ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷೆ ಶ್ರೀಮತಿ ರೇಖಾ.ಎಂ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.ಕಾರ್ಯದರ್ಶಿ ಮಲ್ಲಿಕಾರ್ಜುನ್ ಪೂಜಾರಿ ಬಬಲಾದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಮಯದಲ್ಲಿ ಶಾಲಾ ವಾರು ವರ್ಷದ ಶಿಕ್ಷಣದಲ್ಲಿ ಅತಿಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಾಯಂಕಾಲ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ಈ ಸಂದರ್ಭದಲ್ಲಿ ಶ್ರೀ ಸಾಬಣ್ಣ ಪೂಜಾರಿ ದೇವತ್ಕಲ್, ಸಾಯಿಬಣ್ಣ ವರಕೆರಿ,ಮಲ್ಲಣ್ಣ ಐಕುರ,ಮರೆಪ್ಪ ಜಡಿ,ಭಾಷುಮಿಯಾ ನಾಯ್ಕೋಡಿ,ಹಣಮಂತ್ರಾಯಗೌಡ ತೇಕರಾಳ,ಮಲ್ಲಿಕಾರ್ಜುನ್ ಕರಿಕಳ್ಳಿ,ಸಂಗಾರೆಡ್ಡಿಗೌಡ ಗೋಡಿಹಾಳ, ಸುರೇಶ್ ಕರಣಿಗಿ,ಬೀರಲಿಂಗ ಮುಂಡರಗಿ,ಯಂಕಣ್ಣ ಬಸಂತಪುರ್,ಮಲ್ಲಣ್ಣ ನೀಲಹಳ್ಳಿ,ದೇವರಾಜ್ ಗೌಡ ಬೆಳಗೆರಿ,ರಂಗಯ್ಯ ಮುಸ್ತಾಜಿರ,ಅಬ್ದುಲ್ ಚಿಗಾನೂರ,ಸೈದಪ್ಪ ಕೋನಳ್ಳಿ,ವಾಸುದೇವ ಮರ್ಕಲ್,ಜಿ. ಲಕ್ಷ್ಮಣ್ ನಾಯಕ್, ಭೀಮಶಪ್ಪ ಕೂಮಾರ, ಪಟ್ಟಣದ ಮುಖಂಡರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಪಾಲಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.ಈ ಕಾರ್ಯಕ್ರಮವನ್ನು ಶಿಕ್ಷಕಿ ಪೂಜಾ ಸ್ವಾಗತಿಸಿದರು.ಶಿಕ್ಷಕಿ ಸಂಗೀತ ನಿರೂಪಿಸಿದರು.ಶಿಕ್ಷಕಿ ಚಂದ್ರಕಲಾ ವಂದಿಸಿದರು

# ಶೈನ್ ಸ್ಟಾರ್ ಕಿಡ್ಸ್ ಪ್ಲೇ ಹೋಮ್ ಶಹಾಪುರ 4 ವರ್ಷದ ವಾರ್ಷಿಕೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಧರ್ಮೋ ರಕ್ಷತಿ ರಕ್ಷಿತಃ ವೈಜ್ಞಾನಿಕವಾಗಿ ಬಳಸಿ ವೃಕ್ಷೋ ರಕ್ಷತಿ ರಕ್ಷಿತಃ ವಿನೂತನವಾಗಿ ಕಾರ್ಯಕ್ರಮ ಮಾಡಲಾಗಿದೆ ಈಗಿನ ಕಾಲದಲ್ಲಿ ಗಿಡ ಬೆಳೆಸಿ ಜೀವ ಉಳಿಸಿ ಪರಿಸ್ಥಿತಿ ಎದುರಾಗಿದೆ ಸಮಾಜದ ಒಳಿತಿಗಾಗಿ ಈ ಸಂಸ್ಥೆ ವಿಭಿನ್ನ ಶೀರ್ಷಿಕೆ ಇಟ್ಟುಕೊಂಡು ಕಾರ್ಯಕ್ರಮವನ್ನು ಮಾಡುತ್ತಾ ಬಂದಿದೆ ವೃಕ್ಷಮಾತೆ ಸಾಲುಮರದ ತಿಮ್ಮಕ್ಕವರಿಗೆ ವೇದಿಕೆ ಅರ್ಪಣೆ ಮಾಡಿದ್ದು ನಿಜಕ್ಕೂ ಶ್ಲಾಘನೀಯ ಕಾರ್ಯಕ್ರಮವನ್ನು ಉದ್ಘಾಟಿಸಿ ಉತ್ತರ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಡಾ.ಶರಣು ಬಿ ಗದ್ದುಗೆ ಅವರು ಮಾತನಾಡಿದರು, ಮಕ್ಕಳ ಜೀವನದಲ್ಲಿ ತಂದೆ ತಾಯಿ ಹಾಗೂ ಗುರುವಿನ ಪಾತ್ರ ಬಹುದೊಡ್ಡದು

ಈ ಮಕ್ಕಳು ಭವ್ಯ ಭಾರತದ ಭವಿಷ್ಯವನ್ನು ಬೆಳಗುವ ಶೈನ್ ಸ್ಟಾರ್ ಗಳು, ಮಕ್ಕಳ ಬೆಳವಣಿಗೆಯ ಬಗ್ಗೆ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀ ಅಮರೇಶ್ ಕುಂಬಾರ್ ಸರ್ ಅವರು ಮಾತನಾಡಿದರು. ಕಾರ್ಯಕ್ರಮದ ಸಾನಿಧ್ಯ ವಹಿಸಿ ಆರ್ಶಿವಚನ ನೀಡಿದ ಶ್ರೀ ಗುರುಪಾದ ಮಹಾಸ್ವಾಮಿಗಳು ಫಕೀರೇಶ್ವರ ಮಠ ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತಿ ಬೆಳೆಸುತ್ತೇವೆಯೋ ಅವುಗಳ ಮೂಲಕ ಶ್ರೇಷ್ಠ ವ್ಯಕ್ತಿಗಳಾಗಿ ಹೊರಹೊಮ್ಮುತ್ತಾರೆ ಎಂದು ತಿಳಿಸಿದರು. ಮಕ್ಕಳಿಗೆ ಪಠ್ಯದ ಕಲಿಕೆಯೊಂದಿಗೆ ಮಾನವೀಯ ಮೌಲ್ಯಗಳ ಮೂಲಕ ಉತ್ತಮ ಸಂಸ್ಕಾರ ನೀಡಿ ಬೆಳೆಸಬೇಕು ಎಂದು ಬಿ.ಡಿ.ಎಮ್. ಕಾಲೇಜಿನ ಪ್ರಾಂಶುಪಾಲ ಪ್ರೊ. ಶಿವಲಿಂಗಣ್ಣ ಸಾಹು ಅವರು ಅಭಿಪ್ರಾಯಪಟ್ಟರು.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ ಈಗಿನ ಕಾಲದಲ್ಲಿ ನಾವು ಪರಿಸರವನ್ನು ಕಾಪಾಡದಿದ್ದರೆ ಮುಂದಿನ ಪೀಳಿಗೆಗೆ ಬಹುದೊಡ್ಡ ಕುತ್ತು ಬಂದಿತ್ತು ಎಂದು ಸಹಾಯಕ ತೋಟಗಾರಿಕೆ ನಿರ್ದೇಶಕರು ಶ್ರೀ ಭೀಮರಾವ್ ಕುಂಬಾರ್ ಸರ್ ಅವರು ವ್ಯಕ್ತಪಡಿಸಿದರು. ಸಂಸ್ಥೆಯ ಅಧ್ಯಕ್ಷರಾದ ಕು. ಸಂಗೀತಾ ಹೂಗಾರ್ ಹಾಗೂ ಕಾರ್ಯದರ್ಶಿಗಳಾದ ಕು. ಸುರೇಖಾ ಕುಂಬಾರ್ ಉಪಸ್ಥಿತಿ ಇದ್ದರು. ಕಾರ್ಯಕ್ರಮದಲ್ಲಿ ಮಕ್ಕಳ ನೃತ್ಯ ಹಾಗೂ ಸಂಗೀತವನ್ನು ಆನಂದಿಸಿ ಪೋಷಕರು ಹರ್ಷ ವ್ಯಕ್ತಪಡಿಸಿದರು. ಸಂಗೀತ ಕಲಾವಿದರು ಚಂದ್ರಶೇಖರ್ ಗೋಗಿ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.ಶರಣು ಯಡ್ರಾಮಿ ನಿರೂಪಿಸಿದರು, ಕು. ಅಂಬಿಕಾ ಸ್ವಾಗತಿಸಿದರು,ಕು. ಸೃಷ್ಟಿ ವಂದಿಸಿದರು.

# ವಿದ್ಯಾರ್ಥಿಗಳು ಉತ್ತಮ ಮೌಲ್ಯ ಅಳವಡಿಸಿಕೊಳ್ಳಿ: ಚನ್ನಶೆಟ್ಟಿ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ವಿದ್ಯಾರ್ಥಿಗಳು ಶಿಸ್ತು,ಸಂಸ್ಕಾರದಂತಹ ಉತ್ತಮ ಮೌಲ್ಯ ರೂಢಿಸಿಕೊಂಡು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬದುಕಬೇಕೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಚನ್ನಶೆಟ್ಟಿ ಹೇಳಿದರು. ತಾಲೂಕಿನ ನಿರ್ಣಾ ಗ್ರಾಮದ ಜ್ಞಾನ

ದೀಪ ಶಿಕ್ಷಣ ಸಂಸ್ಥೆಯ ಜ್ಞಾನದೀಪ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ16ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆ ನಡೆಸುವುದು ಬಹಳ ಕಷ್ಟಕರವಾಗಿದೆ, ಅದರಲ್ಲಿ ಕನ್ನಡ ಮಾಧ್ಯಮ ಶಾಲೆ ಬೆಳೆಸುತ್ತಿರುವದು ಸಂತೋಷ ಎಂದರು. ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಹೊಂದುವಲ್ಲಿ ಪೋಷಕರ ಪಾತ್ರ ಮುಖ್ಯ. ಪೋಷಕರ ಸಹಕಾರದಿಂದ ವಿದ್ಯಾ ಸಂಸ್ಥೆಯಲ್ಲಿ ಉತ್ತಮ ವಿದ್ಯಾರ್ಥಿಗಳು ರೂಪುಗೊಂಡು ಶಾಲೆಗೆ ಕೀರ್ತಿ ಬರುವಂತಾಗುತ್ತದೆ ಎಂದು ತಿಳಿಸಿದರು. ಪತ್ರಕರ್ತ ನವೀನ ಗಂಜಿ ಮಾತನಾಡಿ, ಇವತ್ತಿನ ಕಾಲದಲ್ಲಿ ಒಂದು ಮನೆ ನಡೆಸುವುದು ಕಷ್ಟವಾಗಿದೆ ಆದರೆ ಗ್ರಾಮೀಣ ಭಾಗದಲ್ಲಿ ಸಣ್ಣ ಸಣ್ಣ ಮಕ್ಕಳನ್ನು ತೆಗೆದುಕೊಂಡು ಶಾಲೆ ನಡೆಸಿಕೊಂಡು ಬರುತ್ತಿರುವದು ಹೆಮ್ಮೆ ಎಂದರು. ಎಲ್ಲಾ ಮಕ್ಕಳು ಒಂದೇ ತರಹ ಇರುವುದಿಲ್ಲ ಅವರ ಮಾನಸಿಕ ಬೆಳವಣಿಗೆಯ ಆಧಾರದ ಮೇಲೆ ಓದಲು ಅವಕಾಶ ನೀಡಬೇಕು ಎಂದು ಹೇಳಿದರು. ಪತ್ರಕರ್ತ ರಾಜಕುಮಾರ ಆರ್. ಹಡಪದ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಮರಿಮಾಸಿ ಹೋಗುತ್ತಿದೆ ಅದರಲ್ಲಿ ಕೂಡ ಗ್ರಾಮೀಣ ಭಾಗದಲ್ಲಿ ಕನ್ನಡ ಮಾಧ್ಯಮ ಶಾಲೆ ಪ್ರಾರಂಭಿಸಿ ಕನ್ನಡ ಭಾಷೆಯ ಉಳಿವಿಗೆ ಜ್ಞಾನದೀಪ ಶಿಕ್ಷಣ ಸಂಸ್ಥೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು. ಪರೀಕ್ಷಾ ದಿನಗಳು ಸಮೀಪಿಸುತ್ತಿರುವುದರಿಂದ ಮೊಬೈಲ್,ಟಿವಿಗಳಿಂದ ವಿದ್ಯಾರ್ಥಿಗಳು ದೂರವಿರಬೇಕು. ಓದಿನ ಕಡೆಗೆ ಗಮನ ಹರಿಸಬೇಕು ಎಂದರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ನೀಡಬೇಕು ಎಂದರು. ಸಂಸ್ಥೆಯ ಅಧ್ಯಕ್ಷ ಸಂಜೀವಕುಮಾರ ಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸುಮಾರು16 ವರ್ಷಗಳಿಂದ ನಮ್ಮ ಶಾಲೆಯು ಸಮಾಜಕ್ಕೆ ಉತ್ತಮ ವಿದ್ಯಾರ್ಥಿಗಳನ್ನು ನೀಡುತ್ತಿದೆ. ಈಗಾಗಲೇ ಸಾವಿರಾರು ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು ಉನ್ನತ ಹುದ್ದೆಗಳಲ್ಲಿದ್ದಾರೆ. ಇತ್ತೀಚೆಗೆ ನಮ್ಮ ಶಾಲೆಯಲ್ಲಿ ಶಿಕ್ಷಣ ಪಡೆದು ದೇಶ ಸೇವೆ ಮಾಡುತ್ತಿದ್ದಾನೆ. ಇದು ನಮ್ಮ ಶಿಕ್ಷಣ ಸಂಸ್ಥೆಗೆ ಹೆಮ್ಮೆ ನೀಡಿದೆ ಎಂದರು. ಶಿಕ್ಷಣ ಸಂಸ್ಥೆ ನಡೆಸಲು ಬಹಳಷ್ಟು ಆರ್ಥಿಕ ಕಷ್ಟ ಬಂದಿದ್ದರು ಸಹ ಆ ಕಷ್ಟದಲ್ಲೇ ಇವತ್ತು ನಮ್ಮ ಶಿಕ್ಷಣ ಸಂಸ್ಥೆ ಬೆಳೆದು ಬಂದಿದೆ, ಇದಕ್ಕೆ ಶಿಕ್ಷಕರ, ಹಾಗೂ ಪಾಲಕರ ಸಹಕಾರವಿದೆ ಎಂದರು. ಈ ಸಂದರ್ಭದಲ್ಲಿ ಕನ್ನಡ ಸೇನೆ ಸಂಘಟನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ, ಸಿ.ಆರ್.ಪಿ. ಪ್ರಭು ಕುಂಬಾರ, ಪಿಕೆಪಿಎಸ್ ಉಪಾಧ್ಯಕ್ಷ ಮಲ್ಲಪ್ಪ ಕೋರಿ, ವೀರಶೆಟ್ಟಿ ಮಲ್ಲಪ್ಪನೋರ್, ಪತ್ರಕರ್ತರಾದ ವಿದ್ಯಾಸಾಗರ ಕಟ್ಟಿಮನಿ, ಸಜೀಶ್ ಲಂಬೂನೂರ್, ಶಾಲೆಯ ಮುಖ್ಯ ಮಹೇಬೂಬ್, ದತ್ತು ಪಟ್ಟಣಕರ್ ಸೇರಿದಂತೆ ಸಿಬ್ಬಂದಿ ವರ್ಗದವರು, ಪಾಲಕರು, ವಿದ್ಯಾರ್ಥಿಗಳು ಇದ್ದರು.

# ಮ್ಯಾಚ್ ಡೇ 2026 ಆಯೋಜಿಸಿದ ಗೋಯಿಂಗ್ ಟು ಸ್ಕೂಲ್ ಸಂಸ್ಥೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸೃಜನಶೀಲ ಲಾಭರಹಿತ ಸಂಸ್ಥೆ ಆಗಿರುವ 'ಗೋಯಿಂಗ್ ಟು ಸ್ಕೂಲ್' ಸಂಸ್ಥೆಯು ಕರ್ನಾಟಕ ಸರ್ಕಾರ, ಒರಾಕಲ್, ಬ್ರಿಟಿಷ್ ಟೆಲಿಕಾಂ (ಬಿಟಿ) ಗ್ರೂಪ್, ಬ್ರಿಟಿಷ್ ಏಷ್ಯನ್ ಟ್ರಸ್ಟ್ ಮತ್ತು ಬೆಂಗಳೂರು ಎಫ್‌ಸಿ ಸಹಭಾಗಿತ್ವದಲ್ಲಿ ವಿನೂತನ ಕಾರ್ಯಕ್ರಮವಾದ 'ಮ್ಯಾಚ್ ಡೇ'ಯನ್ನು ಅದ್ದೂರಿಯಾಗಿ ಆಯೋಜಿಸಿದೆ. ಬೆಂಗಳೂರಿನ ಜೆ.ಪಿ. ನಗರದ ಜಯಪ್ರಕಾಶ್ ನಾರಾಯಣ್ ಕ್ರೀಡಾಂಗಣದಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.



'ಮ್ಯಾಚ್ ಡೇ' ಕಾರ್ಯಕ್ರಮದಲ್ಲಿ 2,000 ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಅವರ ಶಿಕ್ಷಕರು ಹಾಗೂ ಪಾಲುದಾರ ಸಂಸ್ಥೆಗಳ 100 ಸ್ವಯಂಸೇವಕರು ಪಾಲ್ಗೊಂಡರು.

ಗುಲಾಬಿ ಮತ್ತು ಹಸಿರು ಬಣ್ಣದ ಫುಟ್‌ಬಾಲ್ ವೇದಿಕೆಯಲ್ಲಿ ನಡೆದ ಪ್ರಶ್ನೋತ್ತರ ಕಾರ್ಯಕ್ರಮಗಳಿಂದ ಹಿಡಿದು, ಒರಾಕಲ್ ಮತ್ತು ಬಿಟಿ ಗ್ರೂಪ್ ಸ್ವಯಂಸೇವಕರು ಮುನ್ನಡೆಸಿದ ಒಂಬತ್ತು ಕೋಡಿಂಗ್ ಸವಾಲುಗಳ ಟೆಂಟ್ ಗಳವರೆಗೆ ವಿವಿಧ ಕಾರ್ಯಕ್ರಮಗಳು ನಡೆದುವು. ಈ ಸಂದರ್ಭದಲ್ಲಿ ಎಲ್ಲಾ ಪಾಲುದಾರರು ಯುವಜನರೊಂದಿಗೆ ಸಂವಾದ ನಡೆಸಿದರು. ಬೆಂಗಳೂರು ಎಫ್‌ಸಿ ಮಹಿಳಾ ತಂಡವು ಕ್ರೀಡಾ ಶಕ್ತಿಯನ್ನು ಪ್ರದರ್ಶಿಸಿತು; ಇದು ನಮ್ಮೆಲ್ಲರನ್ನು ಒಟ್ಟಾಗಿ ಆಟವಾಡಲು,

ಕಲಿಯಲು ಮತ್ತು ನಗರ ಮಟ್ಟದಲ್ಲಿ ಸಮಾನತೆ ಹೊಂದಲು ಹಾಗೂ ಬದಲಾವಣೆಗಾಗಿ ಸಿದ್ಧರಾಗಲು ಪ್ರೇರೇಪಿಸಿತು.

ಈ ಕಾರ್ಯಕ್ರಮವು ಹೆಣ್ಣುಮಕ್ಕಳು, ಅವರಿಗೆ ಬೆಂಬಲವಾಗಿ ನಿಲ್ಲುವ ಗಂಡುಮಕ್ಕಳು, ಜೀವನ ಕೌಶಲ್ಯಗಳು, ಡಿಜಿಟಲ್ ಕೌಶಲ್ಯಗಳು, ಶಿಕ್ಷಣ, ಕ್ರೀಡೆ, ನಗರದ ಅಭಿವೃದ್ಧಿ, ಹವಾಮಾನ ಬದಲಾವಣೆ ಮತ್ತು ತಂತ್ರಜ್ಞಾನದ ಸಮಾಗಮವಾಗಿರುವ ಅಪೂರ್ವ ಕಾರ್ಯಕ್ರಮವಾಗಿ ಮೂಡಿಬಂದಿತು.


# ಕಿಲ್ಲನಕೇರಾದಲ್ಲಿ ಯುಗಮಾನೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಗದ್ಗುರು ಶ್ರೀ ರೇಣುಕಾಚಾರ್ಯ ರ ಜಯಂತಿಯನ್ನು ಯುಗಮಾನೋತ್ಸವ ದಿನ ಎಂದು ಶ್ರೀ ಚೆನ್ನವಿರೇಶ್ವರ ಸಂಸ್ಥಾನ ಮೂಲ ಮಠ ಕಿಲ್ಲನಕೇರಾ ದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅರ್ಚಕರಾದ ಶಿವಾನಂದ ಸ್ವಾಮಿ, ವಿರೇಶ್ ಸ್ವಾಮಿ, ತೋಟಪಯ್ಯ ಸ್ವಾಮಿ, ಚಂದ್ರಕಲಾ ಗಾಳಿಮಠ, ಚನ್ನಮ್ಮ ಹಿರೇಮಠ, ರಾಜಶೇಖರಗೌಡ ಮಾಲಿ ಪಾಟೀಲ್, ಮಲ್ಲಿಕಾರ್ಜುನ ಗೌಡ ಮಾಲಿ ಪಾಟೀಲ್, ಅಂಬ್ರೆಶಗೌಡ, ಹಳ್ಳೆಪ್ಪ ಧೋತ್ರೆ, ಮೋನಪ್ಪ ಸಾವುಕಾರ, ಮಲ್ಲಪ್ಪ ಶೆಟ್ಟಿ, ನರಸಿಂಗಪ್ಪ ಬಡಿಗೇರ, ಬಸವರಾಜ್ ಸಜ್ಜನ್, ಶ್ರೀನಾಥ ಧೋತ್ರೆ, ಉಮೇಶ್

# ವಿಶ್ವಕ್ಕೆ ಶಾಂತಿಮಂತ್ರ ಸಾರಿದ ಮಹಾನ್ ಪುರುಷ ರೇಣುಕಾಚಾರ್ಯರು: ಮಂಜುನಾಥ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಇಡೀ ವಿಶ್ವಕ್ಕೆ ಶಾಂತಿಮಂತ್ರ ಪಸರಿಸಿ, ಮಾನವ ಜನ್ಮಕ್ಕೆ ಜಯವಾಗಲಿ ಎಂದು ಸಂದೇಶ ಸಾರಿದ ಮಹಾನ್ ಚೇತನ ಜಗದ್ಗುರು ಆದಿ ರೇಣುಕಾಚಾರ್ಯರು ಎಂದು ಪಟ್ಟಣದ ಪ್ರಮುಖರಾದ ಮಂಜುನಾಥ ನಾಡಗೌಡ ಹೇಳಿದರು.

ತಾಲೂಕಿನ ಹರಿಶಂಕರ ಬಂಡಿ ಸೇರಿದಂತೆ ವಿವಿಧ ಗ್ರಾಮಗಳು ಹಾಗೂ ಬಸ್ ಡಿಪೋ, ಜಗದ್ಗುರು ರೇಣುಕಾಚಾರ್ಯರ ವೃತ್ತ ಸರ್ಕಾರಿ ಕಚೇರಿಗಳಲ್ಲಿ ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಪಟ್ಟಣದ ತಹಸಿಲ್ದಾರರ ಕಾರ್ಯಾಲಯದಲ್ಲಿ ಜಯಂತಿ ಆಚರಣೆಯಲ್ಲಿ ಪಾಲ್ಗೊಂಡ ಪ್ರಮುಖ ಮಂಜುನಾಥ ನಾಡಗೌಡ ಮಾತನಾಡುತ್ತಾ ಪ್ರಮುಖವಾದ ಪಂಚಪೀಠಗಳಲ್ಲಿ ರಂಭಾಪುರಿ ಪೀಠದ ಮೂಲಪುರುಷರಾದ ಶ್ರೀ ರೇಣುಕಾಚಾರ್ಯರು ಜಗತ್ತಿಗೆ ಶಾಂತಿಮಂತ್ರ ಸಾರಿದ ಮಹಾನ್ ಪುರುಷರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಾನವರು ಧರ್ಮದ ಹೆಸರಿನಲ್ಲಿ ಯುದ್ಧ ಮಾಡುತ್ತಾ ಮಾನವ ಜನಾಂಗವೇ ನಶಿಸಿಹೋಗುವ ಭೀತಿಯಲ್ಲಿದೆ. ಆದರೆ ಈ ನೆಲದಲ್ಲಿ ಅವತಾರ ತಾಳಿದ ಮಹಾನ್ ಪುರುಷರು ಶಾಂತಿ ಮಂತ್ರ ಸಾರುತ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳಿದ್ದು ಇಂತಹ ನೆಲದಲ್ಲಿ ಜನ್ಮ ಪಡೆದಿರುವ ನಾವೆಲ್ಲರೂ ಪುಣ್ಯವಂತರು. ಜಾತಿ ಜಾತಿಗಳ ತಿಕ್ಕಾಟ, ಧರ್ಮ ಧರ್ಮಗಳ ಮಧ್ಯ ಮಾನವ ಜನ್ಮದ ಸಾರ್ಥಕತೆಯನ್ನು ತಿಳಿಸಿ ಇಡೀ ವಿಶ್ವಕ್ಕೆ ಶಾಂತಿ ಪತ್ರವನ್ನು ಸಾರಿದ ಮಹಾನ್ ಪುರುಷ ರೇಣುಕಾಚಾರ್ಯರಾಗಿದ್ದು ಇಂತಹ ಮಹಾನ್ ಪುರುಷನನ್ನು ಕೇವಲ ಒಂದು ಜಾತಿಗೆ ಮಾತ್ರ ಸೀಮಿತಗೊಳಿಸದೆ ಪ್ರತಿಯೊಬ್ಬರು ಅವರ ತತ್ವದರ್ಶಗಳು ಹಾಗೂ ಅವರ ಶಾಂತಿ ಮಂತ್ರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರಮುಖರಾದ ಶಿವಕುಮಾರ ನಾಗಲಾಪುರ ಮಠ ಮಾತನಾಡುತ್ತ ಮಾನವೀಯ ಮೌಲ್ಯಗಳನ್ನು ಅರಿತುಕೊಂಡು ಬಾಳುವಂತೆ ಶಾಂತಿ ಮಂತ್ರವನ್ನು ಸಾರಿ ಸಮಾಜ ಪರಿವರ್ತನೆಗೆ ಶ್ರಮಿಸಿದ ರೇಣುಕಾಚಾರ್ಯರು ಪ್ರತಿಯೊಬ್ಬ ಮಾನವನಿಗೆ ಆದರ್ಶ ಪ್ರಿಯರಾಗಿದ್ದಾರೆ ಎಂದು ಹೇಳಿದರು.

ಈ ವೇಳೆಯಲ್ಲಿ ಜಂಗಮ ಸಮುದಾಯದ ತಾಲೂಕ ಅಧ್ಯಕ್ಷ ಮಹೇಶ ಕಲ್ಮಠ, ಗ್ರೇಡ್ 2 ತಹಸಿಲ್ದಾರ ಮುರಳಿದರಾವ್ ಕುಲಕರ್ಣಿ, ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಗೌಡರ, ಪ್ರಮುಖರಾದ ಸಿದ್ದಲಿಂಗಯ್ಯ ಬಂಡಿ ಮಠ, ವೀರಯ್ಯ ದೇವಗಣಮಠ, ಶರಣಯ್ಯ ಹುಣಸಿಮರದ ಚನ್ನಬಸಯ್ಯ ದೂಪದ,

ಹರೀಶ್ವರಯ್ಯ ಹಿರೇಮಠ, ಮಹಮ್ಮದ್ ಮುಸ್ತಫಾ, ಬಸಯ್ಯ ದೇವರಳ, ರುದ್ರಯ್ಯ ನೆಟಾಲಿ, ಬಸಯ್ಯ ಸಾಲಿಮಠ ಸೇರಿದಂತೆ ವಿವಿಧ ಸಮಾಜದ ಮುಖಂಡರು, ಕರೆಯಲಾಯದ ಸಿಬ್ಬಂದಿಗಳು ಉಪಸ್ಥಿತರಿದ್ದರು

# ಧೂಳಿನಿಂದ ಬೆಸತ್ತ ವಾಹನ ಸವಾರರು ಕಾಮಗಾರಿಯಲ್ಲಿ ಬರೀ ಧೂಳು ಧೂಳು



• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಪಟ್ಟಣದ ಪೈಪ್ ಲೈನ್ ಕಾಮಗಾರಿಕೆ ನಡೆ-ಯುತ್ತಿದ್ದು ಅಗಿದ ಮಣ್ಣನ್ನು ರಸ್ತೆ ಪಕ್ಕ ಹಾಕಿ ವಾಹನ ಚಾಲಕರಿಗೆ ಹಾಗೂ ಸಾರ್ವಜನಿಕರಿಗೆ ದಿನನಿತ್ಯ ಧೂಳಿನಿಂದ ಬೇಸತ್ತು ಹೋಗಿದ್ದಾರೆ . ಮುದಗಲ್ ರಸ್ತೆ ಧೂಳುನಿಂದ ಕೂಡಿ-ಕೊಂಡಿದೆ.

ಆಗಿದ ಮಣ್ಣನ್ನು ಸರಿಯಾಗಿ ಮುಚ್ಚದೆ ದೊಡ್ಡ ದೊಡ್ಡ ಕಂದಕಗಳು ರಸ್ತೆಯಲ್ಲಿ ಎದ್ದು ಕಾಣುತ್ತಿದೆ.

ಅದೇ ರೀತಿಯಾಗಿ ತಾಲೂಕಿನ ಸಮೀಪದ ಮಸ್ಕಿ ಸಿಂಧನೂರ್ ರಸ್ತೆಯ ಗುಡದೂರು .

ಬ್ರಿಜ್ ಕಾಮಗಾರಿಕೆ ನಡೆಯುತ್ತಿದ್ದು ಅಲ್ಲಿಯೂ ಕೂಡ ವಾಹನಗಳ ಓಡಾಟ ಹೋಗುವರ ಸಂದರ್ಭದಲ್ಲಿ ರಸ್ತೆಯ ತುಂಬೆಲ್ಲ ಧೂಳನ್ನು ಹರಡದಾಡುತ್ತಿದ್ದು ಸಂಚಾರಕ್ಕೆ ತೊಂದರೆ ಉಂಟು ಆಗಿದೆ, ದಿನಾಲು ಎರಡು

ಸತಿ ಆ ರಸ್ತೆಯ ಮೇಲೆ ಟ್ಯಾಕ್ಟರನಿಂದ ನೀರು ಹಾಕಿ ಸುಮ್ಮನಾಗುತ್ತಾರೆ ನಂತರ ಅದರ ಬಗ್ಗೆ ಗಮನ ಹರಿಸುವುದಿಲ ಎಂದು ಸಾರ್ವಜನಿಕರಲ್ಲಿ ಕೇಳಿ ಬರುತ್ತಿದೆ

ಇನ್ನಾದರೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಕೂಡಲೆ

ಕಾಮಗಾರಿಕೆ ಬೇಗನೆ ಮುಗಿಸಬೇಕು ಎನ್ನುವುದು ಕಾದು ನೋಡಬೇಕಾಗಿದೆ.

# ಮಸ್ಕಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ



ಮಸ್ಕಿ: ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಅವರು ರೇಣುಕಾಚಾರ್ಯ ರ ಭಾವಚಿತ್ರಕ್ಕೆ ಪುಷ್ಪ ನಮನ ಮಾಡುವ ಮೂಲಕ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ರವಿವಾರ ಆಚರಿಸಲಾಯಿತು.

ಈ ವೇಳೆ,ಜಂಗಮ ಸಮಾಜದ ಯುವ ಘಟಕದ ಅಧ್ಯಕ್ಷ ಸಿದ್ದಯ್ಯ ಹೆಸರೂರು ಹಿರೇಮಠ ಮಾತನಾಡಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಲಿಂಗಾಯತ ಧರ್ಮ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿ ಕೊಳ್ಳಬೇಕು ಎಂದರು.ಈ ವೇಳೆ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಸಮಾಜದ ಅಧ್ಯಕ್ಷ ಕರಿಬಸ್ಸಯ್ಯ ಸ್ವಾಮಿ,ಡಾ.ಪಂಚಾಕ್ಷರಯ್ಯ ಸ್ವಾಮಿ ಕಂಬಾಳಿಮಠ,ಬಸವರಾಜ ಸ್ವಾಮಿ,ಹಸ್ಮಕಲ್,ವೀರೇಶ ಹಿರೇಮಠ,ಗಂಗಾಧರ ಕಂಬಾಳಿಮಠ, ವಿಜಯಕುಮಾರ,ಶರಣಬಸವ, ಬಸವರಾಜ ಹೊಸಮಠ,ಮಹೇಶ್,

ಶಿವರಾಜ್ ಬುಕ್ಕಣ,ಬಸವರಾಜ ಬುಕ್ಕಣ್ಣ, ಸೇರಿದಂತೆ ಸಮಾಜದ ಪ್ರಮುಖ ಮುಖಂಡರು,ಪದಾಧಿಕಾರಿಗಳು ಪುರಸಭೆ ಸಿಬ್ಬಂದಿಗಳು ಇದ್ದರು.



ಬಸವಕಲ್ಯಾಣ :- ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ನಿಮಿತ್ಯ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚೆನ್ನವೀರ ಶಿವಾಚಾರ್ಯರು ಜಗದ್ಗುರು ಶ್ರೀ ರೇಣುಕಾಚಾರ್ಯರ ಭಾವಚಿತ್ರಕ್ಕೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ ಹಾರಕೂಡ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಮಾಜಿ ಶಾಸಕ ಮಂಜುನಾಥ್‌ರಿಂದ ರಂಜಾನ್ ಕಿಟ್ಟ್

• ಮಲ್ಲಮ್ಮ ನುಡಿ ವಾರ್ತೆ, ಹುಣಸೂರು

ಮೈಸೂರು ಜಿಲ್ಲಾ ವಕ್ಫ್ ಬೋರ್ಡಿನವತಿಯಿಂದ ತಾಲ್ಲೂಕಿನ ಇಮಾಮ್-ಮೌಝುನ್ ಗಳಿಗೆ ದಿನಸಿ ಪದಾರ್ಥಗಳನ್ನು (ರಂಜನ್ ಕಿಟ್)ನ್ನು ಜೊತೆಗೆ ಹಾಗೂ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ತಮ್ಮ ವ್ಯಕ್ತಿಕ ಹಣ ಸಹಾಯಧನ ಕೂಡ ವಿತರಣೆಯನ್ನು ನಗರ ಹೃದಯ ಭಾಗವಾದ ದೊಡ್ಡ ಮಸೀದಿ ಬೀದಿಯಲ್ಲಿರುವ ಮಸ್ಜಿದೇ ಆಲಾ ದಲ್ಲಿ ಸಭಾಂಗಣದಲ್ಲಿ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಹಾಗೂ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಅಜಜಲ್ಲಾ ಅಜ್ಜು ಹಾಗೂ ಸದಸ್ಯರು ಅಜ್ಗರ್ ಪಾಶ ಸಿದ್ದೀಕ್ ಅಮ್ಜತ್ ವಿತರಿಸಿದರು

ನಂತರ ಸುದ್ದಿಗಾರರೊಂದಿಗೆ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಮಾತನಾಡಿ ಮಾಜಿ ರಂಜನ್ ಹಬ್ಬದ ಪುಣ್ಯ ದಿನದುಂದು ತಮ್ಮ ಸ್ವಂತ ವಾಗಿ ಇಮಾಮ್ ಮತ್ತು ಮೌಝುನ್ ಗಳಿಗೆ ನಗದು ಉಡುಗೊರೆ ಯನ್ನು ನೀಡಿ ಅವರನ್ನ ಶುಭಕೋರಿದರು.

ಈ ತಾಲೂಕಿನ ಮಾಜಿ ಶಾಸಕರಾದ ಎಚ್ ಪಿ ಮಂಜುನಾಥ್ ಅವರು ಅಲ್ಪಸಂಖ್ಯಾತಕರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಇಟ್ಟುಕೊಂಡು ಅವರ ಕಷ್ಟಸುಖಗಳಿಗೆ ಭಾಗಿಯಾಗುವಂತಹ ಕಾರ್ಯಗಳನ್ನು ಮಾಡಿದ್ದಾರೆ ಹಾಗಾಗಿ ಅವರನ್ನು ಶ್ಲಾಘನಿಸುತ್ತೇನೆ ಎಂದರು.

ಈ ವಖ್ಫ್ ಬೋರ್ಡಿಗೆ ಹೊಸ ಮಾದರಿ, ಹೊಸ ಶೆಪ್, ಹೊಸ ದಿಕ್ಸೂಚಿ ಹಾಗೂ ಹೊಸ ದಾರಿಯನ್ನು ತೆರೆದಿದ್ದಿದ್ದೇ ಅಜಜಲ್ಲಾ ಅಜ್ಜು ಅವರು ಎಲ್ಲಾರಿಗೂ ಗೊತ್ತಿತ್ತು ಅದು ಇದೆ ಅಂತ ಅದು ಏನು ಮಾಡುತ್ತೆ ಅಂತ ಯಾರಿಗೂ ಗೊತ್ತಿರಲಿಲ್ಲ ಆದರೆ ಈಗ ಹೋಗುತ್ತಿರುವ ರೀತಿ ಅವರ ಆತ್ಮದಲ್ಲೇ ಕಾಯ ವಾಚ ಮನ್ಸ ನಾನು ಒಳ್ಳೆಯದನ್ನು ಮಾಡಬೇಕು ಎಂದು ಅಜ್ಜು ಬಗ್ಗೆ ಗುಣಗಾನ ಮಾಡಿದರು.



ಬಿಳಿಕೆರೆಯಲ್ಲಿ ಗೊಮಟಗೇರಿ ಅಲ್ಪಸಂಖ್ಯಾತರ ಸೇರಿದವರು ಜೈನ್ ಸಮುದಾಯ ಅವರಿಗೂ ಕೂಡ ಸರ್ಕಾರದಿಂದ ಒಂದು ಕೋಟಿ ರೂಪಾಯಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಸಚಿವರನ್ನು ಮನವೊಲಿಸಿ, ಶಬೀರ್ ನಗರ ಅಭಿವೃದ್ಧಿಗಾಗಿ ಅನುದಾನವನ್ನು ಒದಗಿಸಿದ್ದೇನೆ ಎಂದರು.

ತಾಲೂಕಿನಲ್ಲಿ ಮುಸ್ಲಿಂ ಸಮುದಾಯದವರು ನನಗೆ ಮನೆ ಮಗ ಅಂತೆ ಬಾಲ್ಯದಿಂದಲೂ ಪ್ರೀತಿ ನೀಡುತ್ತಾ ಬರುತ್ತಿರುವ ಅದು ನನಗೆ ಸಂತೋಷದ ವಿಷಯ ರಾಜಕಾರಣ ಸೋಲು ಗೆಲುವು ಸಹಜ ಆದರೆ ಈ ಸಮುದಾಯದ ಪ್ರೀತಿ ಆಶೀರ್ವಾದ ಸಹಕರಿಸುತ್ತಾ ಬಂದಿದ್ದಾರೆ ಅವರಿಗೆ ನಾನು ಕೂಡ ಅಭಿವೃದ್ಧಿ ವಿಚಾರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ಸಂಪೂರ್ಣವಾಗಿ ನಾನು ಅವರ ಸದಾ ನಿಮ್ಮ ಬೆಂಬಲಕ್ಕೆ ನಾನು ಶಕ್ತಿಯಾಗಿ ಸಂಪೂರ್ಣ ಸಹಕರಿಸಿ ನಿಮ್ಮ ಶಕ್ತಿಯಾಗಿ ನಾನು ಸದಾ ನಿಲ್ಲುತ್ತೇನೆ ಎಂದು ತಿಳಿಸಿದರು

ಜಿಲ್ಲಾ ವಕ್ ಬೋರ್ಡ್ ಅಧ್ಯಕ್ಷರು ಅಜೀಝುಲ್ಲಾ ಅಜ್ಜು ಮಾತನಾಡಿದ ವಖ್ಫ್ ಬೋರ್ಡ್ ಎಂದರೆ ಮುಸ್ಲಿಂ ಸಮುದಾಯದ ಪ್ರತಿಯೊಬ್ಬ ಮಕ್ಕಳ ಹಕ್ಕು ವಕ್ಫ್ ಬೋರ್ಡಿನಲ್ಲಿದೆ ಹಾಗೂ ಅವರು ಮುಂದಿನ ಬರುವಂತಹ ಪೀಳಿಗೆಗೆ ಬಹಳಷ್ಟು ಆಸ್ತಿಗಳನ್ನು ಅಲ್ಲಾಹನ ಹೆಸರಿನಲ್ಲಿ ದಾನವಾಗಿ(ವಕ್ಫ್) ಮಾಡಿ ಹೋಗಿದ್ದಾರೆ ಎಂದು ವಿವರಿಸಿದರು.

ನಮ್ಮ ಕಮಿಟಿ ಬಂದು ಸುಮಾರು ಆರು ತಿಂಗಳಾತು ಮಸೀದಿಗಳ ಅಭಿವೃದ್ಧಿಗಳ ಜೊತೆಗೆ ಬರುವಂತಹ ಆದಾಯಗಳಿಂದ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕ, ಬಡ ರೋಗಿಗಳಿಗೆ ಔಷದ ಉಪಚಾರಗಳಿಗೆ ಮತ್ತು ಆಸ್ಪತ್ರೆಯ ಶುಲ್ಕ ಹಾಗೂ ಕರೋನ ಸಮಯದಲ್ಲಿ ಮನೆಯ ಯಜಮಾನ ಸಾವನ್ನಪ್ಪಿದ ಸಾಕಷ್ಟು ಮಹಿಳೆಯರು ವಿಧವೆಗಳಾದರು ಹಾಗಾಗಿ ಅವರುಗಳನ್ನು ಗುರುತಿಸಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು ನಮ್ಮ ವಕ್ಫ್ ಬೋರ್ಡ್ ನಿಂದ ಹೊಲಿಗೆ ಯಂತ್ರಗಳನ್ನು ಜೊತೆಗೆ ಒಂದೆ ಮಸೀದಿಗಳಲ್ಲಿ ಇಪ್ಪತ ರಿಂದ ಇಪ್ಪತೈದು ವರ್ಷಗಳಿಂದ 'ಕಾರ್ಯನಿರ್ವಾಹಿಸುವವರನ್ನು ಗುರುತಿಸಿ ಅವರನ್ನ ಅಭಿನಂದಿಸಿ ಪ್ರೋತ್ಸಾಹ ನೀಡಿ ಗೌರವಿಸಲಾಯಿತು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಜೀದೆ ಆಲ ಅಧ್ಯಕ್ಷರು ಆಯುಬ್ ಖಾನ್ ಕಾರ್ಯದರ್ಶಿ ಮಜಾ ಅಹಮದ್ ಸದಸ್ಯರಾದ ಫೈರೋಜ್ ಜಾವಿದ್ ಮುನ್ನ ಮಹಮ್ಮದ್ ಆಶ್ರಯ ಸಮಿತಿಯ ಸದಸ್ಯರಾದ ಮೊಹಮ್ಮದ್ ಸಲಾಉದ್ದೀನ್ ಅಮೀನ್ ಮುಖಂಡರಾದ ಎಚ್ ಎಮ್ ಪಜಲುಲ್ಲಾ ಮುಯಿದ್ದೀನ್ ಪೈಸಲ್ ಸೈಯದ್ ರಿಜ್ವಾನ್ ವಸಿಂ ಮುಜೀಬ್ ಅಹಮದ್ ಫಾಝಿಲ್ ರಾಘು ರವಿ ಯಾಸಿರ್ ಖಾನ್ ಹಾಗೂ ಇನ್ನಿತರು ಹಾಜರಿದ್ದರು.

# ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪರೀಕ್ಷೆ ಶಾಂತಿಯುತ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಇಲ್ಲಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಭಾನುವಾರ ಮೋರಾರ್ಜಿ ದೇಸಾಯಿ ವಸತಿ ಶಾಲೆ ಪರೀಕ್ಷೆ ಶಾಂತಿಯುತವಾಗಿ ಜರುಗಿತು.

ಒಟ್ಟು 408 ವಿದ್ಯಾರ್ಥಿಗಳ ಪೈಕಿ 3 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದು,405 ವಿದ್ಯಾರ್ಥಿಗಳು ಹಾಜರಿದ್ದು,17 ಬ್ಲಾಕ, 8 ಕೊಠಡಿಗಳಲ್ಲಿ ಪರೀಕ್ಷೆ ಬರೆದಿದ್ದಾರೆ ಎಂದು ಮುಖ್ಯ ಅಧೀಕ್ಷಕಿ ಸರೋಜಾದೇವಿ ಪಟ್ಟಣ ಪ್ರಕಟಣೆಗೆ ತಿಳಿಸಿದ್ದಾರೆ. ನಕಲು ತಡೆಯಲು ಮುದಗಲ್ ಅಪರಾಧ ಪಿಎಸೈ ಚನ್ನಬಸವ ಬೇಟಿ ನೀಡಿ ಸೂಕ್ತ ಪೋಲಿಸ್ ಬಂದೋಬಸ್ತ ನೀಡಿದ್ದರು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪರಿಸರ ವಿಜ್ಞಾನದೊಂದಿಗೆ ಮಾನವ ಅವಿನಾಭಾವ ಸಂಬಂಧ ಹೊಂದಿದ್ದು, ಅಂತಹ ಪರಿಸರವನ್ನು ರಕ್ಷಿಸಬೇಕು. ಆಹಾರ ಸರಪಣಿಯಲ್ಲಿಯ ಪ್ರತಿಯೊಂದು ಜೀವಿಯ ಕಾರ್ಯ ಹಾಗೂ ಅವುಗಳ ಮಹತ್ವದ ಕುರಿತು ಮುಂದಿನ ಪೀಳಿಗೆಗೆ ತಿಳಿಸಿಕೊಡಬೇಕಾದ ಅಗತ್ಯವಿದೆ ಎಂದು ಮುಖ್ಯ ಗುರುಗಳು ಬಸವನ ಗೌಡ ತಿಳಿಸಿದರು.

ಪಟ್ಟಣ ಸಮೀಪದ ಪಟ್ಟಣ ಸಮೀಪದ ಕನ್ನಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜನೆ ಮಾಡಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಮಾತನಾಡಿದ ಅವರು ವಿಜ್ಞಾನವು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗದೆ, ದೈನಂದಿನ ಜೀವನದ ಭಾಗವಾಗಬೇಕು. ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಹೊಸ ಆವಿಷ್ಕಾರಗಳು ಸಾಧ್ಯ ಎಂದು ತಿಳಿಸಿದರು. ಶಾಲಾ ಶಿಕ್ಷಕರಿಂದ ಹಾಗೂ ವಿದ್ಯಾರ್ಥಿಗಳಿಂದ ಪ್ರತಿಜ್ಞಾವಿಧಿ ಭೋದಿಸಲಾಯಿತು.

ಸಿಆರ್‌ಪಿ ಸಿದ್ಧಾರಾಮಯ್ಯ, ಅತಿಥಿ ಶಿಕ್ಷಕ ಚಂದ್ರಶೇಖರ, ಸಂಗೀತ ಇದಲಿ, ರಾಜೇಶ್ವರಿ ಸೇರಿದಂತೆ ಇತರರಿದ್ದರು.

# ಅಸಮಾನತೆ ವಿರುದ್ಧ ಧ್ವನಿ ಎತ್ತಿದವರು ರೇಣುಕಾಚಾರ್ಯರು



• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ,

ಜಗದ್ಗುರು ರೇಣುಕಾಚಾರ್ಯರು ಜಾತಿ, ಬೇಧ, ಅಂಧಶ್ರದ್ದೆ ಮತ್ತು ಅಸಮಾನತೆಯ ವಿರುದ್ದ ಧ್ವನಿ ಎತ್ತಿದ ಮಹಾನ್ ವ್ಯಕ್ತಿಯಾಗಿದ್ದರು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೇಣುಕಾಚಾರ್ಯರ ಉಪದೇಶಗಳು ಒಂದೇ ಜಾತಿಗೆ ಸೀಮಿತವಾಗಿರಲಿಲ್ಲ. ಅವರು ಸಮಾಜ ಸುಧಾರಕ, ಮಾನವೀಯ ಮೌಲ್ಯಗಳ ಪ್ರಚಾರಕ ಮತ್ತು ಸಮಾನತೆಯ ಸಂಕೇತವಾಗಿದ್ದರು ಎಂದರು.

ಪ್ರತಿಯೊಬ್ಬ ಮಾನವ ದೇವರ ರೂಪ ಎನ್ನುವ ಭಾವನೆ ಮೂಡಿಸಿ, ಮಾನವ ಸೇವೆಯೇ ಮಹಾ ಸೇವೆ ಎಂದು ಸಾರಿದವರು. ಕಾಯಕದಲ್ಲಿ ನಿಷ್ಠೆ, ನಡೆಯಲ್ಲಿ ನೀತಿ, ಮನದಲ್ಲಿ ಭಕ್ತಿ, ಸಮಾಜದ ಹೊಣೆಗಾರಿಕೆ ಇವೇಲ್ಲವುಗಳು ಬದುಕಿನ ಆಧಾರವಾಗಿವೆ. ಆದ್ದರಿಂದ ಯುವ ಜನತೆ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಪೂಜಾರ ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾತ್ಮರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು. ಕೇವಲ ಜಯಂತಿ ಆಚರಿಸಿದರೆ ಸಾಲದು ಅವರು ಹಾಕಿಕೊಟ್ಟ ಉಪದೇಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಸಮಾಜಕ್ಕೆ ವೀರಶೈವ ಲಿಂಗಾಯತರ ಕೊಡುಗೆ ಅಪಾರವಾಗಿದ್ದು ಸಮುದಾಯ ಅಭಿವೃದ್ಧಿ ಪಥದಲ್ಲಿ ಸಾಗಬೇಕಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಜಯಂತಿ ಆಚರಣೆ ಕೇವಲ ಆಚರಣೆಗಷ್ಟೇ ಸೀಮಿತವಾಗಬಾರದು. ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿಗೆ ಅರ್ಥ ಬರುತ್ತದೆ. ಕಾಯಕವೇ ಕೈಲಾಸ ಎಂಬ ತತ್ವದಡಿ ಪ್ರತಿಯೊಬ್ಬರೂ ತಮ್ಮ ಕಾರ್ಯದಲ್ಲಿ ಶ್ರದ್ದೆ ಮತ್ತು ಪ್ರಾಮಾಣಿಕತೆಯಿಂದ ಬದುಕಬೇಕು ಎಂಬ ಸಂದೇಶ ಸಾರಿದ್ದಾರೆ ಎಂದು ತಿಳಿಸಿದರು.

ಉಪನ್ಯಾಸ ನೀಡಿದ ಗುಳೇದಗುಡ್ಡ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜ ಪ್ರೌಢಶಾಲಾ ಶಿಕ್ಷಕಿ ಡಾ.ಪರಮೇಶ್ವರಿ ಹಿರೇಮಠ ಮಾತನಾಡಿ, ರೇಣುಕಾಚಾರ್ಯರು ಕೇವಲ ಧಾರ್ಮಿಕ ಗುರುಗಳಲ್ಲ. ಅವರು ಸಮಾಜದ ಪರಿವರ್ತಕರೂ ಆಗಿದ್ದರು. ಸಮಾಜದಲ್ಲಿ ಸಮಾನತೆ, ಧರ್ಮನಿಷ್ಠೆಯ ಮೌಲ್ಯಗಳನ್ನು ಬೋಧಿಸಿದವರು. ಅಸಮಾನತೆ ಹೆಚ್ಚಾದಾಗ ಸತ್ಯದ ಮಾರ್ಗವನ್ನು ತೋರಿಸಿ, ಮಾನವ ಸೇವೆಯೇ ಶಿವ ಸೇವೆ ಎಂಬ ತತ್ವವನ್ನು ಸಾರಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕತೇಲಿ, ಗ್ರೇಡ್-2 ತಹಶೀಲ್ದಾರ ಬಿರಾದಾರ ಸೇರಿದಂತೆ ಸಮುದಾಯದ ಮುಖಂಡರಾದ ವಿ.ಬಿ.ಚೌಕಿಮಠ, ಜಿ.ಎನ್.ಪಾಟೀಲ, ಗಿರಿಜಾ ಪಾವಟೆ ಹಾಗೂ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪೂರ್ವದಲ್ಲಿ ಬಾಗಲಕೋಟೆ ನಗರದಲ್ಲಿ ರೇಣುಕಾಚಾರ್ಯರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

# ಕಮಲನಗರ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪವಿತ್ರ ಹೋಳಿ ಹಬ್ಬ ಹಾಗೂ ರಂಜಾನ್ ಮಾಸದ ಹಿನ್ನೆಲೆಯಲ್ಲಿ, ಭಾನುವಾರ ಕಮಲನಗರ ಪೊಲೀಸ್ ಠಾಣೆಯ ಆವರಣದಲ್ಲಿ ಸೌಹಾರ್ದಯುತವಾಗಿ ಹಬ್ಬಗಳನ್ನು ಆಚರಿಸುವ ಕುರಿತು ಶಾಂತಿ ಸಭೆಯನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ದಂಡಾಧಿಕಾರಿಗಳಾದ ಶ್ರೀ ಅಮಿತ ಕುಮಾರ್ ಕುಲಕರ್ಣಿ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿದರು, ತಾಲೂಕಿನಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಜಾಗೃತಿ ವಹಿಸುವುದು, ಪರಸ್ಪರ ಧರ್ಮಗಳ ಭಾವನೆಗಳಿಗೆ ಗೌರವ ನೀಡುವುದು ಮತ್ತು ಶಾಂತಿಯುತವಾಗಿ ಹಬ್ಬಗಳನ್ನು ಆಚರಿಸುವಂತೆ ಹೇಳಿದರು.

ಪಿ. ಎಸ್. ಐ ಆಶಾ ರಾಠೋಡ ಅವರು ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು, ಹಬ್ಬಗಳ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಿದರು.

ಈ ಸಭೆಯಲ್ಲಿ ಗ್ರಾಮದ ಪ್ರಮುಖರು ಹಾಗೂ ವಿವಿಧ ಸಮುದಾಯದ ಮುಖಂಡರು ಭಾಗವಹಿಸಿ, ಹಬ್ಬಗಳನ್ನು ಶಾಂತಿ ಮತ್ತು ಸಾಮರಸ್ಯದಿಂದ ಆಚರಿಸುವ ಭರವಸೆ ನೀಡಿದರು.

# ಹಿಂದೂ ಸಂಸ್ಕೃತಿ ರಕ್ಷಣೆಗೆ ಬದ್ಧರಾಗಿರಬೇಕು



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಎಸ್ ಎನ್ ಪೇಟೆಯಲ್ಲಿನ ಎಂಎಂಟಿಸಿ ಕಾಲೋನಿ ಪಾರ್ಕ್ ನಲ್ಲಿ ಹಿಂದೂ ಸಮ್ಮೇಳನವನ್ನು ವಿಶಾಲ ಹಿಂದೂ ಸಮ್ಮೇಳನ ಸಮತಿಯಿಂದ ಹಮ್ಮಿಕೊಳ್ಳಲಾಗಿತ್ತು.


ಇಲ್ಲಿನ ಸತ್ಯನಾರಾಯಣ ಪೇಟೆಯ ವೆಂಕಟೇಶ್ವರ ದೇವಸ್ಥಾನದಿಂದ. ಆಕರ್ಷಕ ಕೇಸರಿ ಧ್ವಜದ ಮೆರವಣಿಗೆ ವಿವಿಧ ಜನಪದ ಕಲಾ ತಂಡಗಳು ಕುಂಬ ಕಳಸಗಳಿಂದ ಎಂಎಂಟಿಸಿ ಪಾರ್ಕ್ ವರೆಗೆ ನಡೆಯಿತು.

ತದನಂತರ. ವಿವಿಧ ಮಠಾಧೀಶರಿಂದ ಕಾರ್ಯಕ್ರಮ ಉದ್ಘಾಟನೆ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು. ತದನಂತರ ರಂಗೋಲಿ ಸ್ಪರ್ಧೆಯಲ್ಲಿ ಗೆದ್ದಂತಹ ಪ್ರಥಮ. ದ್ವಿತೀಯ. ತೃತೀಯ ಸ್ಥಾನದವರಿಗೆ ಬಹುಮಾನ ವಿತರಿಸಲಾಯಿತು.

ಸಮಾರಂಬವದಲ್ಲಿ ಮಾತನಾಡಿದ ಗಣ್ಯರು, ನಮ್ಮ ಹಿಂದೂ ಸಂಸ್ಕೃತಿ ಸಂರಕ್ಷಣೆಗೆ ಸದಾ ಬದ್ಧರಾಗಿರಬೇಕು. ಅನ್ಯರ ನಮ್ಮ ಸಂಸ್ಕೃತಿ ಮೇಲೆ ದಾಳಿ ಮಾಡುವವರ ವಿರುದ್ದ ಎಚ್ಚರದಿಂದ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಜಿ.ಜನಾರ್ಧನರೆಡ್ಡಿ, ಮಾಜಿ ನಗರ ಶಾಸಕ ಜಿ.ಸೋಮಶೇಖರ ರೆಡ್ಡಿ, ಬಿಜೆಪಿ ಮುಖಂಡರಾದ ಕೆ.ಎಸ್.ದಿವಾಕರ್, ಕೆ.ಎಸ್.ಅಶೋಕ್, ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ನಗರ ಅಧ್ಯಕ್ಷ ಜಿ.ವೆಂಕಟರಮಣ ಮೊದಲಾದವರು ಪಾಲ್ಗೊಂಡಿದ್ದರು.

# ರೇಣುಕಾಚಾರ್ಯ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪುರಸಭೆ, ನಾಢಕಛೇರಿ, ಸಮುದಾಯ ಆರೋಗ್ಯ ಕೇಂದ್ರ, ರೈತ ಸಂಪರ್ಕ ಕೇಂದ್ರ, ವಸತಿ ನಿಲಯ, ಶಾಲಾ ಕಾಲೇಜಿನಲ್ಲಿ ರೇಣುಕಾಚಾರ್ಯ ಜಯಂತಿಯನ್ನು ರವಿವಾರ ಆಚರಣೆ ಮಾಡಿದರು.

ಪುರಸಭೆಯಲ್ಲಿ ರೇಣುಕಾಚಾರ್ಯ ಭಾವಚಿತ್ರಕ್ಕೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಅರ್ಚಕ ಸದಾನಂದ ಸ್ವಾಮಿ ಪೂಜೆ ಸಲ್ಲಿಸಿದರು. ಈ ವೇಳೆ ಪುರಸಭೆ ವ್ಯವಸ್ಥಾಪಕ ಸುರೇಶ, ಚನ್ನಮ್ಮ ದಳವಾಯಿಮಠ, ಸುರೇಂದ್ರ ಗೌಡ ಪಾಟೀಲ್, ಉಮೇಶ ರೇವಳಮಠ ಹಳೇಪೇಟೆ, ಮಹೇಶ್ ವಸ್ತ್ರದ್, ವಿರುಪಾಕ್ಷಯ್ಯ ಸ್ವಾಮಿ, ಮಲ್ಲಪ್ಪ ಮಾಟೂರ, ಸಂಗಮ್ಯಸ್ವಾಮಿ, ಲಿಂಗಪ್ಪ ಹಣಗಿ, ರಾಚಪ್ಪ ಡ್ರೈವರ್, ಅಮರೇಶ ಹೊನ್ನಳ್ಳಿ, ಬಸವರಾಜ ಕುಂಬಾರ, ನೀಲಪ್ಪ ಕಂಬಾರ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್ ಕಛೇರಿಯಲ್ಲಿ ರೇಣುಕಾಚಾರ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಹೂಮಾಲಾರ್ಪಣೆ ಜಯಂತಿ ಆಚರಿಸಿದರು.

ಬಸವರಾಜ ಜಲ್ಲಿ, ಗಂಗಾಧರ ಯಾದವ್, ಜಮೀರ್, ನಂದಪ್ಪ ಕತ್ತಿ, ಗ್ಯಾನಪ್ಪ ಹೋಳ್ಯಾಚಿ, ಕೃಷ್ಣಾ ಚಲುವಾದಿ, ಸಂಗಣ್ಣ ಹಿರೇಮನಿ, ಅಬ್ದುಲ್ ಖದೀರ್ ಸೇರಿದಂತೆ ಇತರರಿದ್ದರು.

# ಕಳ್ಳತನ: ಸ್ಥಳಕ್ಕೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಭೇಟಿ, ಪರಿಶೀಲನೆ




• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಕೆನರಾ ಬ್ಯಾಂಕ್ ನ ಎಂಟಿಎಂ ನಿಂದ ಹಣ ತೆಗೆದುಕೊಡುವ ನೆಪದಲ್ಲಿ ಗ್ರಾಹಕನ 54ಸಾವಿರ ರೂ ಕಳ್ಳರು ದೋಚಿದ ಪ್ರಕರಣ ಹಾಗೂ ರಾಮತ್ನಾಳ ಗ್ರಾಮದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಬಿ ಹರೀಶ ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಗ್ರಾಹಕ ಭೀಮಪ್ಪ ಪರಸಪ್ಪ ಕನ್ನಾಳ ಕೆನರಾ ಬ್ಯಾಂಕಿನಲ್ಲಿ ಹಣ ತರಲು ಹೋದಾಗ ಈ ಘಟನೆ ನಡೆದಿದೆ. ಸಹಾಯ ಮಾಡುವ ನೆಪದಲ್ಲಿ ಕಾರ್ಡ್ ಬದಲಾಯಿಸಿ ಕಳ್ಳರು ಕೈಚಳಕ ತೋರಿಸಿದ್ದಾರೆ. ವಿವಿಧ ಎಂಟಿಎಂನಲ್ಲಿ 54ಸಾವಿರ ರೂ. ಹಣ ಡ್ರಾ ಮಾಡಿ ವಂಚನೆ ಮಾಡಿದ್ದಾರೆ. ಸಮೀಪದ ರಾಮತ್ನಾಳ ಗ್ರಾಮದಲ್ಲಿ ಇತ್ತೀಚಿಗೆ ಶಂಕರಗೌಡ ವಿರುಪಣ್ಣ ಇಟಗಿಯವರ ಮನೆಯಲ್ಲಿ 7ತೂಲಿ ಬಂಗಾರ, ನಗದು ಹಣ ಕಳ್ಳತನವಾಗಿದೆ. ಎರಡು ಪ್ರತ್ಯೇಕ ಪ್ರಕರಣ ಕುರಿತು ಮಾಹಿತಿ ಪಡೆದ ಜಿಲ್ಲಾ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಬಿ ಹರೀಶ ಭೇಟಿ ನೀಡಿ, ಪರಿಶೀಲನೆ ಮಾಡಿದರು. ಎರಡು ಪ್ರಕರಣಗಳನ್ನು ಭೇದಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಳೀಯ ಠಾಣೆ ಪಿಎ ವೆಂಕಟೇಶ ಮಾಡಗಿರಿ ಹಾಗೂ ಇತರರು ಇದ್ದರು.

# ಸೌಹಾರ್ದತೆಯಿಂದ ಹೋಳಿ ಹಬ್ಬ



• ಮಲ್ಲಮ್ಮ ನುಡಿ ವಾರ್ತೆಕೆಂಭಾವಿ

ಹೋಳಿ ಹಬ್ಬದ ಹಿನ್ನೆಲೆಯಲ್ಲಿ ರವಿವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯನ್ನುದ್ದೇಶಿಸಿ ಮಾತನಾಡಿದ ಕ್ರೈಮ್ ಪಿಎಸ್‌ಐ ಹಣಮಂತ ಸಿದ್ದಾಪೂರ ರವರು ಮಾತನಾಡಿ ಹಬ್ಬದ ಸಂಭ್ರಮವು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಮೂಡಿಸುವಂತಿರಬೇಕು ಎಂದ ಅವರು ಪ್ರತಿಯೊಂದು ಹಬ್ಬಕ್ಕೂ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ ಇರುತ್ತದೆ. ಹಬ್ಬಗಳ ಮಹತ್ವವನ್ನು ಅರಿತು, ಪರಸ್ಪರ ಗೌರವದಿಂದ ಸಂಭ್ರಮಿಸುವುದು ಇಂದಿನ ಅಗತ್ಯ, ಹಬ್ಬವು ಕೇವಲ ಬಣ್ಣಗಳಾಟವಾಗದೆ, ಸಮಾಜದಲ್ಲಿ ಅಣ್ಣ-ತಮ್ಮಂದಿರಂತೆ ಸೌಹಾರ್ದತೆ ಮೂಡಿಸುವ ಮಾಧ್ಯಮವಾಗಲಿ ಎಂದು ಕರೆನೀಡಿದರು.

ಸಭೆಯಲ್ಲಿ ಎಎ ಬಸನಗೌಡ, ಹೆಚ್ ಸಿ ಪ್ರಭುಗೌಡ, ಅಂಬ್ರೇಶ, ಪ್ರಮುಖರಾದ ದೇವಿಂದ್ರಪ್ಪ ವಠಾರ, ಖಾಜಾಪಟೇಲ್ ಕಾಚೂರು, ನಯ್ಯೂಮ್ ಖಾಜಿ, ಮೌಲಾನ್ ಸಯ್ಯದ್ ಹುಸೇನ್, ಮಹ್ಮದ್ ನಾಶಿ, ನಿಂಗಣ್ಣ ಕಟ್ಟಿಮನಿ ಸೇರಿದಂತೆ ವಿವಿದ ಸಂಘಟನೆಯ ಪದಾಧಿಕಾರಿಗಳು ಹಾಗೂ ಠಾಣೆ ಸಿಬ್ಬಂದಿ .ಇದ್ದರು

## ಪೊಲೀಸ್ ಇಲಾಖೆಯ ಸೂಚನೆಗಳು

“ ಯಾರಿಗೂ ಬಲವಂತವಾಗಿ ಬಣ್ಣ ಹಚ್ಚುವುದು ಅಥವಾ ಅಸಭ್ಯವಾಗಿ ವರ್ತಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಹಬ್ಬದ ನೆಪದಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಗಲಾಟೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಯಾವುದೇ ಅಹಿತಕರ ಘಟನೆಗಳು ಆಸ್ಪದ ನೀಡಬಾರದು.

# ಬಸವಣ್ಣನವರ ಸಂಕಲ್ಪ ಈಡೇರಿಸಿದ ಕೆಳವರ್ಗದ ಶರಣರು: ಸ್ವಾಮಿಜಿ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಬಸವಣ್ಣನವರ ಎಲ್ಲಾ ಸಂಕಲ್ಪಗಳನ್ನು ಈಡೇರಿಸಿದವರು ಕೆಳವರ್ಗದ ಶರಣರು ಮಾತ್ರ, ಇದರಂತೆ ಬಸವಣ್ಣನವರ ಸದಾಶಯ ಎತ್ತಿಕೊಂಡಿದ್ದವರು ಕೆಳವರ್ಗದ ಶರಣರೇ ಎಂದು ಬೈಲೂರು ನಿಷ್ಕಲ್ ಮಂಟಪ ಪೀಠಾಧಿಪತಿಗಳಾದ ಪೂಜ್ಯಶ್ರೀ ನಿಜಗುಣಾನಂದ ಸ್ವಾಮಿಜಿ ಹೇಳಿದರು. ಇಲ್ಲಿನ ಬಸವ ಧರ್ಮ ಪೀಠದ ಮಾಹಾಮನೆಯ ಭವ್ಯ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಪ್ರತಿಷ್ಠಾನ, ವಿವಿಧ ಬಸವಪರ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಕಲ್ಯಾಣ ನಡಿಗೆ ಮತ್ತು ಹರಳಯ್ಯಾ ಜ್ಯೋತಿಯಾತ್ರೆ ಸಮಾರೋಪ ಸಮಾರಂಭ ಮತ್ತು ಶರಣ ಸಂಸತ್ ಅಧಿವೇಶನ ಹಾಗೂ ಶರಣ ವಂದನೆ, ಶರಣಾರತಿ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ದಲಿತ ವರ್ಗದ ಜನರೇ ಇಂದಿನ ಲಿಂಗಾಯತರು ಎನ್ನುವುದು ಯಾರು ಮರೆಯುವಂತಿಲ್ಲ.




ಮನುಷ್ಯತ್ವದ ಬಗೆ ಶರಣರು ಮಾತನಾಡಿದರು. ಇದರಂತೆ ಬದುಕಿದವರು ಎಲ್ಲಾ ಬಸವಾದಿ ಶರಣರು. ಆರೋಗ್ಯಕರ ಸಮಾಜ ನಿರ್ಮಾಣ ಮಾಡುವುದೇ ಬಸವಾದಿ ಶರಣರ ಸದಾಶಯವಾಗಿತ್ತು. ಅಂತೆಯೇ ಸಮಾಜ ಪ್ರಜ್ಞೆಯನ್ನು ಬಿತ್ತಿ, ಸರ್ವರಲ್ಲಿಯೂ ಮಾನವೀಯತೆಯ ಸಂದೇಶ ಜಾಗೃತಿ ಮೂಡಿಸುವ ಮಹೋನ್ನತ ಪ್ರಯತ್ನ ಮಾಡಿದರು. ಯಾವುದೇ ಕಾಯಕವಾಗಲಿ ಅದು ಸ್ವಾಭಿಮಾನದ ಸಂಕೇತವಾಗಿದೆ. ಮನುಷ್ಯತ್ವಕ್ಕೆ ಗೌರವ ನೀಡಿದ ಧರ್ಮ ಯಾವುದಾದರೂ ಇದ್ದರೆ ಅದು ಲಿಂಗಾಯತ ಧರ್ಮವಾಗಿದೆ .

ಇದೊಂದು ಅರ್ಥಪೂರ್ಣವಾದ ಹಾಗೂ ಜವಾಬ್ದಾರಿಯುತವಾದ ವೇದಿಕೆಯಾಗಿದೆ. ಧಾರ್ಮಿಕ ಹಕ್ಕುಗಳಿಂದ ಮಾನವನ ಸಮಾನತೆಯ ಹಕ್ಕಗಳ ರಕ್ಷಣೆಯ ವೇದಿಕೆ ಇದಾಗಿದೆ.

ಶರಣು ಶರಣಾರ್ಥಿ ಎಂದು ಹೇಳಿದರೆ ಶರಣು ಶರಣಾರ್ಥಿ - ಶರಣು ಶರಣಾರ್ಥಿ ಎಂದು ಹೇಳುವ ಸಂಸ್ಕೃತಿ ನಮ್ಮದಾಗಬೇಕು. ಅಹಂಕಾರ ತೇಜಿಸಿ, ಸೌಜನ್ಯದ ನಡೆ ನಮ್ಮದಾಗಬೇಕು. ಮನುಷ್ಯರಿಂದ ಮನುಷ್ಯರಿಗೆ ನಿಜವಾಗಿಯೂ ಗೌರವ ನೀಡುವುದೇ ಶರಣು ಶರಣಾರ್ಥಿ ಪದದ ಅರ್ಥವಾಗಿದೆ. ಸಾಮಾನ್ಯರ ಬದುಕಿಗೆ ಸೌಹಾರ್ದತೆಯ ಸಮಾಜ ನಿರ್ಮಿಸಿದವರು.

ಭಕ್ತಿಕಾಂಡದ ಮೇರು ವ್ಯಕ್ತಿತ್ವದ ಬಸವಣ್ಣನವರು. ಇದರಂತೆ ಬಸವಾದಿ ಶರಣರ ಚಿಂತನೆಗಳು ಸದಾ ಕಾಲ ಈ ಸಮಾಜದಲ್ಲಿ ಬಿತ್ತುವ ಕೆಲಸ ನಿರಂತರವಾಗಿ ಆಗಬೇಕಾಗಿದೆ ಎಂದು ಆಶೀರ್ವಚನ ನೀಡಿದರು. ಸಾನಿಧ್ಯ ವಹಿಸಿದ್ದ ಗುಣತೀರ್ಥ ವಾಡಿಯ ಪರಮ ಪೂಜ್ಯ ಬಸವಪ್ರಭು ಸ್ವಾಮಿಜಿ ಮಾತನಾಡಿ ಬಸವಕುಮಾರ ಪಾಟೀಲ ರವರ ನೇತೃತ್ವದಲ್ಲಿ ಬಿಜನ್ನಳ್ಳಿ ಗ್ರಾಮದಿಂದ ಬಸವಕಲ್ಯಾಣದ ವರೆಗೆ ಐತಿಹಾಸಿಕವಾಗಿ ಸಾಗಿದ ಕಲ್ಯಾಣ ನಡಿಗೆ ಪಾದಯಾತ್ರೆಯು ಹಮ್ಮಿಕೊಂಡು ಯಶಸ್ವಿಗೊಳಿಸಿದ್ದಾರೆ. 770 ಅಮರಗಣಂಗಳ ಶರಣರ ಪವಿತ್ರ ಭೂಮಿ ಬಸವಕಲ್ಯಾಣವಾಗಿದೆ ಎಂದರು.

# ಶಾಲೆಯಲ್ಲಿ ವಿಜ್ಞಾನ ಪ್ರದರ್ಶನ ಸಂಭ್ರಮ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ : ದೇಶದ ಪ್ರಗತಿಯಲ್ಲಿ ವಿಜ್ಞಾನದ ಪಾತ್ರ ಮಹತ್ವದ್ದಾಗಿದ್ದು, ಅದಕ್ಕೆ ಬಲವಾದ ಅಡಿಗಲ್ಲು ಹಾಕಿದ ಮಹಾನ್ ವಿಜ್ಞಾನಿ ಸಿ.ವಿ. ರಾಮನ್ ಅವರ ಸ್ಮರಣಾರ್ಥ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸುವುದು ಹೆಮ್ಮೆಯ ವಿಷಯವಾಗಿದೆ

ಎಂದು ಶಾಲಾ ಮುಖ್ಯ ಶಿಕ್ಷಕಿ ಪಿ. ಎರ್ರೆಮ್ಮ ಹೇಳಿದರು.ನಗರದ 23ನೇ ವಾರ್ಡ್ ಅಂಬೇಡ್ಕರ್ ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಹಾನಂದಿ ಕೊಟ್ಟಂ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಭಾರತಕ್ಕೆ ವಿಜ್ಞಾನ ಕ್ಷೇತ್ರದಲ್ಲಿ ಮೊದಲ ನೊಬೆಲ್ ಪುರಸ್ಕಾರ ತಂದುಕೊಟ್ಟ ಸಿ.ವಿ. ರಾಮನ್ ಅವರು ತಮ್ಮ ಅತ್ಯಾಧುನಿಕ ಸಂಶೋಧನೆಗಳ ಮೂಲಕ ವಿಶ್ವದ ಗಮನವನ್ನು ಭಾರತದತ್ತ ಸೆಳೆದರು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ತಯಾರಿಸಿದ ಆಕರ್ಷಕ ಚಿತ್ತಾರಗಳು ಪೋಷಕರ ಹಾಗೂ ನೋಡುಗರ ಗಮನ ಸೆಳೆದವು. ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಕಲೆ, ಚಿತ್ರಕಲೆ, ವಿಜ್ಞಾನ ಮತ್ತು ಭಾಷಾ ವಸ್ತು ಪ್ರದರ್ಶನಗಳಲ್ಲಿ ಮಕ್ಕಳು ತಮ್ಮೊಳಗಿನ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಿದರು. ಸಮಾಜ ವಿಜ್ಞಾನ, ಕಲೆ ಹಾಗೂ ಭಾಷಾ ವಿಷಯಗಳ ಕುರಿತಾಗಿ ವಿದ್ಯಾರ್ಥಿಗಳು ಸ್ಪಷ್ಟಹಾಗೂ ಆತ್ಮವಿಶ್ವಾಸದಿಂದ ಮಾಹಿತಿ ನೀಡಿದರು.1 ರಿಂದ 7ನೇ ತರಗತಿ ವಿದ್ಯಾರ್ಥಿಗಳು ವಿವಿಧ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಿದರು. ಕಚ್ಚಾವಸ್ತುಗಳಿಂದ ಡೈನಮೋ ಮೀಟರ್, ಸೌರ ಮಂಡಲ ಮಾದರಿ, ಗಾಳಿ ಯಂತ್ರದ ಮೂಲಕ ವಿದ್ಯುತ್ ಉತ್ಪಾದನೆ, ದಹನ ಕ್ರಿಯೆಗೆ ಆಮ್ಲಜನಕ ಅವಶ್ಯಕ , ಆಮ್ಲ ಮತ್ತು ಪ್ರತ್ಯಾಮ್ಲ , ಬೆಳಕು ನೇರವಾಗಿ ಚಲಿಸುತ್ತದೆ , ಬೆಳಕಿನ ಪ್ರತಿಫಲನ , ಬೆಳಕಿನ ವಕ್ರೀಭವನ , ಸೇರಿದಂತೆ ಹಲವು ವಿಜ್ಞಾನ ಮಾದರಿಗಳನ್ನು ರೂಪಿಸಿ ವಿವರಿಸಿದರು. ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ವಿಜ್ಞಾನಾಸಕ್ತಿ ಗಮನಾರ್ಹವಾಗಿತ್ತು.

ಈ ಕಾರ್ಯಕ್ರಮದಲ್ಲಿ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಉಪೇಂದ್ರ, ಸಹ ಶಿಕ್ಷಕರಾದ ಹೆಚ್. ನಾಗರಾಜ್, ಎಂ. ಪ್ರಮೀಳಾಬಾಯಿ, ಸಿದ್ದಲಿಂಗಮ್ಮ ಎಲ್., ಅನಿತ ಹೆಚ್.ವೈ , ಹಾಗೂ ಶ್ರೀ ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಾದ ಎಂ.ಎಸ್. ಜಾನ್ಸನ್, ಕಾಸಿಮ್, ಅಂಜಿಕುಮಾರ್ , ಸುಧಾಕರ, ಭೀಮಾಂಬಿಕ ಹಾಗೂ ಭುವನೇಶ್ವರಿ ಶಾಲೆ ಮುದ್ದು ಮಕ್ಕಳು ಪೋಷಕರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ದ್ವಿತೀಯ ಪಿಯು ಪರೀಕ್ಷೆ ಆರಂಭ

## ಕನ್ನಡ ಪರೀಕ್ಷೆಗೆ 986 ವಿದ್ಯಾರ್ಥಿಗಳು ಗೈರು



ಬಳ್ಳಾರಿ, : ವಿದ್ಯಾರ್ಥಿಗಳ ಜೀವನದ ಮುಂದಿನ ಜೀವನಕ್ಕೆ ಮಾರ್ಗದರ್ಶಿಯಾದ ದ್ವಿತಿಯ ಪಿಯುನ ಈ ವರ್ಷದ ವಾರ್ಷಿಕ ಪರೀಕ್ಷೆ ಇಂದು ಆರಂಭಗೊಂಡಿದ್ದು ಮಾರ್ಚ್ 17 ವರೆಗೆ ನಡೆಯಲಿವೆ. ಆರಂಭದ ದಿನವಾದ ಇಂದು ಪ್ರಥಮ ಭಾಷೆ ಕನ್ನಡ ಪರೀಕ್ಷೆ ನಡೆಯಿತು.

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯನ್ನು ಒಳಗೊಂಡಂತೆ . 25664 ಈ ವರ್ಷ ಪರೀಕ್ಷೆಯನ್ನು ಮೊದಲ ಬಾರಿಗೆ ಬರೆಯುವವರು ಸೇರಿದಂತೆ. ಫೇಲಾಗಿ ಮತ್ತೆ ಪರೀಕ್ಷೆ ಬರೆಯುವವರು 3805, ಖಾಸಗಿಯಾಗಿ ಅಂದರೆ ವಯಸ್ಸಿನ ಆಧಾರದ ಮೇಲೆ ನೇರವಾಗಿ ಪರೀಕ್ಷೆ ಬರೆಯುವವರು 967 ಹಾಗು ಪಾಸಾಗಿ ಫಲಿತಾಂಶ ಸುಧಾರಣೆಗಾಗಿ 17 ಜನ ಇದ್ದಾರೆ. ಇದರಲ್ಲಿ ಬಳ್ಳಾರಿ ಜಿಲ್ಲೆಯವರು 13286 ವಿದ್ಯಾರ್ಥಿಗಳಿ ಇದ್ದಾರೆ.

ಕಳೆದ ವರ್ಷ ಈ ಎರೆಡು ಜಿಲ್ಲೆಗಳನ್ನು ಒಳಗೊಂಡು ಫಲಿತಾಂಶವು ರಾಜ್ಯದಲ್ಲಿ 27 ನೇ ಸ್ಥಾನ ಪಡೆದಿತ್ತು. ಈ ವರ್ಷ ಫಲಿತಾಂಶ ಸುಧಾರಣೆಗೆ ಸರ್ಕಾರಿ ಕಾಲೇಜುಗಳಲ್ಲಿ ಮಧ್ಯಾಹ್ನ 3 ರಿಂದ ಸಂಜೆ 4 ವರೆಗೆ ಪರಿಹಾರದ ತರಗತಿಗಳನ್ನು ತೆಗೆದುಕೊಂಡು ನುರಿತ ಅಧ್ಯಾಪಕರನ್ನು ಕರೆಸಿ ಭೋದನೆ ಮಾಡಿ. ಪರೀಕ್ಷೆಗಳಲ್ಲಿ ಹೇಗೆ ಉತ್ತರಿಸಬೇಕು ಎಂಬ ಬಗ್ಗೆ ಉಪನ್ಯಾಸ ಕೊಡಿಸಲಾಗಿತ್ತು. ಅಲ್ಲದೆ ರಾಜ್ಯ ಮಟ್ಟದಲ್ಲಿ ಎರೆಡು ಬಾರಿ ಪೂರ್ವ ಸಿದ್ದತಾ ಪರೀಕ್ಷೆ ನಡೆಸಲಾಗಿತ್ತು. ಇಂದು ನಡೆದ ಪ್ರಥಮ ಭಾಷೆಯ ಪರೀಕ್ಷೆಗೆ 22208 ನೊಂದಾಯಿಸಿಕೊಂಡವರಲ್ಲಿ 21222 ವಿದ್ಯಾರ್ಥಿಗಳು ಹಾಜರಾಗಿ, 986 ವಿದ್ಯಾರಗಳು ಗೈರು ಹಾಜರಾಗಿದ್ದರು ಎಂದು ಪದವಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಲಕ್ಷ್ಮಣ ಹಳ್ಳದ ಮನಿ ಅವರು ತಿಳಿಸಿದ್ದಾರೆ.

ಬೆಳಿಗ್ಗೆ ಪರೀಕ್ಷೆ ಬರೆಯಲು ತಮ್ಮ ಪೋಷಕರ ಜೊತೆಯಲ್ಲಿ ಅನೇಕ ವಿದ್ಯಾರ್ಥಿಗಳು ಬಂದು ಪರೀಕ್ಷೆ ಬರೆಯುವ ತಮ್ಮ ಕೊಠಡಿ ಯಾವುದೆಂದು ಹುಡುಕುವದು ಸಾಮಾನ್ಯವಾಗಿತ್ತು.

# ಶ್ರೀ ರಾಘವೇಂದ್ರ ಕ್ಯಾಟರಿಂಗ್ ವತಿಯಿಂದ ಏ.12ಕ್ಕೆ ಸಾಮೂಹಿಕ ಉಪನಯ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಸತ್ಯನಾರಾಯಣ ಪೇಟೆ ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದಲ್ಲಿ ಬಳ್ಳಾರಿ ಬ್ರಾಹ್ಮಣ ಸಂಘ ಹಾಗೂ ಶ್ರೀರಾಘವೇಂದ್ರ ಕ್ಯಾಟರಿಂಗ್ ಅವರ ವತಿಯಿಂದ ಸಾಮೋಹಿಕ ಶ್ರೀ ವೆಂಕಟೇಶ್ವರ ಕಲ್ಯಾಣ ಮಹೋತ್ಸವ ಹಾಗೂ ಸಮೂಹಿಕ ಉಪನಯನ (ತ್ರಿಮತಸ್ಥರಿಗೆ) ಕಾರ್ಯಕ್ರಮವನ್ನು ಏ.12 ರಂದು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಧ್ವವಿಜಯ ಪ್ರಶಸ್ತಿ ವಿಜೇತ, ಶ್ರೀರಾಘವೇಂದ್ರ ಕ್ಯಾಟರಿಂಗ್ ನ ಜೆ.ವಿಜಯ ವಿಠಲ ಅವರು ತಿಳಿಸಿದ್ದಾರೆ. ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರ ಆಶೀರ್ವಾದದಿಂದ ಶ್ರೀ ರಾಘವೇಂದ್ರ ಕ್ಯಾಟರಿಂಗ್ ಆಶ್ರಯದಲ್ಲಿ ಎಲ್ಲರ ಸಹಕಾರದಿಂದ ಸತತ 6ನೇ ವರ್ಷದ ಕಾರ್ಯಕ್ರಮ ಇದಾಗಿದ್ದು, ಸ್ವಸ್ತಿಶ್ರೀ ಶ್ರೀ ಪರಾಭವ ನಾಮಸಂವತ್ಸರ ಉತ್ತರಾಯಣ, ವಸಂತ ಋತು, ಚೈತ್ರಮಾಸ, ಕೃಷ್ಣ ಪಕ್ಷ ತಿಥಿ ದಶಮಿ ಏ.12 ರಂದು ಬೆಳಿಗ್ಗೆ 9.14 ರಿಂದ 9.25 ರವರೆಗಿನ ಸಲ್ಲುವ ಶುಭ ಮುಹೂರ್ತ, ವೃಷಭ ಲಗ್ನದಲ್ಲಿ ಸಾಮೂಹಿಕ ಉಪನಯನ ನಡೆಯಲಿವೆ. ಕಲ್ಯಾಣ ಮಹೋತ್ಸವಕ್ಕೆ 501 ರೂ. ಹಾಗೂ ಸಾಮೋಹಿಕ ಉಪನಯನಕ್ಕೆ 5 ಸಾವಿರ ನಿಗದಿ ಪಡಿಸಲಾಗಿದೆ. ಆಸಕ್ತರು ತಮ್ಮ ಸ್ವಪರಿಚಯ, ವಟುವಿನ ಹೆಸರು, ಗೋತ್ರ ಬರೆಸಿ ಹೆಸರನ್ನು ನೋಂದಾಯಿಸಬಹುದು.ಸಾಮೋಹಿಕ ಕಲ್ಯಾಣ ಮಹೋತ್ಸವ, ಹತ್ತಿ ಬೆಳಗಲ್ಲು ಶ್ರೀ ಗುರುರಾಜ್ ಆಚಾರ್ಯ ಹಾಗೂ ಅಮಕುಂದಿ ಶ್ರೀ ಸತ್ಯನಾರಾಯಣ ಆಚಾರ್ಯ (9449135993) ಅವರ ನೇತೃತ್ವದಲ್ಲಿ ನಡೆಯಲಿದೆ. ಸಾಮೋಹಿಕ ಉಪನಯನ ಕಾರ್ಯಕ್ರಮಗಳು, ಶ್ರೀ ದಾಸ್ ಆಚಾರ್ಯ, ಶ್ರೀ ಕೃಷ್ಣಾಚಾರ್ ಹಿರೇಹಾಳ, ಶ್ರೀ ಗುರುರಾಜ್ ಆಚಾರ್ಯ, ಪವನ್ ಪುರೋಹಿತ್ (9448716939, 8919022883) ಅವರ ನೇತೃತ್ವದಲ್ಲಿ ನಡೆಯಲಿವೆ. ಎಲ್ಲ ಕಾರ್ಯಕ್ರಮಗಳು ಶ್ರೀಮಠದ ಆಡಳಿತಾಧಿಕಾರಿ ಪಂ.ಪ್ರಸನ್ನ ಆಚಾರ ಅವರ ನೇತೃತ್ವ, ಮಾರ್ಗದರ್ಶನದಲ್ಲಿ ನಡೆಯಲಿವೆ. ಹೆಚ್ಚಿನ ಮಾಹಿತಿಗೆ 99865 55640, 9448773083 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆ ಅತ್ಯಂತ ಅವಶ್ಯಕ : ಶ್ರೀಧರ ದೇಸಾಯಿ



ಮಲ್ಲಮ್ಮ ನುಡಿ ವಾರ್ತೆ ಕುಕನೂರ: ಮಾತೃಭಾಷೆಯು ಪ್ರತಿಯೊಬ್ಬರ ಜೀವನದಲ್ಲಿ ಸರಾಗವಾಗಿ ಸರಳಿಕರಣದೊಂದಿಗೆ ಜೀವನದ ಅಂಶವಾಗಿದ್ದು ಅಂತಹ ಮಾತೃಭಾಷೆಯ ಶೈಕ್ಷಣಿಕ ಪಡೆದುಕೊಂಡಲ್ಲಿ ಏನಾದರೂ ಸಾಧಿಸಲು ಸಾಧ್ಯ ಎಂದು ವೈದ್ಯ ಡಾ. ಜಂಬಣ್ಣ ಅಂಗಡಿ ಹೇಳಿದರು. ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ ಮತ್ತು 7ನೇ ತರಗತಿಯ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದ ವೇದಿಕೆಯ ಮಧ್ಯೆಶಿಸಿ ಅವರು ಮಾತನಾಡುತ್ತಾ ಪ್ರಪಂಚದಲ್ಲಿಯೇ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾಗಿದ್ದು ದೇಶದ ನಾಗರಿಕರನ್ನು ಉತ್ತಮವಾಗಿಸುವ ಮಹಾತ್ಕಾರ್ಯ ಶಿಕ್ಷಕರಾದಾಗಿದೆ . ಹಾಗೂ ಶಾಲಾ ಸುಧಾರಣಾ ಕಲಿತಿಯಾ ಅಧ್ಯಕ್ಷರು ಮತ್ತು ಸದಸ್ಯರ ಸಹಕಾರವಿದ್ದಾಗ ಶಾಲೆಯು ಅತ್ಯುತ್ತಮ ಫಲಿತಾಂಶ ಒಂದು ಅದರಲ್ಲಿ ಆಶ್ಚರ್ಯವಿಲ್ಲ ಎಂದು ಹೇಳಿದರು.ಮಾತೃಭಾಷೆ ಶಿಕ್ಷಣ ಅತ್ಯಂತ ಶ್ರೇಷ್ಠ ಹಾಗೂ ಪ್ರಭಾವಿಯಾಗಿದ್ದು ಪಾಲಕರು ಇಂಗ್ಲಿಷ್ ವ್ಯಾಮೋಹ ಬಿಟ್ಟು ತಮ್ಮ ಮಾತೃಭಾಷೆಯಲ್ಲಿಯೇ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು. ಈ ಕನ್ನಡ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿಗಳು ಸಹ ಸರಗವಾಗಿ ಇಂಗ್ಲಿಷ್ ಪದಗಳ ಬಳಕೆ ಮಾಡುತ್ತಿದ್ದು ಮಾತೃಭಾಷೆಯಲ್ಲಿ ಕಲಿತಿಲ್ಲ ಅದರ ಜೊತೆ ಎಲ್ಲಾ ಭಾಷೆಗಳನ್ನು ಸಹ ಸರಳವಾಗಿ ಕಲಿಯಬಹುದು ಆದ್ದರಿಂದ ಪಾಲಕರು ತಮ್ಮ ಮಕ್ಕಳನ್ನು ತಮ್ಮ ಮಾತೃಭಾಷೆಯ ಶಾಲೆಗೆ ದಾಖಲಿಸಿ ಎಂದು ಕರೆ ನೀಡಿದರು. ಗ್ರಾಮದ ಪ್ರಮುಖ ಹಾಗೂ ನಿವೃತ್ತ ನೌಕರ ಶ್ರೀಧರ ದೇಸಾಯಿ ಮಾತನಾಡುತ್ತಾ ಸದಾ ಪಠ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆ ಅತ್ಯಂತ ಸಂತಸಮಯವಾಗಿದ್ದು ಮಕ್ಕಳ ಸಂಸ್ಕೃತಿಕ ಕಲೆಗಳನ್ನು ನೋಡುವುದರಿಂದ ಪ್ರಪಂಚವನ್ನೇ ಮರೆತು ತಲೆ ತೂಗುವಂತಹ ಅನುಭವ ಪಡೆಯಬಹುದಾಗಿದೆ ಎಂದು ಹೇಳಿದರು. ಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು. ಹಾಗೂ ಕಳೆದ ವರ್ಷ ಶಾಲೆಯಲ್ಲಿ ಉತ್ತಮ ಅಂಕಗಳಿಸಿಕೊಂಡ ವಿದ್ಯಾರ್ಥಿಗಳಿಗೆ ಹಾಗೂ ಶಾಲಾ ಬಿಸಿಊಟ ಸಿಬ್ಬಂದಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆಯಲ್ಲಿ ಗ್ರಾಮದ ಪ್ರಮುಖರು, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು, ಗ್ರಾಮ ಪಂಚಾಯಿತಿಯ ನಿಕಟ ಪೂರ್ವ ಅಧ್ಯಕ್ಷರು, ಸದಸ್ಯರು, ಪಾಲಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

# ಶ್ರೀ ಸಾಯಿ ಕಂಪ್ಯೂಟರ್ ತರಬೇತಿ ಕೇಂದ್ರಕ್ಕೆ 99% ಫಲಿತಾಂಶ ವಿದ್ಯಾರ್ಥಿಗಳ ಶ್ರೇಷ್ಠ ಸಾಧನೆ



• ಮಲ್ಲಮ್ಮ ನುಡಿ ವಾರ್ತೆ: ಗುರುಮಠಕಲ್

ಪಟ್ಟಣದ ಶ್ರೀ ಸಾಯಿ ಕಂಪ್ಯೂಟರ್ ತರಬೇತಿ ಕೇಂದ್ರವು 99% ಫಲಿತಾಂಶ ದಾಖಲಿಸಿ ಗಮನಾರ್ಹ ಸಾಧನೆ ಮಾಡಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ವತಿಯಿಂದ ಕಳೆದ ಜನವರಿ ತಿಂಗಳಲ್ಲಿ ನಡೆಸಲಾದ ಗಣಕಯಂತ್ರ ಶಿಕ್ಷಣ ಪರೀಕ್ಷೆಯಲ್ಲಿ ಒಟ್ಟು 79 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 78 ಮಂದಿ ಉತ್ತೀರ್ಣರಾಗಿದ್ದಾರೆ.

ಉತ್ತೀರ್ಣರಾದವರಲ್ಲಿ 11 ಮಂದಿ ಪ್ರಥಮ ಶ್ರೇಣಿ, 38 ಮಂದಿ ದ್ವಿತೀಯ ಶ್ರೇಣಿ ಹಾಗೂ 28 ಮಂದಿ ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಒಬ್ಬ ವಿದ್ಯಾರ್ಥಿ ಡಿಸ್ಟಿಂಕ್ಷನ್ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಸಂಸ್ಥೆಗೆ ವಿಶೇಷ ಕೀರ್ತಿ ತಂದಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿಗಳ ವಿವರ ಹೀಗಿದೆ: ಪವಿತ್ರ ತಂ/ಕಾಶಪ್ಪ ಗಾಜರಕೋಟ – 85%, ಸಮ್ರೀನ್ ಬೇಗಂ ತಂ/ಉಸ್ಮಾನ್ ಅಲಿ (ಗಾಜರಕೋಟ) –82.5%, ಅನುಶಾ ತಂ/ಮೋನಪ್ಪ (ಗಾಜರಕೋಟ) –81.5%, ಅಪೂರ್ವ ಹೂಗರ ತಂ/ಬಸವರಾಜ ಹೂಗರ (ಗುರುಮಠಕಲ್) –80%, ಮಂಜುಳ ತಂ/ಅಶೋಕ ಕೊಲಕುಂದ –79.5%, ವೆಂಕಟೇಶ ತಂ/ಮೊಗಲಪ್ಪ (ಕೇಶ್ವರ) – 78.5%, ಮಾನಸ ತಂ/ಮೋನಯ್ಯ (ಗುರುಮಠಕಲ್) –78%, ನಂದಿನಿ ತಂ/ನಂದಕುಮಾರ (ಗುರುಮಠಕಲ್) – 78%. ಈ ವಿದ್ಯಾರ್ಥಿಗಳು ಯಾದಗಿರಿ ಜಿಲ್ಲೆಗೆ ಪ್ರಥಮ ಸ್ಥಾನ ತಂದುಕೊಡುವ ಮೂಲಕ ಗುರುಮಠಕಲ್ ತಾಲೂಕಿಗೆ ಹಾಗೂ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಸಂಸ್ಥೆಯ ಪ್ರಾಂಶುಪಾಲರಾದ ಸಾಯಪ್ಪ ಎನ್. ನತ್ತಿ, ಪಾರ್ವತಿ ನತ್ತಿ ಹಾಗೂ ಸಾಮೆಲಪ್ಪಗುಡಿಸೆ ಅವರು ವಿದ್ಯಾರ್ಥಿಗಳ ಸಾಧನೆಗೆ ತೀವ್ರ ಹರ್ಷ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಫಲಿತಾಂಶ ಗಳಿಸುವ ವಿಶ್ವಾಸ ವ್ಯಕ್ತಪಡಿಸಿದರು.

# ಡಾ.ಬಿ.ಕೆ.ಸುಂದರ್ ಅವರಿಗೆ ಶ್ರೀ ರಾಘವೇಂದ್ರನುಗ್ರಹ ಪ್ರಶಸ್ತಿ ಪ್ರಧಾನ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಶ್ರೀ ರಾಘವೇಂದ್ರ ಸ್ವಾಮಿಗಳವರ ವರ್ಧಂತಿ ಮಹೋತ್ಸವ ಹಾಗೂ 431ನೇ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆ ನಗರದ ಹೆಸರಾಂತ ವೈದ್ಯ ಡಾ.ಬಿ.ಕೆ.ಸುಂದರ್ ಅವರಿಗೆ, ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಪವಿತ್ರ ಧಾರ್ಮಿಕ ಕ್ಷೇತ್ರ

ಮಂತ್ರಾಲಯದಲ್ಲಿ ಆಯೋಜಿಸಿದ್ದ ಸುವರ್ಣ ಮಹೋತ್ಸವದಲ್ಲಿ ಶ್ರೀಮಠದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು, ಬಳ್ಳಾರಿಯ ಡಾ.ಬಿ.ಕೆ.ಸುಂದರ್ ಅವರಿಗೆ, ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿ ನೀಡಿ, ದಂಪತಿಗಳನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಶ್ರೀಮಠದ ವಿವಿಧ ಪಂಡಿತರು, ವಿವಿಧ ಗಣ್ಯರು ಇತರರು ಉಪಸ್ಥಿತರಿದ್ದರು. ನಂತರ ಡಾ.ಬಿ.ಕೆ.ಸುಂದರ್ ಅವರು ಮಾತನಾಡಿ, ಶ್ರೀ ರಾಘವೇಂದ್ರ ಸ್ವಾಮಿಗಳವರ ವರ್ಧಂತಿ ಮಹೋತ್ಸವ ಹಾಗೂ 431ನೇ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆಯಲ್ಲಿ ವರ್ಷ ಶ್ರೀಮಠದಿಂದ ಕೊಡಲಾಗುವ ಶ್ರೀರಾಘವೇಂದ್ರನುಗ್ರಹ ಪ್ರಶಸ್ತಿಯನ್ನು ಈ ಬಾರಿ ನಮ್ಮನ್ನು ಗುರುತಿಸಿ ಶ್ರೀಮಠದ ಸ್ವಾಮಿಗಳು ಪ್ರಧಾನ ಮಾಡಿರುವುದು ಅತ್ಯಂತ ಸಂತಸ ಮೂಡಿಸಿದೆ. ಕಲಿಯುಗದ ಕಾಮಧೇನು, ಕಲ್ಪವೃಕ್ಷ ಶ್ರೀಗುರುರಾಯರು ಎಲ್ಲರಿಗೂ ಒಳಿತನ್ನು ಮಾಡಲಿ, ಸೇವೆಯನ್ನು ಮಾಡುವ ಸೌಭಾಗ್ಯ ಕಲ್ಪಿಸಲಿ ಎಂದು ಪ್ರಾರ್ಥಿಸುವೆ ಎಂದರು.

# ರಮಜಾನ್ ಪ್ರಯುಕ್ತ ಪುಟ್ಟಬಾಲಕಿ ಉಪವಾಸ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ : ರಮಜಾನ್ ಮಾಸಾಚರಣೆ ಪ್ರಯುಕ್ತ ನಾಲ್ಕು ವರ್ಷದ ಬಿ. ಇಖ್ರಾ ಮುಬೀನ್ ಎಂಬ ಪುಟ್ಟ ಬಾಲಕಿ ಶನಿವಾರದಂದು ಮೊದಲನೆಯ ಬಾರಿಗೆ ಒಂದು ಉಪವಾಸ (ವೃತ, ರೋಜಾ) ಆಚರಿಸುವುದರ ಮೂಲಕ ಹೆಮ್ಮೆ ಮತ್ತು ಪ್ರಶಂಸೆಗೆ ಪಾತ್ರರಾಗಿದ್ದಾಳೆ.



ನಾಲ್ಕು ವರ್ಷದ ಈ ಪುಟ್ಟ ಬಾಲಕಿ ಕಂಪ್ಲಿ ಪಟ್ಟಣದ 18ನೇ ವಾರ್ಡ್, ಮುಲ್ಲಾರ ಓಣಿ/ಸುಣಗಾರ ಓಣಿಯ ಅಂಜುಮನ್ ಖಿದ್ಮತ್–ಎ–ಇಸ್ಲಾಂ ಸಮಿತಿಯ ಸದಸ್ಯ ಮತ್ತು ಸಮಾಜ ಸೇವಾ ಕಾರ್ಯಕರ್ತರ ವೇದಿಕೆ (ರಿ) ಕಾರ್ಯದರ್ಶಿ ಬಿ. ರಿಯಾಜ್ ಅಹ್ಮದ್ ತೃತಿಯ ಸುಪುತ್ರಿ ಆಗಿದ್ದಾಳೆ. ಬಿ. ಇಖ್ರಾ ಮುಬೀನ್ ಎಂಬ ಪುಟ್ಟ ಬಾಲಕಿ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ರಮಜಾನ್ ತಿಂಗಳ ಕಠಿಣ ಉಪವಾಸ ವ್ರತವನ್ನು ಪೂರ್ಣಗೊಳಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾಳೆ. ಧಾರ್ಮಿಕ ಶ್ರದ್ಧೆ ಮತ್ತು ಕುಟುಂಬದ ಪ್ರೇರಣೆಯಿಂದ ಈ ಬಾಲಕಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಆಹಾರ ಮತ್ತು ನೀರನ್ನು ತ್ಯಜಿಸಿ ವ್ರತ ಆಚರಿಸುವ ಮೂಲಕ ಧೈರ್ಯ ಪ್ರದರ್ಶಿಸಿದ್ದಾರೆ. ಬೆಳಗಿನ ಜಾವ 5–30 ರಿಂದ ಸಂಜೆ 6–30ರ ವರೆಗೆ ಸುಮಾರು 13 ತಾಸಿನ ಉಪವಾಸ ಆಚರಣೆ ಮೊದಲನೆಯ ಬಾರಿಗೆ ಆಚರಿಸಿ ತನ್ನ ಮೊದಲನೇ ಉಪವಾಸ ರೋಜಾ ಪೂರ್ಣಗೊಳಿಸಿರುತ್ತಾಳೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಖ್ರಾ ಮುಬೀನ್ ತೋರಿದ ಶಿಸ್ತು ಮತ್ತು ಭಕ್ತಿಯನ್ನು ಕಂಡು ಸ್ಥಳೀಯ ಸಮುದಾಯದಲ್ಲಿ, ಅವರ ಮನೆಯ ಎಲ್ಲಾ ಕುಟುಂಬದವರು, ಬಂಧುಗಳು ಅನೇಕರು ಶ್ಲಾಘಿಸಿದ್ದಾರೆ

# ತಹಸೀಲ್ ಹಾಗೂ ಪುರಸಭೆ ಕಾರ್ಯಾಲಯದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆ






ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್: ಪಟ್ಟಣದ ತಹಸೀಲ್ ಕಚೇರಿ ಹಾಗೂ ಪುರಸಭೆ ಕಾರ್ಯಾಲಯದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ತಹಸೀಲ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರೇಣುಕಾಚಾರ್ಯರ ಭಾವಚಿತ್ರಕ್ಕೆ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಬಳಿಕ ಮಾತನಾಡಿ, ವೀರಶೈವ ಧರ್ಮದ ಸಂಸ್ಥಾಪಕರು ಹಾಗೂ ಪಂಚಪೀಠದ ಮೊದಲಿಗರಾದ ರೇಣುಕಾಚಾರ್ಯರು ಧರ್ಮ ಸಂಸ್ಥಾಪನೆಗಾಗಿ ದೇಶವ್ಯಾಪಿ ಸಂಚರಿಸಿ ಅನೇಕ ಮಠ–ಮಾನ್ಯಗಳನ್ನು ಸ್ಥಾಪಿಸಿದರು ಎಂದು ಹೇಳಿದರು. ಸಮಾಜದಲ್ಲಿ ಸಮಾನತೆ, ಸತ್ಸಂಗ ಹಾಗೂ ಧರ್ಮನಿಷ್ಠೆಯ ಸಂದೇಶವನ್ನು ಸಾರಿದ ಮಹಾನ್ ತತ್ವಜ್ಞಾನಿ ಅವರು; ಅವರ ಉಪದೇಶಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಬೇಕು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಕಾರ್ಯದರ್ಶಿ ಜಗದೀಶ್ ಕುಮಾರ್ ಭೂಮಾ, ತಹಸೀಲ್ ಸಿಬ್ಬಂದಿಗಳಾದ ಹೀನಾ ಕೌಸರ್, ರೇಖಾ ಸಿ., ಶಿವಕುಮಾರ್, ರಮೇಶ್, ಜಗದೀಶ್, ನರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇನ್ನೊಂದೆಡೆ, ಪುರಸಭೆ ಕಾರ್ಯಾಲಯದಲ್ಲೂ ಜಯಂತಿಯನ್ನು ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವಾನಂದ್ ಬೂದಿ ಪೂಜೆ ನೆರವೇರಿಸಿದರು. ಪುರಸಭೆ ಕಿರಿಯ ಆರೋಗ್ಯಾಧಿಕಾರಿ ಅಶೋಕ್, ದಯಾನಂದ್ ಹಿರೇಮಠ, ವಿಜಯಕುಮಾರ್ ಹಿರೇಮಠ್ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.

# ಬುಡಾ ಅಧ್ಯಕ್ಷರಾಗಿ ಆಂಜನೇಯಲು ಕಂಟಿನ್ಯು

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ


ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಜೆ.ಎಸ್.ಆಂಜನೇಯಲು ಕಂಟಿನ್ಯು(ಮುಂದುವರೆದಿದ್ದಾರೆ) ಆಗಿದ್ದಾರೆ.

ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಪ್ತ ಜೆ.ಎಸ್. ಆಂಜನೇಯಲು ಅವರು ಬುಡಾಗೆ ಎರೆಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೇ ಇತಿಹಾಸವಾಗಿತ್ತು.



ಈಗ ರಾಜ್ಯ ಸರ್ಕಾರ ಕಳೆದ ಎರೆಡು ವರ್ಷಗಳ ಹಿಂದೆ ನೇಮಕ ಮಾಡಿದ್ದ ನಿಗಮ ಮಂಡಳಿ, ಪ್ರಾಧಿಕಾರದ ಅಧ್ಯಕ್ಷರುಗಳ ಅವಧಿ ಮುಗಿಯಲು ಬಂದಿತ್ತು.ಈ ವೇಳೆ ಸರ್ಕಾರ ಈ ಹಿಂದೆ ನೇಮಕ ಮಾಡಿದವರನ್ನು ಮುಂದಿನ ಆದೇಶದ ವರೆಗೆ ಮುಂದುವರೆಯಲು ಆದೇಶ ಮಾಡಿದ್ದು. ಇದರಿಂದಾಗಿ ಆಂಜನೇಯಲು ಮುಂದುವರೆದಿದ್ದಾರೆ.ಈ ಹುದ್ದೆ ಖಾಲಿ ಆಗುತ್ತೆ ಎಂದು ಟವಲ್ ಹಾಸಿಕೊಂಡು ಹಲವು ಕಾಂಗ್ರೆಸ್ ಮುಖಂಡರು ಕಾದು ಕುಳಿತಿದ್ದರು. ಅದಕ್ಕಾಗಿ ತಮ್ಮ ಆಪ್ತ ನಾಯಕರ ಬಳಿ ತಮಗೆ ಈ ಅವಕಾಶ ನೀಡುವಂತೆ ನಾಯಕರ ಕಾಂಪೌಂಡ್ ಕಾಯುತ್ತಿದ್ದರು. ಆದರೆ ಸಧ್ಯ ಈ ಆದೇಶದಿಂದ ಅವರ ಆಸೆಗೆ ಸಧ್ಯ ಬ್ರೇಕ್ ಬಿದ್ದಂತಾಗಿದೆ.ರಾಜ್ಯದಲ್ಲಿ ಸಿಎಂ ಅಧಿಕಾರ ಬದಲಾವಣೆಯ ಚರ್ಚೆ ನಡೆದಿರುವ ಹಿನ್ನಲೆಯಲ್ಲಿ. ಈ ಆದೇಶ ಹೊರ ಬಿದ್ದಿದೆ. ಸಿಎಂ ಬದಲಾದರೆ, ಇಲ್ಲವೇ ವಿವಾದ ತಣ್ಣಗಾದರೆ ಆದೇಶ ಬದಲಾಗುವ ಸಾಧ್ಯತೆ ಹೆಚ್ಚಿದೆ.

# ವೈದ್ಯಕೀಯ ವೃತ್ತಿ ಪವಿತ್ರವಾದ ಕ್ಷೇತ್ರ:ಲಿಂಗರಾಜ್



ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ: ವೈದ್ಯಕೀಯ ವೃತ್ತಿ ಪವಿತ್ರವಾದದ್ದು, ವೈದ್ಯ ವಿದ್ಯಾರ್ಥಿಗಳು ಗುಣ ಮಟ್ಟದ ಶಿಕ್ಷಣ ಪಡೆದು ಸಮಾಜ ಸೇವೆಯಲ್ಲಿ ತೊಡಗ ಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಅಧಿಕಾರಿ ಲಿಂಗರಾಜ್ ಟಿ ಕರೆ ನೀಡಿದರು. ನಗರದ ಅಮರ್ ಗಾರ್ಡ್ ನಲ್ಲಿ ಸ್ಪೂರ್ತಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಸ್ಪೂರ್ತಿ ಕಲರವ ಎನ್ನುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಭೋದಿಸಿ ಮಾತನಾಡಿದರು.

ಪ್ರಸ್ತುತ ವರ್ಷ 96 ವಿದ್ಯಾರ್ಥಿಗಳು ಕಾಲೇಜಿನಿಂದ ಹೊರಗೆ ಹೋಗುತ್ತಿದ್ದೀರಿ, ನಿಮ್ಮ ಮುಂದಿನ ಭವಿಷ್ಯದ ಕಡೆಗೆ ಗಮನಹರಿಸ ಬೇಕೆಂದು ತಿಳಿಸಿದ ಅವರು ವೈದ್ಯರಲ್ಲಿ ನಡತೆ, ಪ್ರಮಾಣಿಕತೆ ಇರ ಬೇಕು ಅಂದಾಗ ಮಾತ್ರ ಯಶಸ್ಸಿ ಯಾಗಲು ಸಾದ್ಯವಾಗುತ್ತದೆ ಎಂದರು.

ಸ್ಪೂರ್ತಿ ಶಿಕ್ಷಣ ಸಂಸ್ಥೆಯು ವಿವಿಧ ಕೋರ್ಸುಗಳನ್ನು ಪ್ರಾರಂಭಿಸಿ ನಗರ ಸೇರಿದಂತೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಸಂಸ್ಥೆಯ

ಮುಖ್ಯಸ್ಥರಾದ ಡಾ. ಈಶ್ವರ ಸವಡಿ ಮತ್ತು ಡಾ. ಬಸವರಾಜ್ ಸವಡಿ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದರು. ಡಿವೈಎಸ್ಪಿ ಜಾಯಪ್ಪನ್ಯಾಮಗೌಡ ಮಾತನಾಡಿ ವಿದ್ಯಾರ್ಥಿಗಳು ರೋಗಿಗಳ ಕಾಯಿಲೆಯನ್ನು ಅವಲೋಕಿಸಿ ಅವರಿಗೆ ಸರಿಯಾದ ಚಿಕಿತ್ಸೆ ಕೊಡುವದರ ಮೂಲಕ ಆರೋಗ್ಯವಂತರನ್ನಾಗಿ ಮಾಡುವ ಕಾರ್ಯಕ್ಕೆ ಮುಂದಾಗ ಬೇಕೆಂದರು. ಹೆಚ್ಚಿನ ಆಸೆ, ಆಮೀಷಕ್ಕೆ ಒಳಗಾಗದೆ ವೈದ್ಯ ವೃತ್ತಿಗೆ ಕೀರ್ತಿ ತರ ಬೇಕೆಂದರು. ಪ್ರಾಸ್ತಾವಿಕವಾಗಿ ಡಾ.ಈಶ್ವರ ಸವಡಿ ಮಾತನಾಡಿ ಕಾಲೇಜಿನ ಬೆಳವಣಿಗೆ ಮತ್ತು ಸೌಲಭ್ಯ. ಕುರಿತು ವಿವರಿಸಿದರು. ಅಧ್ಯಕ್ಷತೆಯನ್ನು ಸ್ಪೂರ್ತಿ ಸಮೂಹ ಸಂಸ್ಥೆಯ ಅಧ್ಯಕ್ಷೆಯಾದ ನಿರ್ಮಲಾ ಡಾ. ಈಶ್ವರ ಸವಡಿ ವಹಿಸಿದ್ದರು.

ವೇದಿಕೆ ಮೇಲೆ ಉದ್ಯಮಿ ವಿರೂಪಾಕ್ಷಪ್ಪ ಮುಷ್ಟಿ, ಡಾ.ಉಮೇಶ ಪುರದ, ರವಿ ರಾಜಶೇಖರ್ ಸತೀಶ ರಾಯ್ಕರ್, ಡಾ.ಬಸವರಾಜ್ ಸವಡಿ, ಕವಿತಾ ಬಸವರಾಜ್ ಸವಡಿ, ಶಾಹೀದಾ ಸ್ಪೂರ್ತಿ ಕಾಲೇಜು ಪ್ರಾಂಶುಪಾಲರು ನಟರಾಜ್ ಸೇರಿದಂತೆ ಹಾಗೂ ಸ್ಪೂರ್ತಿ ಕಾಲೇಜಿನ ಎಲ್ಲಾ ವಿದ್ಯಾರ್ಥಿನಿಯರು ಹಾಗೂ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಚಿವ ಸಂತೋಷ ಲಾಡ್ ಹುಟ್ಟು ಹಬ್ಬದ ನಿಮಿತ್ಯ ತ್ರೀಚಕ್ರವಾಹನ ವಿತರಣೆ

ಕಲಘಟಗಿ;ತಾಲೂಕಿನ ಮಡಕಿಹೊನ್ನಳ್ಳಿ ಗ್ರಾಮದ ಸಂತೋಷ ಲಾಡ್ ಅಮೃತ ನಿವಾಸದಲ್ಲಿ ಅವರ ಹುಟ್ಟು ಹಬ್ಬದ ನಿಮಿತ್ಯ ವಿಕಲಚೇನರಿಗೆ ತ್ರೀಚಕ್ರವಾಹನ ಹಾಗೂ ಶ್ರವಣ ಯಂತ್ರ ವಿತರಿಸುವ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೇಸ ಅಧ್ಯಕ್ಷ ಮಾತನಾಡಿ ವಿಕಲ ಚೇತನರು ಭಾರವಲ್ಲ ಅವರು ಮಾನಸಿಕವಾಗಿ ಸದೃಡವಾದರೆ ಎಂತಹ ಕಠಿಣ ಕೆಲಸವನ್ನು ಕೂಡ ಮಾಡಬಲ್ಲರು ಎಂದರು.

ಇದೇ ಸಂಧರ್ಬದಲ್ಲಿ ಸಚಿವರ ಆಪ್ತ ಸಹಾಯಕ ಹರಿಶಂಕರ ಮಠದ ವಿಕಲಚೇತನರ ಮಕ್ಕಳೊಂದಿಗೆ ಸಿಹಿ ಹಂಚುವ ಮೂಲಕ ಸಚಿವರ 51 ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು ವಿಲ್ ಛೇರ, 396 ಮಕ್ಕಳಿಗೆ ತಲಾ ಒಂದುಸಾವಿರ ವಿತರಿಸಲಾಯಿತು.




ಇ ಸಂಧರ್ಬದಲ್ಲಿ ಸೋಮಶೇಖರ ಬೆನ್ನೂರ, ವೃಷಬೇಂದ್ರ ಪಟ್ಟಣಶೆಟ್ಟಿ ಅಜಮತ್ ಜಾಗಿರದಾರ, ಶಂಕುತಲಾ ಬೋಳಾರ ,ಗುರು ಕಂಪ್ಲಿ, ರಾಮಣ್ಣ ಬಂಡಿವಡ್ಡರ, ಮಹೇಶ ಅಲಗೂರ, ಯಲ್ಲಪ್ಪ ಚವರಗಿ, ಬಸವರಾಜ ಬಾವಕರ, ಗಿರೀಶ ಸೂರ್ಯವಂಶಿ, ಬಸವರಾಜ ಕೆಲಗೇರಿ ವಿಕಲಚೇತನ ಮಕ್ಕಳು ಪೋಷಕರು, ಹಾಗೂ ಮಕ್ಕಳು ಇದ್ದರು.

# ಜಿಲ್ಲಾ ಕೃಷಿ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ

## ದೇಶಿ ತಳಿ ಉಳಿಸಿ ಬೆಳೆಸುವ ಕೆಲಸವಾಗಲಿ :ತಿಮ್ಮಾಪೂರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,1–ರೈತರು ತಲೆತಲಾಂತರದಿಂದ ಬೆಳೆಯಲಾಗುತ್ತಿರುವ ದೇಶಿ ತಳಿಗಳನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕೆಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕೃಷಿ ಮತು ಕೃಷಿ ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನೂತನ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಂದು ಕಡೆ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಕೊಡಬೇಕು. ಇನ್ನೊಂದು ಕಡೆ ಅದಕ್ಕೆ ತಕ್ಕಂತೆ ಆಹಾರ ಉತ್ಪಾದನೆ ಮಾಡಬೇಕಿದೆ. ಇದರ ನಡುವೆ ಆಹಾರ ಧಾನ್ಯದ ರುಚಿಯನ್ನು ಕಳೆದುಕೊಳ್ಳಲಾಗುತ್ತಿದೆ ಎಂದರು.

ಹೆಚ್ಚಿನ ಉತ್ಪಾದನೆ ಮಾಡುವ ಉದ್ದೇಶದಿಂದ ಅನೇಕ ರಾಸಾಯನಿಕಗಳನ್ನು ಸಿಂಪರಣೆ ಮಾಡಲಾಗುತ್ತಿದೆ. ಇದರಿಂದ ಮಣ್ಣಿನ ಫಲವತ್ತತೆ ಕಳೆದುಕೊಳ್ಳುವದರ ಜೊತೆಗೆ ರುಚಿ ಕೂಡಾ ಹಾಳುಮಾಡಿಕೊಳ್ಳಲಾಗುತ್ತಿದೆ. ಆರೋಗ್ಯವಂತ ಜೀವನಕ್ಕೆ ಬೇಕಾಗುವ ಆಹಾರ ಉತ್ಪಾದನೆ ಆಗಬೇಕಿದೆ. ಈ ನಿಟ್ಟಿನಲ್ಲಿ ಸರಕಾರ ದೇಶಿ ತಳಿಗಳನ್ನು ಉಳಿಸಿ ಸಂರಕ್ಷಿಸುವ ಕೆಲಸ ಮಾಡುತ್ತಿದೆ. ರೈತರಿಗೆ ದೇಶಿ ತಳಿಗಳ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯಿಂದ ತರಬೇತಿ ಸಹ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅಂದಾಜು 99.74 ಲಕ್ಷ ರೂ.ಗಳ ವೆಚ್ಚದಲ್ಲಿ ಸುಸಜ್ಜಿತವಾಗಿ ಕೃಷಿ ತರಬೇತಿ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ತರಬೇತಿ ಕೇಂದ್ರದಲ್ಲಿ ಊಟ ವಸತಿಯೊಂದಿಗೆ ತರಬೇತಿ ನೀಡಲಾಗುತ್ತದೆ. ಅಲ್ಲದೇ ಜಿಲ್ಲೆಯಲ್ಲಿ ರೈತರು ಬೆಳೆಯುವ ತರಕಾರಿ, ಹಣ್ಣು ಸೇರಿದಂತೆ ಇತರೆ ಬೆಳೆಗಳು



ಹಾಳಾಗದಂತೆ ಶೇಖರಿಸಲು ನಬಾರ್ಡ ಯೋಜನೆಯಡಿ 9.51 ಕೋಟಿ ರೂ.ಗಳ ವೆಚ್ಚದಲ್ಲಿ 2500 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ಶೀತಲ ಘಟಕ ನಿರ್ಮಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದು ಸಚಿವರು ತಿಳಿಸಿದರು.


ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಒಂದಾದ ಕಬ್ಬು ಬೆಳೆಯಲ್ಲಿ ಮಣ್ಣಿನ ಆರೋಗ್ಯ ಮತ್ತು ನೀರಿನ ಸಮಗ್ರ ನಿರ್ವಹಣೆಗಾಗಿ ಜಿಲ್ಲೆಯ ಎಲ್ಲ ತಾಲೂಕಿನಲ್ಲಿ 14 ಸಕ್ಕರೆ ಕಾರ್ಖಾನೆ ವ್ಯಾಪ್ತಿಯಡಿ 1000 ಹೆಕ್ಟೇರ್ ಪ್ರದೇಶದಲ್ಲಿ ರೈತರನ್ನು ಆಯ್ಕೆ ಮಾಡಿಕೊಂಡು ಹನಿ ನೀರಾವರಿ ಘಟಕ ಅನುಷ್ಠಾನ, ಕಬ್ಬಿನ ಬೆಳೆಯಲ್ಲಿ ಕೃತಕ ಬುದ್ದಿಮತ್ತೆ (ಎಐ) ತಂತ್ರಜ್ಞಾನ ಮೂಲಕ ಕಬ್ಬು ಬೆಳೆ ಪ್ರಾತ್ಯಕ್ಷಿಕೆ ಮಾಡಲಾಗುತ್ತಿದೆ. ಇದರಿಂದ ನೀರಿನ ಮಿತವ್ಯಯ ಬಳಕೆ, ರಸಗೊಬ್ಬರ ಉಳಿತಾಯ, ಕೀಟನಾಶಕದ ಅವಲಂಬನೆ ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಬಿವೃದ್ದಿ ನಿಗಮದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಮಾತನಾಡಿ, ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಜನಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಆದರೆ ಭೂಮಿ ಹೆಚ್ಚಳವಾಗುವದಿಲ್ಲ. ಇದನ್ನು ಅರಿಯಬೇಕಿದೆ. ಹೊಸ ಹೊಸ ತಳಿಗಳ ಸಂಶೋಧನೆಯಿಂದ ಉತ್ಪಾದನೆ ಪ್ರಮಾಣ ಹೆಚ್ಚಿಸಿ ಈಗ ಬೇರೆ ದೇಶಕ್ಕೆ ರಫ್ತು ಮಾಡಲಾಗುತ್ತಿದೆ. ಹೆಚ್ಚಿನ ಉತ್ಪಾದನೆ ಮಾಡುವದರ ಜೊತೆಗೆ ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಈ ಸಂದರ್ಭದಲ್ಲಿ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ಪಡೆದ ಸುನೀತಾ ಮನೋಹರ ಮೇಟಿ, ರಾಮನಗೌಡ ಪಾಟೀಲ, ಸಿದ್ದುಬಾ ಪಾಂಡು ಮಾಡಿಕ ಅವರನ್ನು ಸನ್ಮಾನಿಸಲಾಯಿತು. ಇದರ ಜೊತೆಗೆ ಪಿಎಂಎಫ್ಎಂಇ ಯೋಜನೆಯ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪ್ರಮಾಣ ಪತ್ರ, ಮಣ್ಣು ಆರೋಗ್ಯ ಚೀಟಿ ವಿತರಣೆ ಹಾಗೂ ಕಬ್ಬಿನಲ್ಲಿ ರವದಿಯ ನಿರ್ವಹಣೆ, ನೈಸರ್ಗಿಕ ಕೃಷಿಯ ಮಾಹಿತಿವುಳ್ಳ ಪೋಸ್ಟರಗಳನ್ನು ಬಿಡುಗಡೆ ಮಾಡಲಾಯಿತು. ಪ್ರಾರಂಭದಲ್ಲಿ ದೇಶಿ ತಳಿಗಳ ಪ್ರದರ್ಶನ ವೀಕ್ಷಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಹಾಂತೇಶ ಹಟ್ಟಿ, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ತೋವಿವಿಯ ಡೀನ್ ಡಾ.ತಮ್ಮಯ್ಯ, ಕೃಷಿ ಜಂಟಿ ನಿರ್ದೇಶಕ ರುದ್ರೇಶ ಟಿ.ಎಸ್, ಉಪ ಕೃಷಿ ನಿರ್ದೇಶಕರಾದ ಕೆ.ಎಸ್.ಅಗಸನಾಳ, ಮಂಜುಳಾ ಬಸವರಡ್ಡಿ, ಸಹಾಯಕ ಕೃಷಿ ನಿರ್ದೇಶಕ ಆರ್.ಬಿ.ಬಿದರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹೋಳಿ ಬಾಗಲಕೋಟೆಯ ಸಾಂಸ್ಕೃತಿಕ ಅಸ್ಮಿತೆ



**ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ** ದೇಶದಲ್ಲಿಯೇ ಎರಡನೆಯ ಸ್ಥಾನ ಪಡೆದಿರುವ ಹೋಳಿ ಸಂಭ್ರಮಾಚರಣೆ ಬಾಗಲಕೋಟೆ ನಗರದ ಸಾಂಸ್ಕೃತಿಕ ಅಸ್ಮಿತೆಯಾಗಿದ್ದು, ಎಲ್ಲರೂ ಹಬ್ಬವನ್ನು ಸೌಹಾರ್ದಯುತವಾಗಿ ಆಚರಿಸಿ ಪರಂಪರೆಯನ್ನು ಮುಂದುವರೆಸಬೇಕು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಭಾರತೀಯ ಜನತಾ ಪಾರ್ಟಿ ನಗರ ಮಂಡಳ ಬಾಗಲಕೋಟೆ ಹಾಗೂ ದಿ.ಅನಂತಕುಮಾರ ಸ್ಮರಣಾರ್ಥ ಯುವ ಮೋರ್ಚಾ ವತಿಯಿಂದ ನಗರದ ಹೊಳೆ ಆಂಜನೆಯ ದೇವಸ್ಥಾನ ಹತ್ತಿರ ದಿ.ಅನಂತಕುಮಾರ ವೇದಿಕೆಯಲ್ಲಿ ಹಮ್ಮಿಕೊಂಡ ಹಲಗಿ ಮಜಲಿನ ಸ್ಪರ್ಧೆಗೆ ಸಾಂಪ್ರದಾಯಿಕ ತುರಾಯಿ ಹಲಗೆ ನುಡಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮಗಳ ನಡುವಿನ ಸಣ್ಣಪುಟ್ಟ ವೈಮನಸ್ಸುಗಳನ್ನು ಮರೆತು ಸೌಹಾರ್ದಯುತವಾಗಿ ಆಚರಿಸುವ ಬಣ್ಣದ ಹಬ್ಬವಾಗಿದೆ. ದೇಶದಲ್ಲಿಯೇ ಬಾಗಲಕೋಟೆ ಹೋಳಿ ಹಬ್ಬ ತನ್ನದೆಯಾದ ವಿಶಿಷ್ಟ ಸ್ಥಾನವನ್ನು ಪಡೆದಿದ್ದು ಎಲ್ಲರೂ ಶಾಂತಿ ಸಂಭ್ರಮದಿಂದ ಆಚರಣೆ ಮಾಡೋಣ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅಶೋಕ ಲಿಂಬಾವಳಿ, ಮಹಾಬಳೇಶ ಗುಡುಗುಂಟಿ ಬಾಗಲಕೋಟೆಯ ಹೋಳಿ ಉತ್ಸವದ ಪಾರಂಪರಿಕ ಮಹತ್ವವನ್ನು ತಿಳಿಸಿದರು.

ಸಾನಿಧ್ಯವಹಿಸಿ ಮಾತನಾಡಿದ ಮೈಗೂರಿನ ಶಿವಾನಂದಮಠದ ಪೂಜ್ಯ ಗುರುಪ್ರಸಾದ ಮಹಾಸ್ವಾಮಿಗಳು, ಭಾರತ ವಿಶೇಷ ಸಂಪ್ರದಾಯ ಹಾಗೂ ವೈಜ್ಞಾನಿಕ ಆಚರಣೆಗಳ ಮೂಲಕ ಸಂಸ್ಕಾರ ಸಂಸ್ಕೃತಿಯನ್ನು ಜಗತ್ತಿಗೆ ನೀಡಿದ್ದು, ಬರವಣಿಗೆ ಗೊತ್ತಿಲ್ಲದ ಕಾಲದಲ್ಲಿಯೇ ಭಾರತ ವೇದ, ಉಪನಿಷತ್, ಪುರಾಣ, ಮಹಾಭಾರತ, ರಾಮಾಯಣ ಮಹಾಕಾವ್ಯಗಳಂತಹ ಅದ್ಭುತ ಗ್ರಂಥಗಳನ್ನು ನೀಡಿದೆ. ಶಿವ ಪುರಾಣದಲ್ಲಿ ಹೋಳಿ ಹಬ್ಬದ ಉಲ್ಲೇಖವಿದೆ. ಹೋಳಿ ಹಬ್ಬದ ಇತಿಹಾಸವನ್ನು ಮಕ್ಕಳಿಗೆ ತಿಳಿಸುವಂತ ಕಾರ್ಯವಾಗಲಿ ಎಂದರು.

ಕಾರ್ಯಕ್ರಮದಲ್ಲಿ ಜಿ.ಎನ್.ಪಾಟೀಲ. ಡಾ. ಎಂ.ಎಸ್. ದಡ್ಡೆನ್ನವರ, ಭಾಗೀರಥಿ ಪಾಟೀಲ, ಲಕ್ಷ್ಮೀ ನಾರಾಯಣ ಕಾಸಟ್, ಸತ್ಯನಾರಾಯಣ ಹೇಮಾದ್ರಿ, ಬಸವರಾಜ ಯಂಕಂಚಿ, ಬಸವರಾಜ ಹುನಗುಂದ, ಚಂದ್ರು ರಾಮವಡಗಿ, ಶಶಿಕಲಾ ಮಜ್ಜಗಿ, ದೂಳಪ್ಪ ಕೊಪ್ಪದ, ಆಶೋಕ ಪವಾರ, ರವಿ ನಾಯಕ, ವಿಲಾಸ ವಂದಕುದರಿ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ನಂತರ ನಡೆದ ಹಲಗಿ ಮಜಲಿನ ಸ್ಪರ್ಧೆಯಲ್ಲಿ ವಿವಿಧ ತಂಡಗಳು ಭಾಗವಹಿಸಿದ್ದವು.

# ಸೌಹಾರ್ಧತೆಯಿಂದ ಹೋಳಿ ಹಬ್ಬ ಆಚರಿಸಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ

ಸಹೋದರತ್ವಮತ್ತುಸೌಹಾರ್ಧತೆಯ ಪ್ರತೀಕ ಹೋಳಿ ಹಬ್ಬವನ್ನು ಶಾಂತಿಯುತವಾಗಿ, ಪರಸ್ಪರ ಗೌರವದಿಂದ ಆಚರಿಸಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಕರೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಹೋಳಿ ಹಬ್ಬದ ಕುರಿತು ಜರುಗಿದ ಶಾಂತತಾ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೋಳಿ ಆಚರಣೆಯಲ್ಲಿ ಕಲ್ಕತ್ತ ಹೊರತುಪಡಿಸಿದರೆ ದೇಶದಲ್ಲಿಯೇ ಬಾಗಲಕೋಟೆ ಎರಡನೇ ಸ್ಥಾನದಲ್ಲಿದೆ. ಈ ಐತಿಹಾಸದ ಹೋಳಿಯನ್ನು ಯಾವುದೇ ಅಹಿತಕರ ಘಟನೆಗೆ ಅವಕಾಶ ಕೊಡದೇ ಶಾಂತಿ ಹಾಗೂ ಸಂಭ್ರಮದಿಂದ ಆಚರಿಸುವಂತೆ ಸೂಚಿಸಿದರು.

ಹಬ್ಬದ ಆಚರಣೆಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ. ಹಬ್ಬದ ಬಂದೋಬಸ್ತಗಾಗಿ ಹೊರಗಡೆಯಿಂದ ಬಂದ ಪೊಲೀಸ್ ಸಿಬ್ಬಂದಿಗಳ ಜೊತೆಗೆ ಸ್ಥಳೀಯ ಪೊಲೀಸ್ ಸಿಬ್ಬಂದಿಗಳನ್ನು ಸಹ ನಿಯೋಜಿಸಲಾಗುತ್ತಿದ್ದು, ಹಬ್ಬದ ಯಶಸ್ವಿಗೆ ಎಲ್ಲರೂ ಸಹಕರಿಸಬೇಕು. ಯಾವುದೇ ಅಹಿತಕರ ಘಟನೆಗೆ ಅವಕಾಶ ಕೊಡಬಾರದು. ಹಬ್ಬದ ಆಚರಣೆ ಹಿನ್ನಲೆಯಲ್ಲಿ ನಗರಸಭೆಯಿಂದ ಅಗತ್ಯ ಸ್ವಚ್ಚತೆ ಕ್ರಮ, ನೀರಿನ ವ್ಯವಸ್ಥೆ ಕೂಡಾ ಮಾಡಲಾಗುವುದೆಂದರು.

ಹೋಳಿ ಸಮಿತಿಯ ಪ್ರತಿನಿಧಿ ಮಹಾಬಳೇಶಗುಡಗುಂಟಿ ಮಾತನಾಡಿ, ಮಾರ್ಚ 3 ರಿಂದ ಹೋಳಿ ಹಬ್ಬ ಪ್ರಾರಂಭಗೊಳ್ಳುತ್ತಿದ್ದು, ಮಾರ್ಚ 4 ರಂದು ಕಾಮದಹನವಾಗುತ್ತದೆ. ಮಾರ್ಚ 5 ರಿಂದ 7 ವರೆಗೆ ಮೂರು ದಿನಗಳ ಕಾಲ ಬಣ್ಣದೋಕುಳಿ ಜರುಗಲಿದೆ. 5 ರಂದು ಕಿಲ್ಲಾ, ನವನಗರ ಹಾಗೂ ವಿದ್ಯಾಗಿರಿ, 6 ರಂದು ಹಳಪೇಟೆ, ಜೈನಪೇಟೆ ಹಾಗೂ ವೆಂಕಟಪೇಟೆ, 7 ರಂದು ಹೊಸಪೇಟೆ ಓಣಿಯಲ್ಲಿ ಬಣ್ಣದೋಕುಳಿ ನಡೆಯಲಿದೆ ಎಂದರು.

ಇದರ ಜೊತೆಗೆ ಸೋಗಿನ ಬಂಡಿ ಮೆರವಣಿಗೆ ಕೂಡಾ ಜರುಗಲಿದ್ದು, 4 ಕಿಲ್ಲಾ, 5 ಹಳಪೇಟೆ, 6 ಹೊಸಪೇಟಿ, 7 ಜೈನ ಪೇಟೆ, 8 ವೆಂಕಟಪೇಟೆ, ನವನಗರ ಹಾಗೂ ವಿದ್ಯಾಗಿರಿಯಲ್ಲಿ ನಡೆಯಲಿದೆ. 6 ರಂದು ನಗರದ ಬಸವೇಶ್ವರ ವೃತ್ತದ ಬಳಿ ಇರುವ ಹೊಳೆ ಆಂಜನೇಯ ದೇವಸ್ಥಾನದ ಆವರಣ ಹಾಗೂ 7 ರಂದು ಕಿಲ್ಲಾ ಅಂಬಾಭವಾನಿ ದೇವಸ್ಥಾನದ ಬಳಿ ರೇನ್‌ಡ್ಯಾನ್ಸ್ ನಡೆಯಲಿದೆ ಎಂದು ತಿಳಿಸಿದರು.

# ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ ವಿತರಣೆ





ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್‌ಗಳ ಸ್ವಾಸ್ಥ್ಯ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲೆಯ ವಿಶೇಷ ಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ (ಂಜಚಿಣಜಜ ಗಿಜ್ಞುಛಿಟಜ) ಗಳ ವಿತರಣೆ ಮಾಡಲಾಯಿತು.

ಈ ಕಾರ್ಯಕ್ರಮಕ್ಕೆ ಕೊಪ್ಪಳ ಸಂಸದರಾದ ಕೆ.ರಾಜಶೇಖರ್ ಬಸವರಾಜ ಹಿಟ್ನಾಳ್ ಅವರು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ವಿಶೇಷ ಚೇತನರ ಸ್ವಾವಲಂಬನೆ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ರಾಜ್ಯ ಸರ್ಕಾರವು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಮೂಲಕ ಹಲವು ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು, ಇದರ ಭಾಗವಾಗಿ ಇಂದು ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಮೋಟಾರು ಚಾಲಿತ ತ್ರಿಚಕ್ರ ವಾಹನಗಳು, ಈ ಫಲಾನುಭವಿಗಳ ದೈನಂದಿನ ಪ್ರಯಾಣಕ್ಕೆ ಅನುಕೂಲವಾಗಲಿವೆ. ಶಿಕ್ಷಣ, ಉದ್ಯೋಗ ಹಾಗೂ ಸ್ವಯಂ ಉದ್ಯಮ ಚಟುವಟಿಕೆಗಳಿಗೆ ಈ ವಾಹನಗಳು ಸಹಕಾರಿಯಾಗಲಿವೆ ಮತ್ತು ವಿಶೇಷ ಚೇತನರು ಆತ್ಮವಿಶ್ವಾಸದಿಂದ ಬದುಕನ್ನು ಸಾಗಿಸಲು ಈ ವಾಹನಗಳು ಅವರಿಗೆ ನೆರವಾಗಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ್, ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ, ಕೊಪ್ಪಳ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಸ್ವಾಸ್ಥ್ಯ ಇಲಾಖೆಯ ಸಹಾಯಕ ನಿರ್ದೇಶಕ ವಿಜಯಕುಮಾರ ಬಿ., ಗಂಗಾವತಿ ಕಾರ್ಮಿಕ ನಿರೀಕ್ಷಕ ಎಂ.ಅಶೋಕ, ಕೊಪ್ಪಳ ಕಾರ್ಮಿಕ ನಿರೀಕ್ಷಕಿ ಮಂಜುಳಾ ವಿಶ್ವನಾಥ, ಕುಷ್ಟಗಿ ಕಾರ್ಮಿಕ ನಿರೀಕ್ಷಕಿ ನಿವೇದಿತಾ, ಜಿಲ್ಲಾ ಬಾಲಕಾರ್ಮಿಕ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡ್ರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಇತರೆ ಜನಪ್ರತಿನಿಧಿಗಳು, ವಿಶೇಷ ಚೇತನರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ದೇಶಾಭಿಮಾನವನ್ನು ಬೆಳೆಸಲು ಎನ್‌ಎಸ್‌ಎಸ್ ಸಹಕಾರಿ



**ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ:**

ವಿದ್ಯಾರ್ಥಿಗಳಲ್ಲಿ ಓದಿನ ಜೊತೆಗೆ ದೇಶಾಭಿಮಾನವನ್ನು ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ಸಹಕಾರಿಯಾಗಿದ್ದು ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯವು ತನ್ನ ದತ್ತು ಗ್ರಾಮ ಸೀಮಿಕೇರಿ ಲಡ್ಡು ಮುತ್ಯಾ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನರ ಸಮಸ್ಯೆಗಳನ್ನು ಅರಿಯುವ, ಸಮಾಜ ಸೇವೆ ಮಾಡಬೇಕೆಂಬ ಭಾವನೆಯನ್ನು ಬೆಳೆಸಿ ದೇಶಕ್ಕೆ ತಾನು ಏನು ಮಾಡಬಹುದು ಎಂಬ ಚಿಂತನೆಗೆ ಹಚ್ಚುತ್ತದೆ. ಮೊದಲು ತಮ್ಮ ಸುತ್ತ–ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡರೆ, ಊರು, ರಾಜ್ಯ ಹಾಗೂ ದೇಶ ಸ್ವಚ್ಛವಾಗಿರಲು ಸಾಧ್ಯ ಎಂಬ ಅಂಶವನ್ನು ವಿದ್ಯಾರ್ಥಿಗಳು ಜನರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಬೇಕು. ಪರಿಸರ ಬಗ್ಗೆ ಕಾಳಜಿ ವಹಿಸುವುದು ಎಲ್ಲ ನಾಗರಿಕರ ಕರ್ತವ್ಯವಾಗಿದೆ ಎಂದರು.

ಸಾಂಘಿಕ ಶಕ್ತಿ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಈ ಯೋಜನೆ ಬಹಳ ಉಪಯುಕ್ತವಾಗಿದೆ. ಎಲ್ಲರಲ್ಲೂ ಏಕತೆಯ ಭಾವನೆ ಮೂಡಿ, ಉತ್ತಮ ಸಮಾಜ ನಿರ್ಮಾಣದ ಸಂಕಲ್ಪ ಮಾಡಬೇಕು ಎಂದು ಶಿಬಿರಾರ್ಥಿಗಳಿಗೆ ಡಾ.ಮಸೂರಕರ ಕರೆ ನೀಡಿದರು.

ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಎನ್‌ಎಸ್‌ಎಸ್ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಬಿರದಲ್ಲಿ ಪಡೆದ ಅನುಭವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದು ಶಿಬಿರದ ಸಾರ್ಥಕತೆಯನ್ನು ತೋರಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿ, ಯಾವುದೇ ಕೆಲಸವನ್ನು ಆಸಕ್ತಿಯಿಂದ ಮಾಡಿದಲ್ಲಿ ಅದಕ್ಕೆ ಉತ್ತಮ ಫಲಿತಾಂಶ ಸಿಗಲಿದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿನ ಬುದ್ಧಿ ಶಕ್ತಿ, ಕ್ರಿಯಾ ಶಕ್ತಿ, ಸೃಜನ ಶಕ್ತಿಯನ್ನು ಪ್ರೋತ್ಸಾಹಿಸಲು ಎನ್‌ಎಸ್‌ಎಸ್ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂದು ಹೇಳಿದರು.

ಸ್ನೇಹಾ ಅರಬಿ ಮತ್ತು ಅಕ್ಷತಾ ಬೋಕಿ ಎನ್‌ಎಸ್‌ಎಸ್ ಗೀತೆ ಹಾಡಿದರು. ಸಾರಿಯಾ ಜಲಗೇರಿ ಸ್ವಾಗತಿಸಿದರು.ಸಿದ್ದಣ್ಣ ಗೌಡರ ವಂದಿಸಿದರು. ವಿನಯ ಚವ್ಹಾಣ ನಿರೂಪಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಎಸ್.ವಾಯ್.ಬೊಮ್ಮಣ್ಣವರ ಹಾಗೂ ಎಸ್.ಎಂ.ಹಡಪದ, ಶಿಬಿರದ ವಿದ್ಯಾರ್ಥಿ ನಾಯಕರಾದ ಪಾಂಡು ಗುದಗಿ ಹಾಗೂ ಭ್ರಮರಾಂಬ ಮಡಿವಾಳರ, ಎಫ್‌ಡಿಎ ರಾಜು ಚವ್ಹಾಣ ಇದ್ದರು.

# ಡ್ರಗ್ಸ್ ವಿರುದ್ಧ ಜಾಗೃತಿ ಡಿಎಆರ್ ಮೈದಾನದಲ್ಲಿ 5ಏ, 10 ಮ್ಯಾರಥಾನ್



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಮಾಜದಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಬಳಕೆ, ರಸ್ತೆ ಅಪಘಾತಗಳು ಹಾಗೂ ಸೈಬರ್ ಅಪರಾಧಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ಡಿಎಆರ್ ಮೈದಾನದಲ್ಲಿ 5ಏ ಮತ್ತು 10ಏ ಜಾಗೃತಿ ಮ್ಯಾರಥಾನ್ ಓಟವನ್ನು ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಬಳ್ಳಾರಿ ಜಿಲ್ಲಾ ವರಿಷ್ಠಾಧಿಕಾರಿಗಳಾದ ಆಡಿ. ಖಣಟಚಿಟಿ ಆ. ಕಜಟಿಟಜಇಚಿಡಿ ಅವರು, ಈ ಜಾಗೃತಿ ಮ್ಯಾರಥಾನ್ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಬಳ್ಳಾರಿಯಲ್ಲಿ ಮೂರನೇ ಬಾರಿ ನಡೆಯುತ್ತಿದೆ ಎಂದು ತಿಳಿಸಿದರು. ಈ ಬಾರಿ ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡು ಭಾಗವಹಿಸಿರುವುದು ಸಂತಸದ ಸಂಗತಿ ಎಂದರು. ಹಿರಿಯ ನಾಗರಿಕರಿಗಾಗಿ ವಿಶೇಷವಾಗಿ 2 ಕಿಲೋಮೀಟರ್ ವಾಕತ್ತಾನ್ ವ್ಯವಸ್ಥೆ ಮಾಡಲಾಗಿತ್ತು.

ಮ್ಯಾರಥಾನ್‌ನ ಮುಖ್ಯ ಉದ್ದೇಶ ಯುವಕರನ್ನು ಡ್ರಗ್ಸ್‌ನಿಂದ ದೂರವಿರಿಸಿ, ಕ್ರೀಡೆ ಮತ್ತು ಆರೋಗ್ಯಕರ ಜೀವನಶೈಲಿಯತ್ತ ಒಲಿಸಿಸುವುದು. ಜೊತೆಗೆ ರಸ್ತೆ ಸುರಕ್ಷತೆ ನಿಯಮಗಳ ಪಾಲನೆ, ಮಹಿಳೆ–ಮಕ್ಕಳ ರಕ್ಷಣೆ ಹಾಗೂ ಸೈಬರ್ ಅಪರಾಧಗಳ ಬಗ್ಗೆ ಎಚ್ಚರಿಕೆ ಮೂಡಿಸುವುದು ಕೂಡ ಈ ಕಾರ್ಯಕ್ರಮದ ಗುರಿಯಾಗಿತ್ತು ಎಂದು ಅವರು ಹೇಳಿದರು.

ಓಟದ ಅಂತ್ಯದಲ್ಲಿ ವಿವಿಧ ವಿಭಾಗಗಳ ವಿಜೇತರಿಗೆ ಪ್ರಶಸ್ತಿ ಪತ್ರ, ಹೆಲ್ಮೆಟ್ ಹಾಗೂ ಪದಕಗಳನ್ನು ವಿತರಿಸಲಾಯಿತು. ಸಾರ್ವಜನಿಕರು ಮತ್ತು ಯುವಜನತೆ ಉತ್ಸಾಹದಿಂದ ಪಾಲ್ಗೊಂಡು ಜಾಗೃತಿ ಸಂದೇಶಕ್ಕೆ ಬೆಂಬಲ ಸೂಚಿಸಿದರು.

# ಸಾಮಾಜಿಕ ನ್ಯಾಯಕ್ಕೆ ಧಕ್ಕೆ:ಶಶಿಕಲಾ ಕುಪ್ಪಿ ಆಕ್ರೋಶ



**ಮಲ್ಲಮ್ಮ ನುಡಿ, ಹುಣಸಗಿ:**

ಹಿಂದುಳಿದ ವರ್ಗ ಹಾಗೂ ಎಸ್ಸಿ/ಎಸ್ಟಿ ಸಮುದಾಯಗಳಿಗೆ ಶೇ.56 ಮೀಸಲಾತಿಗೆ ಸಂಬಂಧಿಸಿದಂತೆ ತಕ್ಷಣವೇ ನ್ಯಾಯಾಂಗದ ಒಪ್ಪಿಗೆ ಪಡೆಯಲು ಸರ್ಕಾರ ಬಲವಾದ ವಾದ ಮಂಡಿಸದೆ ಹಳೆಯ ಶೇ.50 ಮಿತಿಯನ್ನೇ ಮುಂದುವರಿಸಿರುವುದು ನಾಚಿಕೆಗೇಡಿನ ಸಂಗತಿ ಎಂದು ಮಾದಿಗ ಸಮಾಜದ ಶಶಿಕಲಾ ಕುಪ್ಪಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.ನಮ್ಮ ಪತ್ರಿಕೆಯೊಂದಿಗೆ ಮಾತಾಡಿದ ಅವರು ತೆಲಂಗಾಣ ಹಾಗೂ ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿಯಲ್ಲಿದೆ. ತಮಿಳುನಾಡು ರಾಜ್ಯದಲ್ಲಿ ಶೇ.69ರವರೆಗೆ ಮೀಸಲಾತಿ ಜಾರಿಯಲ್ಲಿದೆ. ಇಂತಹ ಮಾದರಿಗಳನ್ನು ಅನುಸರಿಸಲು ರಾಜ್ಯ ಸರ್ಕಾರ ಮೀನಮೇಷ ಎಣಿಸುತ್ತಿರುವುದು ಶುದ್ಧ ಮೂರ್ಖತನವಲ್ಲ, ಜಾಣತನದ ನಡೆ ಎಂದು ಅವರು ಟೀಕಿಸಿದ್ದಾರೆ.ಪದೇ ಪದೇ ಕಾನೂನು ನೆಪ ಹೇಳಿಕೊಂಡು ಸಮುದಾಯಕ್ಕೆ ದ್ರೋಹ ಬಗೆಯುತ್ತಿರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಸಂವಿಧಾನ ತಿದ್ದುಪಡಿ ಅಥವಾ 9ನೇ ಅನುಬಂಧದಲ್ಲಿ ಸೇರಿಸುವ ಮೂಲಕ ಸಾಮಾಜಿಕ ನ್ಯಾಯದ ಹಕ್ಕು ಸಾಧಿಸಲು ಒಳಮೀಸಲಾತಿ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು.ಈ ಹಿಂದಿನ ಭಾರತೀಯ ಜನತಾ ಪಾರ್ಟಿ ಸರ್ಕಾರ ಎಸ್ಸಿ–18% ಹಾಗೂ ಎಸ್ಟಿ–7% ಸೇರಿಸಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿತ್ತು. ಆದರೆ ಪ್ರಸ್ತುತ ಸರ್ಕಾರ ಇತರ ರಾಜ್ಯಗಳ ಮಾದರಿ ಅನುಸರಿಸದೆ ಜಾರಿಗೆ ವಿಳಂಬ ನೀತಿ ತಾಳಿರುವುದು ಸಮುದಾಯದ ದುರಾದೃಷ್ಟಕರ ಸಂಗತಿ ಎಂದರು.

ಒಳಮೀಸಲಾತಿ ಸಾಮಾಜಿಕ ನ್ಯಾಯದ ಹಕ್ಕಾಗಿದ್ದು, ಅದನ್ನು ಜಾರಿಗೊಳಿಸಲು ಸರ್ಕಾರ ವಿಫಲವಾದರೆ ಸಮುದಾಯದ ಸಚಿವರು ರಾಜೀನಾಮೆ ನೀಡಬೇಕು. ಒಂದು ವೇಳೆ ಒಳಮೀಸಲಾತಿ ನೀಡದೆ ಹುದ್ದೆಗಳ ಭರ್ತಿ ಪ್ರಕ್ರಿಯೆ ಮುಂದುವರಿಸಿದರೆ ಸರ್ಕಾರಕ್ಕೆ ಉಳಿಗಾಲವಿಲ್ಲ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

# ಎಂಬತ್ತರ ದಶಕದಲ್ಲಿ ಶಿಕ್ಷಣ ಕ್ರಾಂತಿ ಮಾಡಿದ ಮಹಾನ್ ಶಿಕ್ಷಣ ದಾಸೋಹಿ ಡಾ. ಸಿದ್ದಲಿಂಗಶ್ರೀಗಳು : ಸಿ ಎಸ್ ಅಂಗಡಿ



ಮಲ್ಲಮ್ಮ ನುಡಿ ವಾರ್ತೆ

**ಕುಕನೂರ:** ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿರುವ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಪೂಜ್ಯ ಲಿಂಗೈಕ್ಯ ಡಾ. ಸಿದ್ದಲಿಂಗ ಮಹಾಸ್ವಾಮಿಗಳವರ 77ನೇ ಜಯಂತಿ ಅಂಗವಾಗಿ ಭಾವೈಕ್ಯತ ದಿನಾಚರಣೆಯನ್ನು ಆಯೋಜಿಸಲಾಯಿತು ಈ ವೇಳೆ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಸಿ ಎಸ್ ಅಂಗಡಿ ಮಾತನಾಡುತ್ತ ಕನ್ನಡಕ್ಕಾಗಿ ಹೋರಾಟ ಮಾಡಿ ಗೋಕಾಕ್ ಚಳುವಳಿಯಲ್ಲಿ ಉತ್ತರ ಕರ್ನಾಟಕದ ಪ್ರಮುಖರಾಗಿ ನಿಂತುಕೊಂಡ ಶ್ರೀಗಳು ಎಂದಿಗೂ ಕನ್ನಡಿಗರ ಮನಸ್ಸಿನಲ್ಲಿ ಅಜರಾಮರಾಗಿ ಉಳಿದುಕೊಳ್ಳುತ್ತಾರೆ 1974ರಲ್ಲಿ 19ನೆಯ ಪೀಠಾಧಿಪತಿಯಾಗಿ ತೋಂಟದಾರಿಯ ಮಠಕ್ಕೆ ಪಾದಾರ್ಪಣೆ ಮಾಡಿದ ಶ್ರೀಗಳು ಅವರ ದಿವ್ಯ ಆಲೋಚನೆಯ ಮುಖಾಂತರ ಕೋಮು ಸೌಹಾರ್ದತೆಯನ್ನು ಮೂಡಿಸಿ ಪರಸ್ಪರರಲ್ಲಿ ಪ್ರೀತಿ ವಿಶ್ವಾಸ ಭಾವನೆ ಮೂಡಿಸಿದ ಮಹಾನ್ ಚೈತನ್ಯರಾಗಿದ್ದರು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದ್ದು ಗ್ರಾಮೀಣ ಬಡ ಮಕ್ಕಳಿಗೆ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ಎಂಬತ್ತರ ದಶಕದಲ್ಲಿಯೇ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ರಾಂತಿ ಮಾಡಿದ ಮಹಾನ್ ಶಿಕ್ಷಣ ದಾಸೋಹಿ ಯಾಗಿದ್ದಾರೆ ಎಂದು ಹೇಳಿದರು. ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡುವುದು ಕಷ್ಟಕರವಾಗಿದ್ದ ದಿನಗಳಲ್ಲಿ ಕೇವಲ ಎರಡು ವರ್ಷದ ಶಿಕ್ಷಣದೊಂದಿಗೆ ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳುವ ನಿಟ್ಟಿನಲ್ಲಿ 1983 ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ವಿದ್ಯಾರ್ಥಿಗಳ ಪಾಲಿನ ಕಾಮಧೇನು ವಾಗಿದ್ದಾರೆ. ಇವರ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ ಬಹುತೇಕರು ಇಂದು ಸ್ವಾವಲಂಬನೆ ಜೀವನ ನಡೆಸುತ್ತಿದ್ದು ಜೊತೆಗೆ ಉನ್ನತ ಪದವಿಯನ್ನು ಸಹ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದ್ದು ಜಾತಿ, ಧರ್ಮ ಬೇದಭಾವವಿಲ್ಲದೆ ಸರ್ವರಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಶ್ರೀಗಳು ಎಂದಿಗೂ ಭಕ್ತರ ಮನದಾಳದಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ ಅವರ ಹೆಸರಿನಲ್ಲಿ ಭಾವೈಕ್ಯತ ದಿನ ಆಚರಣೆ ಮಾಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ತಿಳಿಸಿದರು. ಸಂಸ್ಥೆಯ ತರಬೇತುದಾರ ಭೋಜರಾಜ ಸಪ್ಪಿಮಠ ಮಾತನಾಡುತ್ತಾ ಜಿಲ್ಲೆಯ ಕಪ್ಪತ್ತಗುಡ್ಡ ಪ್ರದೇಶದಲ್ಲಿ ಕೈಗಾರಿಕಾ ಸ್ಥಾಪನೆಗೆ ಮುಂದಾದಾಗ ಅದಕ್ಕೆ ವಿರೋಧ ವ್ಯಕ್ತಪಡಿಸಿ ರೈತರ ಭೂಮಿಯನ್ನು ಉಳಿಸಿಕೊಂಡು ಹಸಿರನ್ನು ಶಾಶ್ವತವಾಗಿ ನೆಲೆಯೂರುವಂತೆ ಮಾಡಿ ಕರ್ನಾಟಕದ ಅತ್ಯಂತ ಶುದ್ಧ ಗಾಳಿ ಪಸರಿಸುವ ಜಿಲ್ಲೆ ಎಂಬ ಕೀರ್ತವನ್ನು ಗದಗ ಜಿಲ್ಲೆಗೆ ನೀಡಿದ ಮಹಾನ್ ಚೇತನ ಡಾ.ತೋಂಟದಸಿದ್ದಲಿಂಗಮಹಾಸ್ವಾಮಿಗಳು ಎಂದು ತಿಳಿಸಿದರು. ಈ ವೇಳೆಯಲ್ಲಿ ಗ್ರಾಮದ ಪ್ರಮುಖರು, ಸಂಸ್ಥೆಯ ನಿವೃತ್ತ ಸಿಬ್ಬಂದಿಗಳು, ಸಿಬ್ಬಂದಿಗಳಿಗೆ ಮತ್ತು ಅವರ ಕುಟುಂಬಕ್ಕೆ ಸನ್ಮಾನಿಸಿ ಗೌರವಿಸಲಾಯಿತು. ಜೊತೆಗೆ ಭಾವೈಕ್ಯತೆ ದಿನದ ಪ್ರಯುಕ್ತ ಆಯೋಜಿಸಿದ್ದ ಕ್ರೀಡೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು. ಈ ವೇಳೆಯಲ್ಲಿ ಗ್ರಾಮದ ಪ್ರಮುಖರಾದ ಲಿಂಗರಾಜಗೌಡ ಹೊರಪೇಟೆ, ಹನುಮಂತಪ್ಪ ಉಪ್ಪಾರ, ಸಂಸ್ಥೆಯ ಸಿಬ್ಬಂದಿಗಳು ಮತ್ತು ನಿವೃತ್ತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಗೌರವ ಡಾಕ್ಟರೇಟ್ ಪ್ರದಾನ




**ಪೀಣ್ಯ, ದಾಸರಹಳ್ಳಿ:** ಏಷ್ಯಾ ಇಂಟರ್ನ್ಯಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯ ವತಿಯಿಂದ ಹೊಸೂರಿನಲ್ಲಿ ನಡೆದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಸಮಾರಂಭದಲ್ಲಿ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲೂಕು ಗ್ರಾಮದಲ್ಲಿ ನಿವಾಸಿಯಾದ ಸಮಾಜ ಸೇವಕರು ಹಾಗೂ ಸಂಘಟಕರಾದ ಡಾಕ್ಟರ್ ಹನುಮಂತಪ್ಪ ಕೆಂಚಪ್ಪ ದೊಡ್ಡಮನಿ ಅವರಿಗೆ ಸಮಾಜ ಸೇವೆ ಹಾಗೂ ಅನೇಕ ಕಲಾವಿದರಗಾಗಿ ದುಡಿಯುತ್ತಿರುವ ಬಡವರ ಹೇಳಿದಿಗಾಗಿ ದುಡಿದು ಬಂದಿರುತ್ತಾರೆ ನೀಡುತ್ತಾ ಬಂದಿರುತ್ತಾರೆ ಕ್ಷೇತ್ರದಲ್ಲಿ ರಂಗಭೂಮಿ ಕಲಾವಿದರು ಮತ್ತು ಸಮಾಜ ಸೇವೆ ಮತ್ತು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

## ಡ್ರಗ್ಸ್ ಫ್ರೀ ಕರ್ನಾಟಕ–ಫಿಟ್ನೆಸ್ ಫಾರ್ ಆಲ್ ಜಾಗೃತಿ ಓಟ..!



**ವಿಜಯಪುರ:** ಕರ್ನಾಟಕ ರಾಜ್ಯ ಪೊಲೀಸ್ ಹಾಗೂ ವಿಜಯಪುರ ಜಿಲ್ಲಾ ಪೋಲಿಸ್ ಅವರ ವತಿಯಿಂದ "ಡ್ರಗ್ಸ್ ಫ್ರೀ ಕರ್ನಾಟಕ ಫಿಟ್ನೆಸ್ ಫಾರ್ ಆಲ್" ಜಾಗೃತಿ ಓಟವನ್ನು ಭಾನುವಾರ ವಿಜಯಪುರದಲ್ಲಿ ಆಯೋಜಿಸಲಾಗಿತು. ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ ಪಾಟೀಲ ಅವರು ಚಾಲನೆ ನೀಡಿ, ಹಸಿರು ನಿಶಾನೆ ತೋರಿಸಿದರು, ಅದಲ್ಲದೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಫಿಟ್ನೆಸ್ ಫಾರ್ ಆಲ್ ಹಾಗೂ ಡ್ರಗ್ಸ್ ಮುಕ್ತ ಕರ್ನಾಟಕ ಗುರಿಯೊಂದಿಗೆ ರಾಜ್ಯ ಗೃಹ ಇಲಾಖೆಯ ವಿಜಯಪುರ ಜಿಲ್ಲಾ ಪೊಲೀಸ್ ಘಟಕ ಹಮ್ಮಿಕೊಂಡಿದ್ದ 'ಕರ್ನಾಟಕ ಪೊಲೀಸ್ ರನ್ 5ಏ' ಓಟದಲ್ಲಿ ಹೆಜ್ಜೆ ಹಾಕಿದ್ದು ಸಂತಸ ತರಿಸಿದೆ ಎಂದು ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು, ಮಾದಕ ವಸ್ತುಗಳ ನಿವಾರಣೆ ಮತ್ತು ಆರೋಗ್ಯಕರ ಜೀವನ ಶೈಲಿಯ ಅಗತ್ಯತೆಯನ್ನು ಒತ್ತಿ ಹೇಳಿದರು.

ಈ ವೇಳೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಲಕ್ಷ್ಮಣ ನಿಂಬರಗಿ, ಜಿಲ್ಲಾಧಿಕಾರಿ ಶ್ರೀ ಆನಂದ್ ಏ, ಮಹಾನಗರ ಪಾಲಿಕೆ ಸದಸ್ಯರು, ವಿಜಯಪುರ ಸೈಕ್ಲಿಂಗ್ ಗ್ರೂಪ್ ನ ಸದಸ್ಯರು, ಹಾಗೂ ಚಿಣ್ಣರು ಸೇರಿದಂತೆ ಸಹಸ್ರಾರು ಯುವಕರ, ಯುವತಿಯರು ಪಾಲ್ಗೊಂಡು ಓಟವನ್ನು ಯಶಸ್ವಿಗೊಳಿಸಿದರು.

## ಚಿಕ್ಕ ವಯಸ್ಸು, ವಿಚಾರ ದೊಡ್ಡದು!

**ಕೊಪ್ಪಳ:** ಕಾರ್ಖಾನೆಗಳ ಮಾಲಿನ್ಯದಿಂದ ನಲುಗುತ್ತಿರುವ ಹಳ್ಳಿಗಳ ಕಳವಳದ ನಡುವೆ, ಎಂಟು ವರ್ಷದ ಬಾಲಕನೊಬ್ಬ ಸಮಾಜದ ಗಮನ ಸೆಳೆದಿದ್ದಾನೆ. ಕೊಪ್ಪಳದ ಹರ್ಷರಾಜ್ ಎಂ ಕಟ್ಟಿಮನಿ ಎಂಬ ಬಾಲಕ 2ನೇ ತರಗತಿ, ಪಿ ಎಮ್ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದು ತನ್ನ ಚಿಕ್ಕ ವಯಸ್ಸಿನಲ್ಲೇ ಪರಿಸರ ಜಾಗೃತಿಗೆ ಕೈಜೋಡಿಸಿರುವುದು ಗಮನಾರ್ಹ. ತಾಲೂಕಿನ 20ಕ್ಕೂ ಹೆಚ್ಚು ಗ್ರಾಮಗಳು ಕಾರ್ಖಾನೆಗಳ ಕಪ್ಪು ಹೊಗೆ ಮತ್ತು ಧೂಳಿನಿಂದ ಸಂಕಷ್ಟ ಅನುಭವಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ನಡೆದ ಕೊಪ್ಪಳ ಬಂದ್ ವೇಳೆ, ಹರ್ಷರಾಜ ನೆಬ್ಯುಲೈಜೇಷನ್ ಸಹಾಯದಿಂದಲೇ ಪುಟ್ಟ ಸೈಕಲ್ ಏರಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾನೆ. ಹರ್ಷರಾಜನಂತಹ ಬಾಲಮನಗಳ ಜಾಗೃತಿ ಜನಪ್ರತಿನಿಧಿಗಳಿಗೂ ತಲುಪಲಿ ಎಂಬುದು ಸಾರ್ವಜನಿಕರ ಆಶಯವಾಗಿದೆ.



## ಹಿಂದೂ ಸಮ್ಮೇಳನ, ಬೃಹತ್ ಶೋಭಾಯಾತ್ರೆ



**ಬಾಗಲಕೋಟೆ:** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಸಂಭ್ರಮದ ಪ್ರಯುಕ್ತ ನಗರದಲ್ಲಿ ರವಿವಾರ ಹಮ್ಮಿಕೊಳ್ಳಲಾಗಿದ್ದ ವಿರಾಟ ಹಿಂದೂ ಸಮ್ಮೇಳನದ ಅಂಗವಾಗಿ ಬೃಹತ್ ಶೋಭಾಯಾತ್ರೆ ಜರುಗಿತು.

ಮಧ್ಯಾಹ್ನ 4 ಗಂಟೆಗೆ ಭಾರತ ಮಾತೆಯ ಭಾವಚಿತ್ರ, ಜಗಜ್ಯೋತಿ ಬಸವೇಶ್ವರ, ಹಾನಗಲ್ಲ ಗುರುಕುಮಾರ ಸ್ವಾಮೀಜಿ ಸೇರಿದಂತೆ ವಿವಿಧ ಸಮಾಜಗಳ ಮಹನೀಯರ ಭಾವಚಿತ್ರ ಹೊತ್ತ ಸಿಂಗಾರಗೊಂಡ ವಾಹನಗಳು, ಪುರುವಂತಿಕೆ, ಡೊಳ್ಳು, ಭಜನೆ, ಗೊಂಬೆ ಕುಣಿತ ಮುಂತಾದ ವಾದ್ಯ ವೈಭವಗಳೊಂದಿಗೆ ನಡೆದ ಶೋಭಾಯಾತ್ರೆಯಲ್ಲಿ ಸಹಸ್ರಾರು ಜನ ಪಾಲ್ಗೊಂಡಿದ್ದರು.

ನಗರದ ವೆಂಕಟಪೇಟೆಯ ಪಾಂಚಜನ್ಯ ಶಾಖಾ ಸಂಘಸ್ಥಾನ ವೆಂಕಟೇಶ್ವರ ದೇವಸ್ಥಾನದ ಬಳಿ ಗೋವು ಪೂಜೆ ನೆರವೇರಿಸಿದ ನಂತರ ಹೊರಟ ಭವ್ಯ ಶೋಭಾಯಾತ್ರೆ ಹಳೇ ಅಂಚೆಕಚೇರಿ, ಕಿಲ್ಲಾ ಚಾವಡಿ, ಟಾಂಗಾ ಸ್ಟ್ಯಾಂಡ್, ವಲ್ಲಭಭಾಯಿ ಚೌಕ್, ಸ್ಟೇಶನ್ ರಸ್ತೆ, ಬಸವೇಶ್ವರ ಸರ್ಕಲ್ ಮೂಲಕ ಬಸವೇಶ್ವರ ಕಾಲೇಜು ಮೈದಾನ ತಲುಪಿತು. ಯಾತ್ರೆಯುದ್ದಕ್ಕೂ ಭಾರತಮಾತೆ, ಶಿವಾಜಿ ಮಹಾರಾಜ ಪರವಾಗಿ ಘೋಷಣೆಗಳು ಮೊಳಗಿದವು. ಪುಟ್ಟ ಪುಟ್ಟ ಮಕ್ಕಳು ಮಹಾತ್ಮರು, ಶರಣರು ವೇಷ ಭೂಷಣ ತೊಟ್ಟು ವಾಹನಗಳಲ್ಲಿ ಬರುತ್ತಿದ್ದಂತೆ ನೆರೆದ ಜನ ಪುಷ್ಪ ಎರಚಿ ದೇಶಭಿಮಾನ ಮೆರೆದರು. ಮಾರ್ಗದುದ್ದಕ್ಕೂ ಕೇಸರಿ ಧ್ವಜಗಳು ರಾರಾಜಿಸಿದವು. ಶೋಭಾಯಾತ್ರೆಯ ಮಾರ್ಗದಲ್ಲಿ ಬಣ್ಣ ಬಣ್ಣದ ರಂಗೋಲಿ ಹಾಕಿ ಭವ್ಯ ಸ್ವಾಗತ ನೀಡಲಾಯಿತು.

ಶೋಭಾಯಾತ್ರೆಯ ಪ್ರಾರಂಭದಲ್ಲಿ ವೆಂಕಟೇಶ್ವರ ದೇವಸ್ಥಾನದ ಬಳಿ ಗೋವು ಪೂಜೆ ನೆರವೇರಿಸಿದ ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಶಾಸಕ ವೀರಣ್ಣ ಚರಂತಿಮಠ ಶೋಭಾಯಾತ್ರೆಗೆ ಚಾಲನೆ ನೀಡಿದರು. ಶೋಭಾಯಾತ್ರೆಯಲ್ಲಿ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಬಸವೇಶ್ವರ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಸದಸ್ಯರು, ವ್ಯಾಪಾರಸ್ಥರು, ಮಹಿಳೆಯರು, ವಿದ್ಯಾರ್ಥಿಗಳು, ಮಕ್ಕಳು ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಇಫ್ತಾರ್ ಕೂಟ: ಸೌಹಾರ್ದತೆಯೇ ಬದುಕಿನ ಯಶಸ್ಸು

• **ಮಲ್ಲಮ್ಮ ನುಡಿ ವಾರ್ತೆ ಮೂಡುಗೋಪಾಡಿ**

"ಜಗತ್ತಿನ ಎಲ್ಲಾ ಧರ್ಮಗ್ರಂಥಗಳು ಮನುಷ್ಯನನ್ನು ಮೊದಲು ಮನುಷ್ಯನನ್ನಾಗಿ ರೂಪಿಸಲು ಶ್ರಮಿಸುತ್ತವೆ. ನಾವು ಮನುಷ್ಯತ್ವವನ್ನು ಮರೆತು ವಿಕೃತಿಯತ್ತ ಸಾಗಿದಾಗ ಪ್ರಕೃತಿಯೇ ನಮಗೆ ಎಚ್ಚರಿಕೆ ನೀಡುತ್ತದೆ. ಆದ್ದರಿಂದ ಅಹಂಕಾರ ತೊರೆದು ಸಾಮರಸ್ಯದಿಂದ ಬದುಕುವುದು ಇಂದಿನ ಅಗತ್ಯ," ಎಂದು ಹಿರಿಯ ಪತ್ರಕರ್ತ ಜಾನ್ ಡಿಸೋಜಾ ಹೇಳಿದರು.

ಅವರು ಫೆಬ್ರವರಿ 28ರಂದು ಶನಿವಾರ ಮೂಡುಗೋಪಾಡಿ ರಿಫಾಯೀ ಜುಮ್ಮಾ ಮಸ್ಜಿದ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ 'ಗ್ರ್ಯಾಂಡ್ ಸೌಹಾರ್ದ ಇಫ್ತಾರ್ ಕೂಟ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ ಧರ್ಮಗಳು ಹುಟ್ಟಿರುವುದು ಮನುಷ್ಯರನ್ನು ರಾಕ್ಷಸರನ್ನಾಗಿ ಮಾಡಲಿಕ್ಕಲ್ಲ, ಬದಲಾಗಿ ಅವರಲ್ಲಿರುವ ಮಾನವೀಯತೆಯನ್ನು ಜಾಗೃತಗೊಳಿಸಲು. ಇಸ್ಲಾಂ, ಕ್ರೈಸ್ತ, ಹಿಂದೂ ಅಥವಾ ಬೌದ್ಧ ಯಾವುದೇ ಧರ್ಮವಿರಲಿ, ಅವುಗಳ ಮೂಲ ಉದ್ದೇಶ ಶಾಂತಿ ಮತ್ತು ಪ್ರೀತಿಯನ್ನು ಬಿತ್ತುವುದಾಗಿದೆ. ಪ್ರವಾದಿ ಮಹಮ್ಮದ್ ಪೈಗಂಬರರು ಜಗತ್ತಿಗೆ ನೀಡಿದ ಮಾನವ ಪ್ರೇಮದ ಸಂದೇಶವನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉಪವಾಸವು ಕೇವಲ ಧಾರ್ಮಿಕ ವಿಧಿಯಲ್ಲ, ಅದು ದೇಹದ ಆರೋಗ್ಯ ಹಾಗೂ ಆತ್ಮಶುದ್ಧಿಯ ಮಾರ್ಗವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.



**ಸೌಹಾರ್ದತೆಯೇ ಕುಂದಾಪುರದ ಶಕ್ತಿ:** ಇನ್ನೋರ್ವ ಮುಖ್ಯ ಅತಿಥಿ, ಕಾಂಗ್ರೆಸ್ ಮುಖಂಡ ಮಲ್ಯಾಡಿ ಶಿವರಾಮ ಶೆಟ್ಟಿ ಮಾತನಾಡಿ, "ಮೂಡುಗೋಪಾಡಿ ಪರಿಸರದಲ್ಲಿ ದಶಕಗಳಿಂದಲೂ ಸೌಹಾರ್ದತೆ ನೆಲೆಸಿದೆ. ಪ್ರತಿಯೊಬ್ಬರಿಗೂ ಅವರವರ ದೈವದ ಮೇಲೆ ಅಪಾರ ನಂಬಿಕೆಯಿರುತ್ತದೆ, ಆ ನಂಬಿಕೆಯೇ ಬದುಕಿಗೆ ದಾರಿದೀಪ. ನಮ್ಮ ಹಬ್ಬಗಳಲ್ಲಿ ಮುಸ್ಲಿಂ ಬಾಂಧವರು ಹಾಗೂ ಅವರ ಕಾರ್ಯಕ್ರಮಗಳಲ್ಲಿ ನಾವು ಪಾಲ್ಗೊಳ್ಳುವ ಮೂಲಕ ಸಹೋದರತ್ವವನ್ನು ಎತ್ತಿ ಹಿಡಿಯುತ್ತಿದ್ದೇವೆ. ದೇವರು ಒಬ್ಬನೇ ಎಂಬ ತತ್ವದಡಿ ಎಲ್ಲರೂ ಒಟ್ಟಾಗಿ ಸಮಾಜದ ಏಳಿಗೆಗಾಗಿ ಶ್ರಮಿಸೋಣ," ಎಂದರು.

**ಸರ್ವ ಜನಾಂಗದ ಶಾಂತಿಯ ತೋಟ:** ಕಾರ್ಯಕ್ರಮವನ್ನು ಉದ್ಘಾಟಿಸಿದ ಆರ್‌ಜೆಎಂ ಮೂಡುಗೋಪಾಡಿ ಖತೀಬರಾದ ರಮೀಝ್ ಜೌಹರಿ ಮಾತನಾಡಿ, "ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟ. ನಾವು ಸೇವಿಸುವ ಅನ್ನಕ್ಕೆ ಜಾತಿಯಿಲ್ಲ, ಅದರ ಹಿಂದೆ ಹತ್ತಾರು ಧರ್ಮದವರ ಶ್ರಮವಿದೆ. ಅನ್ನಕ್ಕಿಲ್ಲದ ಜಾತಿ ನಮಗೇಕೆ? 'ನೀನು ಮೊದಲು ಮಾನವನಾಗು' ಎಂಬ ಸಿದ್ಧಯ್ಯ ಪುರಾಣಿಕರ ಸಾಲುಗಳಂತೆ ನಾವು ಬದುಕಬೇಕು. ಇಸ್ಲಾಂ ಸ್ತ್ರೀ ಕುಲಕ್ಕೆ ಅತ್ಯಂತ ಉನ್ನತ ಸ್ಥಾನಮಾನ ನೀಡಿದೆ," ಎಂದು ತಿಳಿಸಿದರು.

**ಜಾಗತಿಕ ಶಾಂತಿಯೇ ಮನುಕುಲದ ಉಳಿವಿಗೆ ಮಾರ್ಗ:** ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡರಾದ ಎಂ.ಎ. ಗಫೂರ್ ಮಾತನಾಡಿ, ಜಗತ್ತಿನಲ್ಲಿ ಯುದ್ಧದ ಕಾರ್ಮೋಡಗಳು ಕವಿದಿರುವ ಈ ಸಂದರ್ಭದಲ್ಲಿ ಶಾಂತಿ ಮತ್ತು ಮಾನವೀಯ ಮೌಲ್ಯಗಳೇ ಸುಂದರ ಬದುಕಿಗೆ ಆಧಾರವಾಗಿದೆ.

ಇಸ್ರೇಲ್ – ಇರಾನ್ ನಡುವಿನ ಉದ್ವಿಗ್ನತೆ ಹಾಗೂ ಗಲ್ಫ್ ರಾಷ್ಟ್ರಗಳ ಅಸ್ಥಿರತೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ಯುನೈಟೆಡ್ ಸ್ಟೇಟ್ಸ್ ಸೇರಿದಂತೆ ಪ್ರಬಲ ರಾಷ್ಟ್ರಗಳು ಯುದ್ಧಕ್ಕೆ ಬದಲಾಗಿ ಶಾಂತಿಗೆ ಒತ್ತು ನೀಡಬೇಕು ಎಂದರು.

ಭಾರತವು ಜಾಗತಿಕ ಸಂಘರ್ಷಗಳನ್ನು ಶಮನಗೊಳಿಸುವ ನಿಟ್ಟಿನಲ್ಲಿ ಮಧ್ಯಪ್ರವೇಶಿಸಬೇಕೆಂದು ಆಗ್ರಹಿಸಿದ ಅವರು, "ಸರ್ವೇ ಜನೋ ಸುಖಿನೋ ಭವಂತು" ಹಾಗೂ "ವಸುಧೈವ ಕುಟುಂಬಕಂ" ಸಂದೇಶದಂತೆ ಮಾನವೀಯ ನೆಲೆಯಲ್ಲಿ ಬದುಕುವುದು ನಿಜವಾದ ಧರ್ಮ ಎಂದು ಅಭಿಪ್ರಾಯಪಟ್ಟರು.

ಆರ್‌ಜೆಎಂ ಮೂಡುಗೋಪಾಡಿ ಇದರ ಅಧ್ಯಕ್ಷರಾದ ಬಿ. ಎಂ. ಹಂಝ ಹಾಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಮೊಳಹಳ್ಳಿ ದಿನೇಶ್ ಹೆಗ್ಡೆ, ಗೋಪಾಡಿ ಗ್ರಾ.ಪಂ. ಅಧ್ಯಕ್ಷ ಸುರೇಶ್ ಶೆಟ್ಟಿ, ಶ್ರೀ ಕೋಟಿಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಸುಧಾ–ಕರ್ ನಂಬಿಯಾರ್, ಪತ್ರಕರ್ತ ಕೆ. ಸಿ. ರಾಜೇಶ್, ರಮೇಶ್ ಶೆಟ್ಟಿ ವಕ್ವಾಡಿ, ಆರ್‌ಜೆಎಂ ಗೌರವಾಧ್ಯಕ್ಷ ಜಿ. ಮುಹಮ್ಮದ್, ಬಿ. ಎ. ಮೊಹಮ್ಮದ್ ಹಾಜಿ ಮತ್ತಿತರರು ಪಾಲ್ಗೊಂಡು ಶುಭ ಹಾರೈಸಿದರು.

ನಾಸೀರ್ ಕಟ್ಕೆರೆ ಕಾರ್ಯಕ್ರಮವನ್ನು ಸ್ವಾಗತಿಸಿ ನಿರೂಪಿಸಿದರು. ಬಿ. ಎಂ. ನಾಸಿರ್ ವಂದಿಸಿದರು. ವಿವಿಧ ಧಾರ್ಮಿಕ ಗುರುಗಳು, ರಾಜಕೀಯ ಮುಖಂಡರು ಹಾಗೂ ಮಸೀದಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಜಾತಿ ವಿನಾಶವೇ ವರ್ಗ ಹೋರಾಟದ ಯಶಸ್ವಿ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಪಟ್ಟಣದ ಶಾದಿ ಮಹಲನಲ್ಲಿ ಸಿಪಿಐ(ಎಂಎಲ್) ರೆಡ್ ಸ್ಟಾರ್ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದ್ದ ಜಿಲ್ಲಾ ಮಟ್ಟದ ವಿಚಾರ ಸಂಕಿರಣವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಭಾರತದ ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅಪಾರವಾದ ತ್ಯಾಗ ಬಲಿದಾನ ಮಾಡಿದರು. ತೆಲಂಗಾಣ, ತೆಭಾಗ, ಕಯ್ಯುರ, ವರ್ಲಿ, ಸುವರ್ಣಕಣಿವೆ ಸೇರಿದಂತೆ ಮುಂಬೈ ಕಾರ್ಮಿಕರ ಹಾಗೂ ನೌಕಾದಳಗಳ ಬಂಡಾಯಗಳಿಗೆ ನೇತೃತ್ವ ವಹಿಸಿದರು.

ಆದರೆ, ತಪ್ಪಾದ ಕಾರ್ಯತಂತ್ರ ಹಾಗೂ ಕಾಂಗ್ರೆಸ್ ಪಾರ್ಟಿಯ ಕುರಿತು ತಾಳಿದ ಅನಿರ್ದಿಷ್ಟ ಅವಗಹನೆಯಿಂದಾಗಿ ಸ್ವಾತಂತ್ರ್ಯ ಚಳುವಳಿಗೆ ನೇತೃತ್ವ ಕೊಡಲಾಗಲಿಲ್ಲ. ಇಡೀ ಸಂಘ ಪರಿವಾರ ಬ್ರಿಟಿಷ್ ವಸಾಹಾತುವಾದಿಗಳ ಜೊತೆ ಇದ್ದು ಭಾರತದ ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆಯಿತು. ಮುಸ್ಲಿಂ ಲೀಗ್ ಸ್ವಾತಂತ್ರ್ಯ ಚಳುವಳಿಯಲ್ಲಿ ಇದ್ದುಕೊಂಡೆ ದ್ವಿರಾಷ್ಟ್ರ ಸ್ವಾತಂತ್ರ್ಯವನ್ನು ಪ್ರತಿಪಾದಿಸಿತು. ಒಟ್ಟಾರೆ, ಸ್ವಾತಂತ್ರ್ಯ ಚಳುವಳಿ ಎಂದರೆ ಕೇವಲ ಕಾಂಗ್ರೆಸ್ ಅಲ್ಲವೇ ಅಲ್ಲ.



ಕಮ್ಯುನಿಸ್ಟರ ವಿರೋಚಿತವಾದ ಹೋರಾಟದ ತ್ಯಾಗ ಬಲಿದಾನ ಇದರ ಹಿಂದಿದೆ ಎಂದು ಕಮ್ಯುನಿಸ್ಟ್ ಪಕ್ಷದ ಮುಖಂಡ ಆರ್. ಮಾನಸಯ್ಯ ವಿಚಾರ ಮಂಡಿಸಿದರು.

ಭಾರತದಲ್ಲಿ ಜಾತಿ ಹಾಗೂ ವರ್ಗಗಳು ಪ್ರತ್ಯೇಕಿಸಲಾಗದ ಆರ್ಥಿಕ ರಾಜಕೀಯ ಹಾಗೂ ಸಾಮಾಜಿಕ ವಾಸ್ತವಗಳಾಗಿವೆ. ಜಾತಿಯು ಇಲ್ಲಿನ ಪ್ರತಿಯೊಂದು ಸಮುದಾಯದ ಆಸ್ತಿ, ಅಧಿಕಾರ, ಅಂತಸ್ಥನ್ನು ನಿರ್ಧರಿಸುತ್ತದೆ. ಬಹುತೇಕ ಮೇಲ್ಜಾತಿಗಳು ಆಸ್ತಿ ಹೊಂದಿದ ಶೋಷಕ ವರ್ಗಗಳಾಗಿವೆ. ನೂರಕ್ಕೆ 99 ರಷ್ಟು ದಲಿತರು ಹಾಗೂ ದುರ್ಬಲರು ಆಸ್ತಿ ಇಲ್ಲದ, ಅಸ್ಪೃಶ್ಯತೆ ಹಾಗೂ ಜಾತಿ ತುಳಿತಕ್ಕೆ ತುತ್ತಾದ ಸಮುದಾಯಗಳಾಗಿವೆ. ಜಾತಿ ನಿರ್ಮೂಲನೆಯೆ ಅಂಬೇಡ್ಕರ್ ವಾದಿ ಹಾಗೂ ಮಾರ್ಕ್ಸ್ ವಾದಿಗಳ ಪರಮ ಗುರಿಯಾಗಬೇಕು ಎಂದರು.

## ರಸ್ತೆ ನಿರ್ಮಾಣ: ಒಂದೇ ವಾರದಲ್ಲಿ ಬಿರುಕು

• **ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ**

ತಾಲೂಕಿನ ದಂಡೋತಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣಗೊಂಡ ಒಂದೇ ವಾರದಲ್ಲಿ ಬಿರುಕು ಬಿಟ್ಟಿದೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಕಾಮಗಾರಿಯು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಗುತ್ತಿಗೆದಾರರ ಕಳಪೆ ಕೆಲಸವನ್ನು ಎತ್ತಿ ತೋರಿಸುತ್ತದೆ. ಲೋಕೋಪಯೋಗಿ ಇಲಾಖೆಯಡಿ ಅಂದಾಜು 5 ಕೋಟಿ ವೆಚ್ಚದಲ್ಲಿ ಅಂಬಿಗರ ಚೌಡಯ್ಯ ಸಮುದಾಯ ಭವನದಿಂದ ಮಾತಾ ಮಾಣಿಕೇಶ್ವರಿ ದೇವಸ್ಥಾನದವರೆಗೆ ಕೈಗೊಂಡ ಸಿಸಿ ರಸ್ತೆ ಕಾಮಗಾರಿ ಕಳಪೆ ಮಟ್ಟದಲ್ಲಿ ನಡೆದಿರುವುದು ಸ್ಪಷ್ಟವಾಗಿ ಕಂಡುಬಂದಿದೆ ಎಂದು ಕೋಲಿ ಸಮಾಜದ ತಾಲೂಕು ಪ್ರಧಾನ ಕಾರ್ಯದರ್ಶಿ ಸಾಬಣ್ಣ ಭರಾಟೆ ತಿಳಿಸಿದ್ದಾರೆ.

ಎಸ್ಟಿಮೇಟ್ ಪ್ರಕಾರ ಸಿಸಿ ರಸ್ತೆ ಕಾಮಗಾರಿ ಮಾಡದೇ ಗುತ್ತಿಗೆದಾರರು ತಮ್ಮ ಮನಸ್ಸಿಗೆ ಬಂದಂತೆ ಕಾಮಗಾರಿ ಮಾಡಿದ್ದಾರೆ, ರಸ್ತೆಗೆ ಬೇಕಾದ ಅಗತ್ಯ ಸಿಮೆಂಟ್, ರಾಡ್ ಗಳು ಬಳಸಿಲ್ಲ ಹಾಗೂ ಕ್ಯೂರಿಂಗ್ ಸರಿಯಾಗಿ ಮಾಡಿಲ್ಲ ಹೀಗಾಗಿ ಬರೀ ಒಂದೇ ವಾರದಲ್ಲಿ ಈ ರಸೆಯಲ್ಲಿ ಬಿರುಕು ಕಾಣಿಸುತ್ತಿದೆ. ಹೀಗಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಳಪೆ ಮಟ್ಟದ ಕಾಮಗಾರಿ ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ಮಾಡಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ರಸ್ತೆ ಅಭಿವೃದ್ಧಿಗೆ ಕ್ಷೇತ್ರದ ಶಾಸಕರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೋಟಿಗಟ್ಟಲೆ ಅನುದಾನ ತರುತ್ತಿದ್ದಾ–ರೆ. ಆದರೆ ಅಧಿಕಾರಗಳು ಹಾಗೂ ಗುತ್ತಿಗೆದಾರರ ಬೇಜವಾಬ್ದಾರಿಯಿಂದ ಅಭಿವೃದ್ಧಿ ಕೆಲಸಗಳು ಕಳಪೆ ಮಟ್ಟದಲ್ಲಿ ನಡೆದು ಕ್ಷೇತ್ರಕ್ಕೆ ಮತ್ತು ಸಚಿವರಿಗೆ ಕೆಟ್ಟ ಹೆಸರು ಬರುತ್ತಿದೆ. ಈ ಕೂಡಲೇ ಇದರಲ್ಲಿ ಭಾಗಿಯಾದ ಅಧಿಕಾರಿಗಳ ಹಾಗೂ ಗುತ್ತಿಗೆದಾರರ ವಿರುದ್ಧ ಕೂಡಲೇ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸಾಬಣ್ಣ ಭರಾಟೆ ಒತ್ತಾಯಿಸಿದ್ದಾರೆ.

# ಕರ್ತವ್ಯದ ಹಾದಿಯಲ್ಲೇ ಇಹಲೋಕ ತ್ಯಜಿಸಿದ ನಾಸೀರ್ ಹುಸೇನ್

• **ಮಲ್ಲಮ್ಮ ನುಡಿ ವಾರ್ತೆ ಉಡುಪಿ:**

ಸಾರ್ವಜನಿಕರ ಸ್ವಾಸ್ಥ್ಯ ಮತ್ತು ಸುರಕ್ಷತೆಯ ಆಶಯದೊಂದಿಗೆ ಆಯೋಜಿಸಲಾಗಿದ್ದ "ಫಿಟ್ನೆಸ್" ಅಭಿಯಾನವೊಂದು ಇಂದು ದುರಂತದಲ್ಲಿ ಅಂತ್ಯಗೊಂಡಿದೆ.

ಉಡುಪಿ ಜಿಲ್ಲಾ ಪೊಲೀಸರು ಹಮ್ಮಿಕೊಂಡಿದ್ದ "ನಮ್ಮ ಪೊಲೀಸ್ ನಮ್ಮ ಹೆಮ್ಮೆ" ಹಾಗೂ "ಡ್ರಗ್ಸ್ ಫ್ರೀ ಕರ್ನಾಟಕ" ಓಟದ ಸಂದರ್ಭದಲ್ಲಿ ಕುಂದಾಪುರ ಗ್ರಾಮಾಂತರ ಠಾಣಾಧಿಕಾರಿ ನಾಸೀರ್ ಹುಸೇನ್ ಅವರು ಹೃದಯಾಘಾತದಿಂದ ವಿಧಿವಶರಾಗಿದ್ದಾರೆ.

**ಘಟನೆಯ ವಿವರ:** ಇಂದು ಬೆಳಿಗ್ಗೆ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಜಾಗೃತಿ ಓಟದಲ್ಲಿ ನಾಸೀರ್ ಹುಸೇನ್ ಅವರು ಉತ್ಸಾಹದಿಂದ ಭಾಗವಹಿಸಿದ್ದರು. ಸಮಾಜಕ್ಕೆ ಆರೋಗ್ಯ ಮತ್ತು ಮಾದಕದ್ರವ್ಯ ಮುಕ್ತ ಕರ್ನಾಟಕದ ಸಂದೇಶ ನೀಡುವ ಉದ್ದೇಶದಿಂದ ಓಡುತ್ತಿದ್ದ ಸಂದರ್ಭದಲ್ಲಿ ಅವರು ಇದ್ದಕ್ಕಿದ್ದಂತೆ ಕುಸಿದು ಬಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದರು.



**ಇಲಾಖೆಗೆ ತುಂಬಲಾರದ ನಷ್ಟ:** ನಾಸೀರ್ ಹುಸೇನ್ ಅವರು ಕೇವಲ ಒಬ್ಬ ದಕ್ಷ ಅಧಿಕಾರಿಯಾಗಿರದೆ, ಇಲಾಖೆಯ ಪ್ರತಿಯೊಂದು ರಚನಾತ್ಮಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. "ಸಾರ್ವಜನಿಕರ ಸೇವೆಗಾಗಿ ಸದಾ ಸನ್ನದ್ಧ" ಎಂಬ ಪೋಲೀಸ್ ಇಲಾಖೆಯ ಧ್ಯೇಯವಾಕ್ಯವನ್ನು ಅವರು ತಮ್ಮ ಕೊನೆಯ ಕ್ಷಣದವರೆಗೂ ಪಾಲಿಸಿದ್ದಾರೆ.

**ವಯೋಮಾನದ ಪೊಲೀಸ್ ಸಿಬ್ಬಂದಿಗಳ ಫಿಟ್ನೆಸ್ ಕ್ರಮಗಳ ಬಗ್ಗೆ ಗಂಭೀರ ಚಿಂತನೆ ಅಗತ್ಯ:** ಪೊಲೀಸ್ ಇಲಾಖೆಯಲ್ಲಿ 40 ವರ್ಷ ಮೇಲ್ಪಟ್ಟ ಸಿಬ್ಬಂದಿಯನ್ನು ಕಠಿಣ ಓಟ ಮತ್ತು ತೀವ್ರ ಫಿಟ್ನೆಸ್ ತರಬೇತಿಗಳಿಗೆ ಒಳಪಡಿಸುವುದು ಅವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಚಿಂತನೆ ವ್ಯಕ್ತವಾಗುತ್ತಿದೆ.

ಪೊಲೀಸ್ ಇಲಾಖೆಯ ಕರ್ತವ್ಯಗಳು ಸ್ವಭಾವತಃ ದೈಹಿಕ ಹಾಗೂ ಮಾನಸಿಕ ಒತ್ತಡಗಳಿಂದ ಕೂಡಿರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ವಯಸ್ಸಾದ ಸಿಬ್ಬಂದಿಗಳ ದೈಹಿಕ ಸಾಮರ್ಥ್ಯ, ಆರೋಗ್ಯ ಸ್ಥಿತಿ ಮತ್ತು ವೈದ್ಯಕೀಯ ಸಲಹೆಗಳನ್ನು ಪರಿಗಣಿಸದೆ ಕಡ್ಡಾಯ ಫಿಟ್ನೆಸ್ ಪರೀಕ್ಷೆಗಳು ಅಥವಾ ತೀವ್ರ ತರಬೇತಿಗಳನ್ನು ಜಾರಿಗೊಳಿಸುವುದು ಅಪಾಯಕಾರಿ ಆಗಬಹುದು.

ಹೃದಯ, ರಕ್ತದೊತ್ತಡ ಹಾಗೂ ಇತರ ಆರೋಗ್ಯ ಸಮಸ್ಯೆಗಳ ಹಿನ್ನೆಲೆ ನೋಡಿದರೆ, ವಯಸ್ಸಿನ ಆಧಾರದ ಮೇಲೆ ಸೂಕ್ತ ಮಾರ್ಗಸೂಚಿಗಳನ್ನು ಜಾರಿಗೊಳಿಸುವುದು ಅಗತ್ಯವಾಗಿದೆ.

ಉನ್ನತ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ವೈದ್ಯಕೀಯ ತಪಾಸಣೆ ನಂತರವೇ ಫಿಟ್ನೆಸ್ ಪರೀಕ್ಷೆ ನಡೆಸುವಂತೆ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ಪೊಲೀಸರ ಆರೋಗ್ಯವೇ ಇಲಾಖೆಯ ಬಲ ಎಂಬುದನ್ನು ಮನನ ಮಾಡಿಕೊಳ್ಳಬೇಕಾಗಿದೆ.

# ಸದ್ಗೃಹಿಣಿ: ಮನೆಯ ಬೆಳಗುವ ನಂದಾದೀಪ



**ಮಾನ–ಸಮ್ಮಾನ**

• ಕಸ್ತೂರಿ ಡಿ ಪತ್ತಾರ
ಬೆಂಗಳೂರು

**ನಮಗಾಗಿ, ನಮ್ಮ ಸ್ವಂತಕ್ಕಾಗಿ ಒಂದಿಷ್ಟು ಸಮಯವನ್ನು ಮೀಸಲಿಡೋಣ**

ಹೆಣ್ಣೆಂದರೆ ಕೇವಲ ವ್ಯಕ್ತಿಯಲ್ಲ, ಅವಳು ಭಾವನೆಗಳ ಸಂಗಮ; ಬದುಕು, ಬಾಳು ಮತ್ತು ಬೆಳಕಿನ ಪ್ರತಿರೂಪ. ಒಬ್ಬ ಹೆಣ್ಣು ತನ್ನ ಜೀವಿತಾವಧಿಯಲ್ಲಿ ಹಲವಾರು ಪಾತ್ರಗಳನ್ನು ನಿಭಾಯಿಸಬೇಕಾಗುತ್ತದೆ. ಗಂಡನಿಗೆ ಅರ್ಧಾಂಗಿಯಾಗಿ, ಮಕ್ಕಳಿಗೆ ವಾತ್ಸಲ್ಯದ ತಾಯಿಯಾಗಿ, ಅತ್ತೆ–ಮಾವಂದಿರಿಗೆ ಅಕ್ಕರೆ–ಯ ಸೊಸೆಯಾಗಿ, ಮೈದುನ–ನಾದಿನಿಯರಿಗೆ ಮಾರ್ಗದರ್ಶಿಯಾಗಿ ಹಾಗೂ ಹುಟ್ಟಿದ ಮನೆಯಲ್ಲಿ ಅಕ್ಕ–ತಂಗಿಯಾಗಿ ಹೀಗೆ ವಿಭಿನ್ನ ಪಾತ್ರಗಳಲ್ಲಿ ಅವಳು ಪರಕಾಯ ಪ್ರವೇಶ ಮಾಡುತ್ತಾಳೆ.

ಗೃಹಿಣಿ ಎಂದರೆ ಮನೆಯ 'ಮ್ಯಾನೇಜ್‌ಮೆಂಟ್ ಗುರು' ಇದ್ದಂತೆ. ಮನೆಯ ಪ್ರತಿಯೊಂದು ಬೇಕು–ಬೇಡಗಳನ್ನು ಅರಿತು ನಿಭಾಯಿಸುವ ಅವಳು, ಒಬ್ಬ ದಕ್ಷ ಉದ್ಯೋಗಿಗಿಂತ ಕಡಿಮೆಯೇನಲ್ಲ. ಆದರೆ ದುರಂತವೆಂದರೆ, ಇಷ್ಟೆಲ್ಲಾ ಕೆಲಸ ಮಾಡುವ ಗೃಹಿಣಿಯ ಬಗ್ಗೆ ಇಂದಿಗೂ ಸಮಾಜದಲ್ಲಿ ಕೀಳುಭಾವನೆ ಇದೆ. "ಓದು ಒಕ್ಕಾಲು, ಬುದ್ಧಿ ಮುಕ್ಕಾಲು" ಎಂಬ ಗಾದೆಯಂತೆ ಮಹಿಳೆ ಚುರುಕು ಬುದ್ಧಿಯಿಂದ ಎಷ್ಟೇ ಶ್ರಮಿಸಿದರೂ, ಅವಳ ದುಡಿಮೆ ಅನೇಕ ಬಾರಿ ಗಣನೆಗೆ ಬರುವುದೇ ಇಲ್ಲ.

ಅವಳಿಗೆ ಎಚ್ಚರಗೊಳ್ಳಲು ಗಡಿಯಾರದ ಅಲಾರಾಮ್ ಬೇಕಿಲ್ಲ; ಏಕೆಂದರೆ ಅವಳ ಮನಸ್ಸಿನಲ್ಲಿ ಜವಾಬ್ದಾರಿಯ ಅಲಾರಾಮ್ ಸದಾ ಜಾಗೃತವಾಗಿರುತ್ತದೆ. ಬೆಳಗಿನ ತಿಂಡಿ, ಮನೆಯ ಸ್ವಚ್ಛತೆ, ಪೂಜೆ, ಅಡುಗೆ–ಹೀಗೆ ಇಡೀ ಮನೆಯ ಜವಾಬ್ದಾರಿ ಅವಳ ಹೆಗಲ ಮೇಲಿರುತ್ತದೆ. ತನ್ನ ಮನಸ್ಥಿತಿ ಹೇಗಿದ್ದರೂ ಪರವಾಗಿಲ್ಲ, ಮನೆಯವರ ಮನಸ್ಥಿತಿಯನ್ನು ಅರಿತು ಅವಳು ಹೆಜ್ಜೆ ಇಡುತ್ತಾಳೆ.

ಮನೆಯವರ ಆರೋಗ್ಯದ ಬಗ್ಗೆ ಅತಿಯಾದ ಕಾಳಜಿ ವಹಿಸುವ ಅವಳು, ಪೌಷ್ಟಿಕಾಂಶಯುಕ್ತ ಬಿಸಿಬಿಸಿ ಅಡುಗೆಯನ್ನು ಚಾಚೂ ತಪ್ಪದೆ ಉಣಬಡಿಸುತ್ತಾಳೆ. ಆದರೆ ಎಲ್ಲರಿಗೂ ಬಡಿಸುವ ಧಾವಂತದಲ್ಲಿ ತನ್ನ ಸ್ವಂತ ಊಟ–ತಿಂಡಿಯ ಕಡೆಗೆ ಗಮನ ಹರಿಸದೆ, ಇಂದು ಎಷ್ಟೋ ಗೃಹಿಣಿಯರು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ. ಗಂಡನ ಪ್ರಗತಿಗಾಗಿ, ಕುಟುಂಬದ ಗೌರವಕ್ಕಾಗಿ ಹಗಲಿರುಳು ಶ್ರಮಿಸುವ ಅವಳು ಮನೆಯ ನಂದಾದೀಪ.

ಸೂರ್ಯನಂತೆ ಹಗಲೆಲ್ಲಾ ನಿರಂತರವಾಗಿ ದಣಿದರೂ, ಸಂಜೆಯ ವೇಳೆಗೆ ಮುಗಿಯದ ನಗು ಮತ್ತು ಶಾಂತಿಯನ್ನು ಕಾಪಾಡಿಕೊಳ್ಳುವ ಅವಳು ಅರಳಿದ ಮಲ್ಲಿಗೆಯಂತೆ ಸುವಾಸನೆ ಬೀರುತ್ತಾಳೆ. ಕುಟುಂಬದ ಪ್ರತಿಯೊಬ್ಬರ ಯಶಸ್ಸಿಗೆ ಮೆಚ್ಚುಗೆ ಸೂಚಿಸುತ್ತಾ, ಖುಷಿಯನ್ನು ಹಂಚುವ ಗೃಹಿಣಿಯ ಶ್ರಮ ಅಮೂಲ್ಯವಾದುದು. ಹೆಣ್ಣಿಂದಲೇ ಜನನ, ಹೆಣ್ಣಿಂದಲೇ ಜೀವನ, ಹೆಣ್ಣಿಂದಲೇ ಪಾವನ ಅಲ್ಲವೇ?

"ಹೆಣ್ಣಿಗೇಕೆ ಕೆಲವು ನಿಯಮಗಳು, ಗಂಡಿಗೇಕೆ ಇಲ್ಲ?" ಎನ್ನುವ ಪ್ರಶ್ನೆ ಆದಿಕಾಲದಿಂದಲೂ ಕಾಡುತ್ತಲೇ ಇದೆ. ತಪ್ಪು ಇಲ್ಲದಿದ್ದರೂ ತಗ್ಗಿ–ಬಗ್ಗಿ ನಡೆಯಬೇಕೆನ್ನುವುದು ಎಷ್ಟು ಸರಿ? ಗಂಡು ತಗ್ಗಿ–ಬಗ್ಗಿ ನಡೆಯಬಾರದೇ? ಈ ಭೇದಭಾವವೇಕೆ? ಈಗಿನ ಕಾಲದಲ್ಲಿ ಗೃಹಿಣಿ ಯಾವುದೇ ಗಂಡಿಗಿಂತ ಕಡಿಮೆಯಿಲ್ಲ. ಅವಳು ಸರಿಸಮಾನವಾಗಿ ದುಡಿಯುತ್ತಾಳೆ, ಎಲ್ಲವನ್ನೂ ನಿಭಾಯಿಸುವ ಗುಣ ಹೊಂದಿದ್ದಾಳೆ. ಅವಳಿಗೂ ಮನಸ್ಸಿನಲ್ಲಿ ಸ್ವಂತ ಕನಸುಗಳಿರುತ್ತವೆ, ಏನನ್ನಾದರೂ ಸಾಧಿಸುವ ಹಂಬಲವಿರುತ್ತದೆ. ತನ್ನ ಕರ್ತವ್ಯಗಳನ್ನು ಅವಳು ಎಂದೂ ಮರೆಯದೆ ಮಾಡುತ್ತಾಳೆ. ಹೀಗಿದ್ದರೂ ದುಡಿಯುವ ಮಹಿಳೆಗೆ ಸಿಗುವ ಗೌರವ ಗೃಹಿಣಿಗೆ ಸಿಗುತ್ತಿಲ್ಲ. "ಯಾವಾಗಲೂ ಮನೆಯಲ್ಲೇ ಇರುತ್ತೀರಿ, ಹೊರಜಗತ್ತಿನ ಅರಿವಿಲ್ಲ" ಎಂದು ಅವಹೇಳನ ಮಾಡುವುದು ಇನ್ನೂ ನಿಂತಿಲ್ಲ.

ಗೃಹಿಣಿಯರೇ, ನೀವು ಎಚ್ಚೆತ್ತುಕೊಳ್ಳಿ. ಮೊದಲು ನಿಮ್ಮ ಸಮಯವನ್ನು ಸರಿಯಾಗಿ ವಿಂಗಡಿಸಿಕೊಳ್ಳಿ. ನಿಮ್ಮ ಸ್ವಂತ ಆಸಕ್ತಿಗಳಿಗಾಗಿ ಒಂದಿಷ್ಟು ಸಮಯವನ್ನು ಮೀಸಲಿಡಿ. ಮನೆಗೆಲಸದ ಜೊತೆಗೆ ತನಗೆ ಇಷ್ಟವಾದ ಯಾವುದೇ ವೃತ್ತಿ ಅಥವಾ ಹವ್ಯಾಸವಿರಲಿ, ಅದಕ್ಕೆ ಸಮಯ ಕೊಟ್ಟು ನಿಮ್ಮದೇ ಆದ ಒಂದು ಅಸ್ತಿತ್ವವನ್ನು (ಖಜಜಟಣುಣಥಿ) ಕಂಡುಕೊಳ್ಳಿ. ವಾರದಲ್ಲಿ ಒಂದು ದಿನವನ್ನು ನಿಮ್ಮ ಸ್ವಂತಕ್ಕೆ ಮೀಸಲಿಡಿ. ಅದು ಸಾಹಿತ್ಯ, ಸಂಗೀತ, ಚಿತ್ರಕಲೆ, ಸಂಘಟನೆ ಅಥವಾ ಸಮಾಜಮುಖಿ ಕೆಲಸವಾಗಿರಬಹುದು. ಇಲ್ಲವೇ ಮಹಿಳಾ ಮಂಡಳಿಯನ್ನು ಸೇರಬಹುದು.

ಈ ಡಿಜಿಟಲ್ ಯುಗದಲ್ಲಿ ಮೊಬೈಲ್ ಮೂಲಕವೇ ಸಂಘಟನೆ ಮತ್ತು ಸಂವಹನ ನಡೆಸಿ, ನಿಮ್ಮ ವೃತ್ತಿ–ಪ್ರವೃತ್ತಿಗಳಲ್ಲಿ ಅಭಿವೃದ್ಧಿ ಹೊಂದಲು ಸಾಕಷ್ಟು ಅವಕಾಶಗಳಿವೆ. ಸೂರ್ಯನಿಗೆ ಪ್ರತಿದಿನ ಯಾರೂ ಉತ್ಸಾಹ ತುಂಬಿ ಕಳುಹಿಸುವುದಿಲ್ಲ, ಅವನು ತನಗೆ ತಾನೇ ಬೆಳಗುತ್ತಾನೆ. ಹಾಗೆಯೇ ನಮಗೆ ನಾವೇ ಉತ್ಸಾಹ ತುಂಬಿಕೊಂಡು ಮುನ್ನುಗ್ಗಬೇಕು. ಮನೆಯಿಂದಲೇ ಕೆಲಸ ಮಾಡುವ ಹತ್ತು ಹಲವು ದಾರಿಗಳಿವೆ, ಮಾಡುವ ಮನಸ್ಸಿರಬೇಕಷ್ಟೇ. ಈಗಿನ ಕಾಲದಲ್ಲಿ ಹಳೆಯ ಕಾಲದಷ್ಟು ಕಟ್ಟುನಿಟ್ಟುಗಳಿಲ್ಲ. ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಳ್ಳದೆ, ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಂಡರೆ ಮನೆಯಲ್ಲೂ ಯಾರೂ ಅಡ್ಡಿಪಡಿಸುವುದಿಲ್ಲ.

ಗೃಹಿಣಿಯರು ತಮ್ಮ ಆಸಕ್ತಿಗಳ ಮೂಲಕ ವೈಯಕ್ತಿಕ ಹೊಣೆ ಹೊತ್ತು ಕಾರ್ಯನಿರ್ವಹಿಸಿದರೆ ಅವರೂ ವಿಶಿಷ್ಟ ವ್ಯಕ್ತಿಗಳಾಗುತ್ತಾರೆ. ಗೃಹಿಣಿಯಾಗಿದ್ದುಕೊಂಡೇ ಸಾಹಿತ್ಯ ಲೋಕದಲ್ಲಿ ಅಪ್ರತಿಮ ಸಾಧನೆ ಮಾಡಿದ ಹಿರಿಯರ ಉದಾಹರಣೆಗಳು ನಮ್ಮ ಮುಂದಿವೆ. ಜನಮೆಚ್ಚಿದ ಕಾದಂಬರಿಕಾರ್ತಿ ಎಂ.ಕೆ. ಇಂದಿರಾ, ಖ್ಯಾತ ಕಥೆಗಾರ್ತಿ ವೈದೇಹಿ, ಸಾಧಕಿ ಬಿ.ಟಿ. ಲಲಿತಾ ನಾಯಕ್ ಮುಂತಾದವರು ಗೃಹಿಣಿಯರಾಗಿದ್ದುಕೊಂಡೇ ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಿನುಗಿದವರು. ಅಂದಮೇಲೆ, ಅಂತಹ ಸಾಧನೆ ಮಾಡುವ ಶಕ್ತಿ ನಿಮಗೂ ಇದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)